
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

11 ನವೆಂಬರ್ 2015 ಪುಟ 20 ರೂ. 15/-

ಲಂಕೇಶರ 'ಸಂಕ್ರಾಂತಿ' ಆಹಾರ ಸಂಸ್ಕೃತಿ ಪ್ರಶ್ನೆಗಳು



ಸೋಸಲೆ ಮಠದ ಕ್ವಾಟ್ಲೆ ಸ್ವಾಮಿ

ಮೈಷುಗರ್




ರಾಜಕಾರಣಿಗಳ ಜುಗಲ್‌ಬಂದಿ

ರಾಘು ಮಣಿಸಿದ ಬೀಟಿ ಹೆಗ್ಗಡೆ




ಕಳಸಾ-ಬಂಡೂರಿ



ಪರಾವಲಂಬಿ ಕೀಟಗಳು

ಸುಳ್ಳನ್ನು ಸುಳ್ಳೆಂದು ಸಾಬೀತುಮಾಡಬೇಕಿರುವ ಸವಾಲ್

ಅಂಚಿನಿಂದ....



ಡಾ.ವಾಸು ಎಚ್.ವಿ.

ಗೆಳೆಯರೊಬ್ಬರು ಫೋನ್ ಮಾಡಿ ಆರೆಸ್ಸೆಸ್‌ನ ವಿದ್ಯಾರ್ಥಿ ಸಂಘಟನೆಯ ಹೇಳಿಕೆಯೊಂದರ ಕುರಿತು ಗಮನ ಸೆಳೆದರು. ದಾದ್ರಿಯಲ್ಲಿ ನಡೆದ ಕೊಲೆಯು ದನದ ಮಾಂಸದ ವಿಚಾರಕ್ಕೆ ಅಲ್ಲ, ಬದಲಿಗೆ ಆತನ ಇಬ್ಬರು ಮಕ್ಕಳೂ ಲವ್‌ಜಿಹಾದ್‌ನಲ್ಲಿ ನಿರತರಾಗಿದ್ದರು; ಆ ಸಂದರ್ಭದ ಘರ್ಷಣೆಯಲ್ಲಿ ಆತ ಸತ್ತು ಹೋದ ಎಂದ ಎಬಿವಿಪಿ ಹೇಳಿದೆ. ಅದಕ್ಕೆ 'ಸಮಾನ ಮನಸ್ಕ' ಕನ್ನಡ ದೈನಿಕವೊಂದರಲ್ಲಿ 'ಒಳ್ಳೆಯ ಕವರೇಜ್' ನೀಡಲಾಗಿದೆ. ಕೋಮು ಸೌಹಾರ್ದದ ಕೆಲಸದಲ್ಲಿ ಹಗಲಿರುಳೂ ತೊಡಗಿಕೊಂಡಿರುವ ಇನ್ನೊಬ್ಬ ಗೆಳೆಯರು ಹೇಳಿದ ಸಂಗತಿಯೂ ಆಶ್ಚರ್ಯ ಹುಟ್ಟಿಸಿತು. ಅದು ರಾಘವೇಶ್ವರ ಸ್ವಾಮಿಯ ಕುರಿತಾಗಿ. ಈ ರಾಘವೇಶ್ವರ ಮಾಡಿದ್ದು ಅತ್ಯಾಚಾರವೋ ಅಲ್ಲವೋ ಎಂಬ ಬಗ್ಗೆ ಜನರಿಗೆ ಗೊಂದಲವಿರಬಹುದಾದರೂ, ಆತ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಮಹಿಳೆಯರ ಜೊತೆ ಲೈಂಗಿಕ ಸಂಬಂಧ ಹೊಂದಿದ್ದಾನೆ ಎಂಬುದಂತೂ ಖಚಿತವಾಗಿರುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿತ್ತು. ಆದರೆ, ರಾಘವೇಶ್ವರ ಸ್ವಾಮಿಯ ಪರವಾಗಿ 'ಗಣನೀಯ' ಸಂಖ್ಯೆಯ ಮಹಿಳೆಯರೂ ವಕಾಲತ್ತು ವಹಿಸಿ ಮಾತನಾಡುತ್ತಾರೆ; ಅದಕ್ಕೆ ಅವರದ್ದೇ ಆದ ವಿವರಣೆಯೂ ಇದೆ ಎಂಬುದನ್ನು ಆ ಗೆಳೆಯರು ನನಗೆ ಮನವರಿಕೆ ಮಾಡಿಕೊಟ್ಟರು. ವರ್ಷಗಳ ಕಾಲ ನಿರಂತರವಾಗಿ ನಡೆದ ಒಂದು ಬಗೆಯ ಪ್ರಚಾರದಿಂದ ಸಂಬಂಧಪಟ್ಟವರು ಇದನ್ನು ಸಾಧಿಸಿದ್ದಾರೆ.

ಕಲ್ಬುರ್ಗಿಯವರ ಹತ್ಯೆಯ ನಂತರ ಇದೇ ಅಂಕಣದಲ್ಲಿ ಒಂದು ಬರಹವನ್ನು ಬರೆಯಲಾಗಿತ್ತು. ಈ ಹತ್ಯೆಯನ್ನು ಅವರು ನಂಬಿಕೊಂಡಿದ್ದ ವಿಚಾರಗಳಿಗಾಗಿ ಬಲಪಂಥೀಯ ಶಕ್ತಿಗಳು ಮಾಡಿದ್ದಾರೆಂದು ಹೇಳುವುದು ತಪ್ಪು ಎಂಬ ಕೆಲವು ಹಿರಿಯ ಚಿಂತಕರ ಅಭಿಪ್ರಾಯಕ್ಕೆ ಆ ಬರಹ ತಕರಾರುಗಳನ್ನು ಎತ್ತಿತ್ತು. ಈ ಹಿರಿಯ ಚಿಂತಕರ ಆಲೋಚನೆಯು ಸದುದ್ದೇಶದಿಂದ ಕೂಡಿತ್ತು. ಪೊಲೀಸ್ ತನಿಖೆ ಸಂಪೂರ್ಣವಾಗದೇ ಇಂತಹ ಅಭಿಪ್ರಾಯವನ್ನು ಸಾರ್ವಜನಿಕವಾಗಿ ಪ್ರಕಟಿಸುವುದರಿಂದ ಆಗಬಹುದಾದ ಸಮಸ್ಯೆಯ ಕುರಿತು ಅವರು ನಮ್ಮ ಗಮನ ಸೆಳೆಯುತ್ತಿದ್ದರು. ಆದರೆ, ನಾವಿರುವ ಸಂದರ್ಭವು ದಿನೇದಿನೇ ಕ್ರೂರವಾಗುತ್ತಿರುವ ಹಾಗೂ ಎಲ್ಲಾ ತರ್ಕ ಮತ್ತು ಸದುದ್ದೇಶಗಳನ್ನು ದಾಟಿ ಆಕ್ರಮಣಕಾರೀ ಪ್ರವೃತ್ತಿಯೇ ವಿಜೃಂಭಿಸುತ್ತಿರುವ ಸಂದರ್ಭವಾಗಿದೆ. ಈ ಸಂದರ್ಭವನ್ನು ಬಿಟ್ಟು ನಾವೂ ಇಲ್ಲ, ಸತ್ಯವನ್ನೇ ಹತ್ತಕ್ಕಿಂತ ಹೆಚ್ಚು ಸಾರಿ ಹೇಳುವ ಪ್ರಯತ್ನವೂ ನಮ್ಮಿಂದ ಆಗುತ್ತಿಲ್ಲ, ಆದರೆ, ಸುಳ್ಳನ್ನು ಸತ್ಯದ ತಲೆ ಮೇಲೆ ಹೊಡೆಯುವುದನ್ನೇ ಕೆಲಸ ಮಾಡಿಕೊಂಡಿರುವವರು ಅಭಿಪ್ರಾಯ ಕ್ರೋಢೀಕರಣಕ್ಕಾಗಿ ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಹೀಗಿರುವಾಗ ನಮ್ಮ ವಿಶ್ಲೇಷಣಾ ವಿಧಾನವು ಸಂದರ್ಭದಿಂದ ಹೊರತಾಗಿರಬಾರದು ಎಂದು ಆ ಬರಹ ಪ್ರತಿಪಾದಿಸಿತ್ತು.

ಇದೇ ಸಂಗತಿಯನ್ನು ಮತ್ತೆ ಬರೆಯಲು ಕಾರಣವಿದೆ. ದಾದ್ರಿ ಘಟನೆಯನ್ನು ಸಂಘಪರಿವಾರದ ವಿವಿಧ ಬಾಹುಗಳು ಮತ್ತು ಬಾಯಿಗಳು ನಿಭಾಯಿಸುತ್ತಿರುವ ರೀತಿ ಗಾಬರಿ ಹುಟ್ಟಿಸುವಂತಿದೆ. ಇದೇ ಅವಧಿಯಲ್ಲಿ ನಡೆದ ದಲಿತರೊಬ್ಬರ ಸಜೀವ ದಹನ ಹಾಗೂ ಇಬ್ಬರು ದಲಿತ ಮಕ್ಕಳ ಸಜೀವ ದಹನಗಳೂ ದಾದ್ರಿಯ ಒಟ್ಟಾರೆ ಚರ್ಚೆಯಲ್ಲಿ ಮರೆಯಾದವು. ಆ ಮೂಲಕವೂ ಅವರು ದಲಿತರನ್ನು ಸುಟ್ಟ ಹಾಗೆಯೂ ಆಯಿತು, ಆ ಬಗ್ಗೆಯೇ ಚರ್ಚೆ ಫೋಕಸ್ ಆಗದಂತೆ ನೋಡಿಕೊಂಡಿದ್ದೂ ಆಯಿತು. ಇಲ್ಲಿ ಮತ್ತೊಂದು ಪ್ರಶ್ನೆಯೂ ಉದ್ಭವಿಸುತ್ತದೆ. ದಾದ್ರಿಯ ಘಟನೆಯಲ್ಲಿ ಸಂಘಪರಿವಾರ ಭಾಗಿಯಾಗಿರುವುದು ಸ್ಪಷ್ಟವಿದೆ. ಆದರೆ, ದಲಿತರ ದಹನದಲ್ಲಿ ಇರುವುದು ಮೇಲ್ಜಾತಿಯವರು ತಾನೇ? ಅದರಲ್ಲೂ ಒಂದು ಘಟನೆ ನಡೆದಿರುವ ಉತ್ತರ ಪ್ರದೇಶದಲ್ಲಿ ಆಳುತ್ತಿರುವುದು ಸಮಾಜವಾದಿ ಪಕ್ಷ. ಹೀಗಾಗಿ ಅದನ್ನು ಸಂಘಪರಿವಾರ ಮಾಡಿದೆ ಎಂದು ಹೇಳಲು ಹೇಗೆ ಸಾಧ್ಯ? ಈ ರೀತಿಯಾಗಿ ಸದಾ 'ಸ್ವ-ಸಂದೇಹ'ದಲ್ಲಿದ್ದುಕೊಂಡು ನಾವು ಫ್ಯಾಸಿಸ್ಟ್ ಸುಳ್ಳುಕೋರರಿಗೆ ಅನುಕೂಲ ಮಾಡಿಕೊಡುತ್ತಾ ಇರಬಹುದು. ದಲಿತರ ದಹನದಲ್ಲಿ ಸಂಘಪರಿವಾರದ ನೇರ ಪಾತ್ರವಿದ್ದ ಬಗ್ಗೆ ಬಂದ ವರದಿಗಳನ್ನು ಇದುವರೆಗೂ ನೋಡಿಲ್ಲವೆಂಬುದು ನಿಜ. ಅದೇ ರೀತಿ ಇಡೀ ದೇಶದ ತುಂಬಾ ಪ್ರತಿಭಟನೆಗಳನ್ನು ಆಯೋಜಿಸುವ, ಪ್ರಾಯೋಜಿಸುವ ಸಾಮರ್ಥ್ಯವುಳ್ಳ ಸಂಘಪರಿವಾರವು, ದಲಿತರ ದಹನದ ಎರಡೂ ಪ್ರಕರಣಗಳ (ಅದರಲ್ಲಿ ಒಂದು ಅವರು ಆಳ್ವಿಕೆಯಲ್ಲಿಲ್ಲದ ರಾಜ್ಯದಲ್ಲಿ ಸಂಭವಿಸಿದೆ!) ವಿರುದ್ಧ ಪ್ರತಿಭಟನೆ ಮಾಡಿದ ಒಂದೇ ಒಂದು ನಿದರ್ಶನ ಕಂಡು ಬರಲಿಲ್ಲ. ಇದು ಏನು ತೋರಿಸುತ್ತದೆ?

ಹಾಗಾದರೆ, ನಾವು ಸಂಘಪರಿವಾರದ ವಿರುದ್ಧ ಸುಳ್ಳು ಹೇಳಿ ಜನಾಭಿಪ್ರಾಯ ರೂಪಿಸಬೇಕೇ? ಅಥವಾ ದಾದ್ರಿಯಂತಹ, ಸಜೀವ ದಹನದಂತಹ ಪ್ರಕರಣಗಳು ಬಂದಾಗ ಅದರಲ್ಲಿರಬಹುದಾದ ಅಸ್ಪಷ್ಟತೆಗಳನ್ನು ಮರೆತು ಏಕಪಕ್ಷೀಯವಾಗಿ ಕೂಗಾಡಬೇಕೇ? ಇಲ್ಲ, ಸುಳ್ಳಿನ ಮೇಲೆ ಏನನ್ನೂ ಕಟ್ಟಬಾರದು. ಆದರೆ, ಸತ್ಯವನ್ನು ನಾವು ಎಷ್ಟು ಗಟ್ಟಿಯಾಗಿ ಹೇಳಲು ಸಾಧ್ಯವಾಗಿದೆ? ಅತ್ಯಂತ ಮುಖ್ಯವಾದ ಸತ್ಯಗಳನ್ನಾದರೂ ನಾವು ಪದೇ ಪದೇ ಹೇಳಲು ಸಾಧ್ಯವಾಗಿದೆಯೇ? ಸಿಂಧಗಿಯಲ್ಲಿ ಪಾಕಿಸ್ತಾನದ ಬಾವುಟವನ್ನು ಹಾರಿಸಿ ಕೋಮುಗಲಭೆಯನ್ನು ಪ್ರಚೋದಿಸಿದ ಪ್ರಕರಣದಲ್ಲಿ ಶ್ರೀರಾಮಸೇನೆಯವರನ್ನು ಬಂಧಿಸಲಾಯಿತು. ಅದನ್ನು ಮಾಡಿದ್ದು ನಾವಲ್ಲ ಆರೆಸ್ಸೆಸ್‌ನವರು ಎಂದು ಮುತಾಲಿಕ್ ಹೇಳಿದ್ದೂ ಆಯಿತು. ಉಳಿದ ಪ್ರಕರಣಗಳಲ್ಲಿ ಪೊಲೀಸರು ಹೇಳುವವರೆಗೆ ನಾವು ಸುಮ್ಮನಿರಬೇಕು ಎಂದುಕೊಂಡೆವು ಎಂದಾದಲ್ಲಿ, ಇಲ್ಲಿ ಪೊಲೀಸರು ಹೇಳಿದ ಮೇಲೂ ಅದು ಆಗಬೇಕಾದಷ್ಟು ಸುದ್ದಿಯಾಗಲಿಲ್ಲವೇಕೆ? ಅಥವಾ ಮುತಾಲಿಕ್ ಆರೆಸ್ಸೆಸ್‌ನವರು ಎಂದು ಹೇಳಿದ್ದರಿಂದ, ಪಾಪ ಮುತಾಲಿಕ್‌ನನ್ನು ಅನಗತ್ಯವಾಗಿ ಬಲಿಪಶು ಮಾಡಿರಬಹುದು ಎಂದು ಭಾವಿಸಿದೆವೇ? ಆರೆಸ್ಸೆಸ್‌ನವರು ಎಂದು ಪೊಲೀಸರು ಹೇಳದೇ ಇದ್ದುದರಿಂದ ಅದನ್ನೂ ನಾವು ಬಹಿರಂಗವಾಗಿ ಹೇಳಬಾರದು ಎಂದುಕೊಂಡೆವೇ?


ದಾದ್ರಿಯ ಕುರಿತಾಗಿ ಸಂಘಪರಿವಾರದಿಂದ ಹತ್ತು ವಿವಿಧ ಬಗೆಯ ಮಾತುಗಳು ಹೊರಬಂದಿವೆ. ಅತ್ಯುನ್ನತ ಸ್ಥಾನಗಳಿಂದಲೇ ಬಂದಿವೆ. 'ಕೊಂದಿದ್ದು ಸರಿ, ಮುಂದೆಯೂ ಕೊಲ್ಲುತ್ತೇವೆ', 'ಗೋಮಾಂಸವೆಂದು ತಪ್ಪಾಗಿ ತಿಳಿದು ಕೊಂದಿದ್ದಾರೆ', 'ಈ ದೇಶದಲ್ಲಿ ಮುಸ್ಲಿಮರು ಇರಬೇಕಿದ್ದಲ್ಲಿ ಗೋಮಾಂಸ ತಿನ್ನುವುದನ್ನು ಬಿಡಬೇಕು', 'ಅಸಹಿಷ್ಣುತೆ ತಪ್ಪು, ಅದನ್ನು ವಿಚಾರದಿಂದ ಎದುರಿಸಿ', 'ಮೌನ'. ಪ್ರಧಾನಿ, ಹಣಕಾಸು ಮಂತ್ರಿ, ಬಿಜೆಪಿ ಮುಖ್ಯಮಂತ್ರಿ, ಸಂಸದ, ಮಂತ್ರಿ ಈ ರೀತಿಯ ಸ್ಥಾನಗಳಿಂದ ಹೊರಟಿರುವ ಇಂತಹ ಮಾತುಗಳು ಎಲ್ಲವೂ ಸೇರಿದರೆ ಏನು ಸಾಧನೆಯಾಗಬೇಕೋ ಅದು ಸಾಧಿತವಾಗುತ್ತದೆ. ಬಹಳ ವ್ಯವಸ್ಥಿತವಾಗಿ ಕಟ್ಟಿಕೊಂಡಿರುವ ಪ್ರಚಾರ ವ್ಯವಸ್ಥೆ ಇದಕ್ಕೆ ಪ್ರಧಾನ ಕಾರಣ ಎನ್ನಬಹುದಾದರೂ, ಇದನ್ನು ಸಾಧ್ಯವಾಗಿಸುವುದು ಸುಳ್ಳನ್ನು ಹೇಳಲು ಯಾವ ಅಳುಕನ್ನೂ ಹೊಂದಿರದ ಮನಸ್ಥಿತಿಯಾಗಿದೆ.

ಈ ರೀತಿ ಸುಳ್ಳುಗಳನ್ನು ಹೆಣೆಯುವುದು ಮನುಷ್ಯರಿಗೆ ಹೇಗೆ ಸಾಧ್ಯ? ಸಾಧ್ಯವಿದೆ. ಮನುಷ್ಯರ ಮನಸ್ಸು ... ಮಾಡುವ ರೀತಿಯಲ್ಲಿ ಅದರ ಸಾಧ್ಯತೆ... ಹುಡುಕಬಹುದು. ಚಳವಳಿಯಲ್ಲೂ ಗಂಭೀ... ತೊಡಗಿಕೊಂಡಿದ್ದ ಒಬ್ಬ ಸ್ನೇಹಿತರು ಒಮ್ಮೆ ... ಒಂದು ಸಾಧ್ಯತೆಯನ್ನು ತೋರಿಸಿದಾಗ ... ಆಘಾತವಾಯಿತು. ಅವರ ಮೇಲೆ ಭ್ರಷ್ಟಾ... ಆರೋಪವಿತ್ತು, ಅದು ಕೇವಲ ಆರೋಪವಾಗಿ... ವಾಸ್ತವವಾಗಿತ್ತು, ಅದನ್ನು ಇನ್ನೊಬ್ಬ ಗೆಳೆಯ ಬಹಿರ... ಹೇಳಲು ಆರಂಭಿಸಿದ್ದರು. ಅದನ್ನು ಎದುರಿಸು... ವಿಧಾನದ ಕುರಿತು ಆರೋಪ ಹೊತ್ತಿದ್ದ ಗೆಳೆಯ ... ಹೀಗೆ. 'ಹೌದು, ಪ್ರತಿಯಾಗಿ ಆತನ ಬಗ್ಗೆ ... ನನಗೇನೂ ಇಲ್ಲ ಎಂಬುದು ಗೊತ್ತು, ಆದರೂ ... ಮೇಲೆ ಇದ್ದ ಒಂದು ಕೇಸನ್ನು ನಾನು ತಿರುಚಿ ಹೇ... ಆತ ರಾಬರಿ ಮಾಡಲು ಹೋಗಿ ಸಿಕ್ಕಿ ಹಾಕಿ... ಸದರಿ ಕೇಸಾಯಿತು ಎಂದು ಪ್ರಚಾರ ಮಾ... ಗೊತ್ತಿಲ್ಲದ ಜನರು ಇದ್ದರೂ ಇರಬಹುದೇನೋ ... ನಂಬುತ್ತಾರೆ. ನನ್ನ ಉಳಿವಿಗೆ ಇದು ಅನಿವ... ಮನುಷ್ಯರು ಈ ಮಟ್ಟಕ್ಕೆ ಇಳಿಯಬಹುದೇ ಎಂ... ಹುಟ್ಟಿಕೊಂಡಿತು. ಏಕೆಂದರೆ, ಈತ ಅದಕ್ಕೆ ಸ್ವಲ್ಪ ... ಹಿಂದಿನವರೆಗೂ ಪ್ರಗತಿಪರ ಚಳವಳಿಯಲ್ಲಿ ಸಕ್ರಿಯ... ಇಂತಹ ಅಪಾಯ ಇರುವುದರಿಂದಲೇ ನಾವು ಇ... ಬಗ್ಗೆ ಖಚಿತವಾಗಿ ಗೊತ್ತಿಲ್ಲದೇ ಎಂತಹ ಸಂದರ್ಭ... ಅರ್ಧಸತ್ಯ ಹೇಳಬಾರದು ಎಂದು ಕಲ್ಬುರ್ಗಿಯವರ ... ವಿಚಾರದಲ್ಲಿ ಕೆಲವು ಹಿರಿಯರು ಹೇಳಿದ್ದಿರಬೇಕು...

ಮನುಷ್ಯರ ಮನಸ್ಸು ಕೆಲಸ ಮಾಡುವ ಇನ್ನೂ... ವಿಧಾನವಿದೆ. ಅದೇನೆಂದರೆ, ಗೊತ್ತಿದ್ದೋ ಗೊತ್ತಿಲ್ಲ... ಒಂದು ಅರೆ ಸತ್ಯವನ್ನು ಸೃಷ್ಟಿಸುತ್ತದೆ. ಅದನ್ನು ... ಮಾಡುತ್ತಾ ಹೋಗುತ್ತದೆ; ತನ್ನ ಮನಸ್ಸಿನಲ್ಲೇ ಪದ... ಹೇಳಿಕೊಳ್ಳುತ್ತಾ ಹೋಗುತ್ತದೆ. ತನ್ನದೇ ಗುಂಪಿನ... ಸುತ್ತಾ ಇರುವುದು ಇಲ್ಲದಿರುವುದು ಎಲ್ಲವನ್ನೂ ... ಮಾಡಿ ಪದೇ ಪದೇ ಚರ್ಚೆ ಮಾಡುತ್ತದೆ. ಅಂತಿ... ಅದು ನಿಜಕ್ಕೂ ಪರಮಸತ್ಯ ಎಂದು ತಾನೇ ನಂಬಿಕೆ... ಆರೆಸ್ಸೆಸ್‌ನಲ್ಲಿ 'ಸತ್ಯ'ವನ್ನು ನಂಬಿಕೊಂಡು ... ಮಾಡುತ್ತಿರುವವರ ಪರಿ ಈ ರೀತಿಯದ್ದು. ಇ... ಸಾಮಾನ್ಯವಾಗಿ ತಾರ್ಕಿಕವಾಗಿ ಮಾತನಾಡುವ, ಮ... ಇತರ ಗುಣಗಳನ್ನು ಹೊಂದಿರುವ ವ್ಯಕ್ತಿಗಳೂ ... ವಿಚಾರಗಳ ಬಗ್ಗೆ ಬಂದಕೂಡಲೇ ಇದ... ಅತಾರ್ಕಿಕವಾಗಿಬಿಡುವುದು ಹೇಗೆ ಸಾಧ್ಯ? ವ್ಯಕ್ತಿ... ಅನುಭವದಲ್ಲೇ, ಪ್ರಗತಿಪರ ಚಳವಳಿಯ ಭಾಗವಾ... ಮಾಡುತ್ತಿರುವ ಕೆಲವು ಗೆಳೆಯರು ನಡೆಸಿದ, ನಡೆ... 'ಕಾರ್ಯಾಚರಣೆ'ಯ ಮೋಡಸ್ ಒ... (ಕಾರ್ಯಾಚರಣಾ ವಿಧಾನ) ನೋಡಿದ ಮೇ... ಸಾಧ್ಯ ಎನಿಸಿದೆ.

ಆದರೆ ಈ ಸವಾಲನ್ನು ಎದುರಿಸಲೇಬೇಕು ... ಮೂಲಕ ಎದುರಿಸಬೇಕು. ನಮ್ಮ ಸತ್ಯದ ಬ... ಬೇಕು. ಆದರೆ ವಿಪರೀತ ಸ್ವ-ಸಂದೇಹದಿಂದ ... ಪ್ರಯೋಜನವಾಗದು. ಅದು ನಮ್ಮನ್ನೇ ತಿಂದು... ಅಪಾಯವೂ ಇದೆ. ಕಲ್ಬುರ್ಗಿಯವರ ಹತ್ಯೆ ಮಾ... ಇಂಥವರೇ ಎಂದು ಹೇಳಬಾರದಾದರೂ, ಆ ... ಪರೋಕ್ಷವಾಗಿ ಸಮರ್ಥಿಸಿದವರೆಲ್ಲರೂ ಹತ್ಯೆಗೆ ... ತಂದುಕೊಡುತ್ತಿದ್ದಾರೆ ಎಂದು ಹೇಳಲು ಹಿಂಜರಿ... ಅಷ್ಟೇ.

ಸುಳ್ಳನ್ನು ಸುಳ್ಳೆಂದು ಸಾಬೀತುಮಾಡುವುದ... ಪ್ರಚಾರ ಯಂತ್ರಾಂಗದ ಪ್ರಶ್ನೆ ಮಾತ್ರವ... ಮನೋಭಾವದ ಪ್ರಶ್ನೆಯೂ ಆಗಿದೆ. ಸತ್ಯದ ... ಮೇಲೆಯೇ ಸುಳ್ಳನ್ನು ಸುಳ್ಳು ಎಂದು ಸಾಬೀತುಮ... ಆದರೆ, ಸತ್ಯವನ್ನು ಪ್ರಚಾರಕ್ಕೆ ತರಬೇಕು ... ಗೊತ್ತಿರುವಷ್ಟು ಸತ್ಯವನ್ನಾದರೂ ಸತತವಾಗಿ ... ತರಬೇಕು. ಅದಕ್ಕಾಗಿ ಅರ್ಧಸತ್ಯ, ಮುಕ್ಕಾಲ... ಪೂರ್ಣ ದುರುದ್ದೇಶದಿಂದ ಪೊರೆ ಕಟ್ಟಿಕೊಂಡಿ... ಅದರಿಂದ ಹೊರಗೆ ತರಲು ಬೇಕಾದ ವಿವಿಧ ವಿ... ಶೋಧಿಸಬೇಕು. ಹೇಗೆ ಸುಳ್ಳುಕೋರರಿಗೆ ... ವಿಧಾನವಿಲ್ಲವೋ, ಸುಳ್ಳಿನ ಪೊರೆಯನ್ನು ... ಒಂದೇ ವಿಧಾನವಿರಲು ಸಾಧ್ಯವಿಲ್ಲ, ಇದು ... ಆಗುವಂಥದ್ದೂ ಅಲ್ಲ, ಸಮಾಜದಲ್ಲಿ ಒಂದು ... ಸಾಕಷ್ಟು ಹರಡಲು ಬಿಟ್ಟಿದ್ದರಲ್ಲಿ ನಮ್ಮ ಸಮಷ್ಟಿ ... ಈಗ ಅದರ ವಿರುದ್ಧ ನಿರಂತರವಾದ, ಸತ್ಯ... ನಿಂತಿರುವ, ಸೃಜನಶೀಲ ವಿಧಾನಗಳುಳ್ಳ ... ಪ್ರಯತ್ನವು ನಡೆಯಬೇಕಿದೆ. ಇಂತಹ ವಿ... ಶೋಧಿಸುತ್ತಾ, ಪ್ರತಿವಾಳಿಯನ್ನು ಸಂಯ... ಕಾರ್ಯಾಚರಣಾ ವಿಧಾನ ನಮ್ಮದಾಗಬೇಕಿದೆ...




...ಕಲವ್ಯನ ವಂಶಸ್ಥ ಹುಚ್ಚಂಗಿ ಪ್ರಸಾದ್

ಕಂಡಹಾಗೆ

• ಗೌರಿ ಲಂಕೇಶ್

editorlankesh@gmail.com



...ೇವದಾಸಿ ತಾಯಿಗೆ ಮತ್ತು ದಲಿತ ಕೂಲಿಕಾರ್ಮಿಕ ...ಜನಿಸಿದ ಹುಚ್ಚಂಗಿ ಪ್ರಸಾದ್ ತನ್ನ 23 ವರ್ಷಗಳ ...ವಲ್ಲಿ ಕಿತ್ತು ತಿನ್ನುವ ಬಡತನ, ಅಸ್ಪೃಶ್ಯತೆ, ಅಸಹಾಯಕತೆ, ...ಾನ ಇತ್ಯಾದಿ ಸಾಮಾಜಿಕ ಮತ್ತು ಆರ್ಥಿಕ ...ಂಗಳನ್ನು ಅನುಭವಿಸಿದವರು. ಆ ಕಾರಣಕ್ಕಾಗಿಯೇ ...ಯುವ ರಕ್ತ ಕೋಪದಿಂದ ಕುದಿಯುತ್ತದೆ. ತಮ್ಮ ...ಾವಗಳನ್ನು ಪ್ರಸಾದ್ ಅಭಿವ್ಯಕ್ತಿಸುವುದು ತಮ್ಮ ...ೆ ಮೂಲಕ.

...ತ್ತು ವರ್ಷದ ಬಾಲಕನಾಗಿದ್ದಾಗಲೇ ಪ್ರಸಾದ್ ...ಜಾತಿಯ ಕುಟುಂಬವೊಂದರ ಮನೆಯಲ್ಲಿ ...ಳು ಆಗಿದ್ದವರು. ಆದರೆ ಅದೃಷ್ಟವಶಾತ್ ಅವರು ...ಸರ್ಕಾರಿ ಅಧಿಕಾರಿಗಳ ಕಣ್ಣುಗಳಿಗೆ ಬಿದ್ದಿದ್ದರಿಂದ ...ನ್ನ ಜೀತದಿಂದ ಹೊರತಂದು 'ಚಿಣ್ಣರ ಲೋಕ' ...ನೆಯಡಿ ಶಾಲೆಗೆ ಸೇರಿಸಲಾಯಿತು. ಅಕ್ಷರಜ್ಞಾನ ... ಅವರ ಕಣ್ಣುಗಳನ್ನು ತೆರೆಸಿತಲ್ಲದೆ ಅವರಿಗೆ ನಮ್ಮ ...ದಲ್ಲಿ ಹಾಸುಹೊಕ್ಕಾಗಿರುವ ಜಾತಿ ವ್ಯವಸ್ಥೆ ಎಷ್ಟು ...ವಾದದ್ದು ಎಂದೂ ಅರಿವಿಗೆ ತಂದಿತು.

...ಗೀಗ ಓದು ಮತ್ತು ಬರಹವನ್ನು ಕಲಿತಿರುವ ...ದಲಿತ ಯುವಕರಂತೆ ಪ್ರಸಾದ್ ಕೂಡ ಬಾಬಾ ...ರ್ ಅಂಬೇಡ್ಕರ್ ಅವರ ಬರಹಗಳನ್ನು ಓದಿ ...ತರಾದವರು. ಆ ಕಾರಣಕ್ಕಾಗಿಯೇ ಪ್ರಸಾದ್ ಅವರಿಗೆ ...ಎಸ್.ಭಗವಾನ್ ಅಂದರೆ ಇಷ್ಟ. "ಯಾವುದನ್ನು ...ಡ್ಕರ್ ಅವರು ದಶಕಗಳ ಹಿಂದೆ ಹೇಳಿದ್ದರೋ, ...ಇವತ್ತು ಭಗವಾನ್ ಅವರು ಹೇಳುತ್ತಿದ್ದಾರೆ. ...ಲ್ಲಿ ತಪ್ಪೇನಿದೆ?" ಎಂದು ಪ್ರಶ್ನಿಸುವ ಪ್ರಸಾದ್ ಕಳೆದ ...ತಮ್ಮ ಮೊದಲ ಕವನ ಸಂಕಲನವಾದ 'ಒಡಲ ...' ಪ್ರಕಟಿಸಿದಾಗ ಅದರ ಬಿಡುಗಡೆಗೆ ಭಗವಾನ್ ...ರನ್ನೇ ಆಹ್ವಾನಿಸಿದ್ದರು. "ನನಗೆ ಭಗವಾನ್ ಅವರ ...ಧಾರೆ ಇಷ್ಟ. ಆದ್ದರಿಂದ ಅವರೇ ನನ್ನ ಪುಸ್ತಕವನ್ನು ...ಡೆ ಮಾಡಬೇಕೆಂದು ಆಶಿಸಿದೆ" ಎನ್ನುತ್ತಾರೆ ಪ್ರಸಾದ್. ...ೊದಲೇ ಭಗವಾನ್ ಕಂಡರೆ ಚೆಡ್ಡಿಗಳಿಗೆ ಆಗದು. ...ೆ ಭಗವಾನ್ ಜೊತೆ. ಈಗ ಕಣ್ಣುಬಿಡುತ್ತಿರುವ ... ಯುವಕವಿ ಪ್ರಸಾದ್ ಸೇರಿಕೊಂಡದ್ದು ಚೆಡ್ಡಿಗಳ ...ತ್ತಿಗೇರುವಂತೆ ಮಾಡಿತು. ಪ್ರಸಾದ್ ತಮ್ಮ ಹಿಂದೂ ...ವನ್ನು ಅವಮಾನಿಸುವ ಮೂಲಕ ತಮ್ಮ ನಂಬಿಕೆಗೆ ...ನ್ನುಂಟುಮಾಡಿದ್ದಾರೆ ಎಂದು ಹಿಂದೂ ಜಾಗರಣ ... ಮತ್ತು ಪ್ರಮೋದ್ ಮುತಾಲಿಕನ ಶ್ರೀರಾಮ ... ಸದಸ್ಯರು ಪೊಲೀಸರಿಗೆ ದೂರುಗಳನ್ನು ನೀಡಿದರು. ...ಿ ಪ್ರಸಾದ್ ಅವರ ಮೊಬೈಲಿಗೆ ಪದೇಪದೇ ಫೋನ್ ... ಬೆದರಿಕೆಗಳನ್ನು ಒಡ್ಡಿದರು. ಆದರೆ ಪ್ರಸಾದ್ ...ವುದಕ್ಕೂ ಹೆದರಲಿಲ್ಲ. ಮಾತ್ರವಲ್ಲ ಅವರ 'ಒಡಲ



ಕಿಚ್ಚು' ಪುಸ್ತಕಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಶಸ್ತಿಯೂ ಲಭಿಸಿತು.

ಇದೆಲ್ಲಾ ಆಗಿ ಹಲವಾರು ತಿಂಗಳುಗಳೇ ಉರುಳಿವೆ. ರಾಜ್ಯದಲ್ಲಾದ ಡಾ. ಎಂ.ಎಂ.ಕಲ್ಬುರ್ಗಿ ಅವರ ಕೊಲೆ ಮತ್ತು ದೇಶದ ಇತರೆ ಕಡೆ ನಡೆದಿರುವ ದಾಂಧಲೆಗಳು ಚೆಡ್ಡಿಗಳ ಧರ್ಮಾಂಧತೆ ಉಲ್ಬಣಿಸುವಂತೆ ಮಾಡಿವೆ. ಇದರಿಂದ ಸ್ಫೂರ್ತಿ ಪಡೆದ ಕೆಲವು ಲಂಪಟರು ಇತ್ತೀಚೆಗೆ ಪ್ರಸಾದ್ ಅವರನ್ನು ದಾವಣಗೆರೆಯ ಎಪಿಎಂಸಿ ಯಾರ್ಡ್ ಹತ್ತಿರ ಕರೆದುಕೊಂಡು ಹೋಗಿ ದಾಳಿ ಮಾಡಿದ್ದಾರೆ: "ಸೂಳೆ ಮಗನೆ, ನಮ್ಮ ಹಿಂದೂ ಧರ್ಮವನ್ನು ಟೀಕಿಸುತ್ತೀಯಾ? ಎಷ್ಟೋ ಧೈರ್ಯ ನಿನಗೆ? ಬೋಳಿ ಮಗನೆ, ನಿನ್ನ ಹಿಂದಿನ ಜನ್ಮದ ಪಾಪಗಳಿಂದಾಗಿ ನೀನು ಈಗ ಮಾದಿಗನಾಗಿ ಹುಟ್ಟಿದ್ದೀಯ. ಲೋಫರ್, ನಿನ್ನಂಥವರನ್ನು ಸಾಯಿಸಬೇಕು. ನಿನ್ನ ಬೆರಳುಗಳನ್ನು ಕತ್ತರಿಸಿಹಾಕಿದರೆ ಅದು ಹೇಗೆ ಹಿಂದೂ ಧರ್ಮದ ವಿರುದ್ಧ ಬರೀತೀಯ ಅಂತ ನಾವೂ ನೋಡ್ತೀವಿ" ಎಂದು ಪ್ರಸಾದ್ ಅವರ ಬೆರಳುಗಳನ್ನು ಕತ್ತರಿಸಲೂ ಆ ಧರ್ಮಾಂಧರು ಯತ್ನಿಸಿದ್ದಾರೆ. ಜೀವಭಯವೇ ಪ್ರಸಾದ್ ಅವರ ತೋಳುಗಳಿಗೆ ಶಕ್ತಿ ತಂದು ಅವರು ದಾಳಿಕೋರರನ್ನು ದೂಡಿ ಕತ್ತಲೆಯಲ್ಲಿ ಕಣ್ಣುತಪ್ಪಿಸಿಕೊಂಡಿದ್ದಾರೆ.

ಪ್ರಸಾದ್ ಅವರನ್ನು ಮಾತನಾಡಿಸಲು ನಾನು ಫೋನ್ ಮಾಡಿದಾಗ ಅವರು "ಯಾವುದು ಮೇಡಂ ಇವರ ಹಿಂದೂ ಧರ್ಮ? ಅದನ್ನು ಟೀಕಿಸಿದರೆ ತಪ್ಪೇನು? ಡಾ. ಅಂಬೇಡ್ಕರ್ ಅವರೇ 'ಹಿಂದೂಸ್ತಾನ ಅಸಮಾನತೆಗಳ ನಾಡು' ಎಂದಿಲ್ಲವೇ? ಇಡೀ ಜಗತ್ತಿನಲ್ಲೇ ಈ ಹಿಂದೂ ಧರ್ಮದಷ್ಟು ಕಠೋರವಾದ ಧರ್ಮ ಇನ್ನೊಂದಿಲ್ಲ" ಎಂದರು. "ಯಾವುದು ಅವರ ರಾಮರಾಜ್ಯ? ಆ ರಾಮರಾಜ್ಯದಲ್ಲಿ ಶೂದ್ರ ಶಂಭೂಕನಿಗೆ ಅನ್ಯಾಯವಾಗಲಿಲ್ಲವೆ? ಆ ರಾಮರಾಜ್ಯದಲ್ಲಿ ಶೂದ್ರರಿಗೆ, ದಲಿತರಿಗೆ, ಆದಿವಾಸಿಗಳಿಗೆ, ಮಹಿಳೆಯರಿಗೆ ಇದ್ದ ಸ್ಥಾನ ಎಂತಹದ್ದು ಎಂದು ಎಂದಾದರೂ ಅವರು ಯೋಚನೆ ಮಾಡಿದ್ದಾರೆಯೇ? ಸೀತೆಗೆ ಏನಾಯಿತು ಎಂದೂ ಅವರಿಗೆ ಗೊತ್ತಿಲ್ಲವೇ? ಯಾರಿಗೆ ಬೇಕು ಅವರ ರಾಮರಾಜ್ಯ? ನನ್ನಂತಹವರಿಗಂತೂ ಬೇಡವೇ ಬೇಡ. ನಮಗೆ ಬೇಕಿರುವುದು ರಾಮರಾಜ್ಯವಲ್ಲ, ಬದಲಾಗಿ ನಮ್ಮ ಸಂವಿಧಾನ ನಮಗೆ ಕೊಟ್ಟಿರುವ ಪ್ರಜಾರಾಜ್ಯ" ಎಂದು ಪ್ರಸಾದ್ ತನ್ನ ಕೋಪವನ್ನು ವ್ಯಕ್ತಪಡಿಸಿದರು. "ಅವರು ಹಿಂದೂ ಧರ್ಮದ ಹೆಸರಲ್ಲಿ ಮಾಡುತ್ತಿರುವುದೆಲ್ಲ ನಮ್ಮ ಸಂವಿಧಾನಕ್ಕೆ ವಿರುದ್ಧವಾಗಿರುವ ಕೆಲಸ ಎಂಬ ಅರಿವೂ ಆ ಅವಿವೇಕಿಗಳಿಗೆ ಇಲ್ಲ. ಅವರು ದ್ರೋಣಾಚಾರ್ಯನ ವಂಶಸ್ಥರಾದರೆ ನಾವು ಏಕಲವ್ಯನ ವಂಶಸ್ಥರು. ಅನ್ಯಾಯದ ವಿರುದ್ಧ ಹೋರಾಡುವುದನ್ನು ಅಂಬೇಡ್ಕರ್ ನಮಗೆ ಕಲಿಸಿದ್ದಾರೆ" ಎಂದು ಪ್ರಸಾದ್ ಹೇಳಿದರು.

ಪ್ರಸಾದ್ ಅವರು ಏಕಲವ್ಯನ ಬಗ್ಗೆ ಪ್ರಸ್ತಾಪಿಸಿದಾಗ ನನಗೆ ನೆನಪಾಗಿದ್ದು ಕುವೆಂಪು ಅವರ ನಾಟಕ 'ಬೆರಳ್‌ಗೆ ಕೊರಳ್'. ಆ ನಾಟಕವನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ಕನ್ನಡ ನನಗೆ ಗೊತ್ತಿಲ್ಲ. ಆದರೆ ಹಲವು ವರ್ಷಗಳ ಹಿಂದೆ ಸಿನಿಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ತಾವು ಪ್ರಾಥಮಿಕ ವಿದ್ಯಾಭ್ಯಾಸ ಕಲಿತ ನಾಗತಿಹಳ್ಳಿಯಲ್ಲಿರುವ ಸರ್ಕಾರಿ ಶಾಲೆಯಲ್ಲಿ ಒಂದು ರಂಗಮಂದಿರ ಮತ್ತು ಲೈಬ್ರರಿಯನ್ನು ಕಟ್ಟಿಸಿ, ಅವುಗಳ ಉದ್ಘಾಟನೆಯ ಭಾಗವಾಗಿ ಜಿ.ಎಸ್.ಶಿವರುದ್ರಪ್ಪನವರು ಆಧುನಿಕ ಕನ್ನಡಕ್ಕೆ ಅಳವಡಿಸಿರುವ ಕುವೆಂಪು ಅವರ 'ಬೆರಳ್‌ಗೆ ಕೊರಳ್' ನಾಟಕದ ಪ್ರದರ್ಶನವನ್ನು ಏರ್ಪಡಿಸಿದ್ದರು. ಸುತ್ತಮುತ್ತಲಿನ ಹಳ್ಳಿಗಳಿಂದ ಬಂದಿದ್ದ ಜನರೆಲ್ಲರೂ ಅವತ್ತಿನ ನಾಟಕ ಪ್ರದರ್ಶನವನ್ನು ಬೆಕ್ಕಸಬೆರಗಾಗಿ ನೋಡಿದ್ದರು. ಮಾತ್ರವಲ್ಲ, ನಾಟಕ ಮುಗಿದನಂತರ ದ್ರೋಣಾಚಾರ್ಯನ ಪಾತ್ರದಲ್ಲಿ ಅಭಿನಯಿಸಿದ್ದು ಯಾವುದೇ ಪುರುಷನಲ್ಲ ಬದಲಾಗಿ ನೀನಾಸಂನಲ್ಲಿ ತರಬೇತಿ ಪಡೆದಿದ್ದ ಹನುಮಕ್ಕ ಎಂಬ ಮಹಿಳೆ ಎಂದು ಗೊತ್ತಾದಾಗ ಎಲ್ಲರಿಗೂ ಅಚ್ಚರಿಯಾಗಿತ್ತು.

ಇರಲಿ, 'ಬೆರಳ್‌ಗೆ ಕೊರಳ್' ನಾಟಕದಲ್ಲಿ ದ್ರೋಣಾಚಾರ್ಯನ ಎಲ್ಲಾ ವಾದಗಳು ಮತ್ತು ತರ್ಕಗಳು ಏಕಲವ್ಯನ ಶ್ರದ್ಧೆಯ ವಿರುದ್ಧ ಸೋಲುತ್ತವೆ. ಆದರೂ ಏಕಲವ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳಲು ತನ್ನ ಬಲಗೈ ಹೆಬ್ಬೆರಳನ್ನು ಕತ್ತರಿಸಿ 'ಗುರುದಕ್ಷಿಣೆ'ಯಾಗಿ ನೀಡುತ್ತಾನೆ. ಆದರೆ ಕಾಡಿನಲ್ಲಿ ವಾಸಿಸುವ ಏಕಲವ್ಯನಿಗೆ ಬೇಟೆ ಆಡದೆ ಜೀವನ ಸಾಗಿಸುವುದೇ ಅಸಾಧ್ಯ. ಆದ್ದರಿಂದ ಆ ನಾಟಕದ ಕೊನೆಯ ದೃಶ್ಯದಲ್ಲಿ ಏಕಲವ್ಯ ತನ್ನ ಬಲಗೈಯಲ್ಲಿ ಬಿಲ್ಲನ್ನು ಹಿಡಿದು ಎಡಗೈ ಉಪಯೋಗಿಸಿ ಬಾಣವನ್ನು ಹಾರಿಸಲು ಮುಂದಾಗುತ್ತಾನೆ. ದ್ರೋಣ ಮತ್ತು ಅರ್ಜುನರ ಕುತಂತ್ರ ಮತ್ತು ಸ್ವಾರ್ಥಕ್ಕೆ ಬಲಿಯಾಗುವ ಅಮಾಯಕನ ಏಕಲವ್ಯ ಅಂತಹ ಪರಿಸ್ಥಿತಿಯಲ್ಲೂ ಅಸಹಾಯಕನಾಗದೆ ತನ್ನ ಬದುಕನ್ನು ಮುಂದುವರಿಸಲು ತೋರುವ ದಿಟ್ಟತನ ಪ್ರೇಕ್ಷಕರ ಮೈ ಝುಂ ಅನಿಸುತ್ತದೆ.

ಆಗ ದ್ರೋಣನ ಗ್ಯಾಂಗ್ ಏಕಲವ್ಯನ ಹೆಬ್ಬೆರಳನ್ನು ಪಡೆದಿದ್ದರೆ ಈಗ ದ್ರೋಣ ವಂಶಸ್ಥರು ಪ್ರಸಾದರ ಬೆರಳುಗಳನ್ನು ಕತ್ತರಿಸಲು ಯತ್ನಿಸಿದ್ದಾರೆ. ತನ್ನ ಮೇಲಾದ ದಾಳಿಯಲ್ಲಿ ಬಲಗೈಗೆ ಪೆಟ್ಟಾಗಿದ್ದರೂ ಪ್ರಸಾದ್ ಧೃತಿಗೆಟ್ಟಿಲ್ಲ. "ಅವರು ನನ್ನನ್ನು ಹೊಡೆದರೂ, ಬಡಿದರೂ ಪರವಾಗಿಲ್ಲ ಮೇಡಂ. ನಾನು ನಮ್ಮ ಅಂಬೇಡ್ಕರ್ ಅವರು ತೋರಿರುವ ಹಾದಿಯಲ್ಲೇ ಸಾಗುತ್ತೇನೆ. ನನ್ನ ಮತ್ತು ನನ್ನ ಸಮುದಾಯದ ಅನುಭವಗಳನ್ನು, ಕಷ್ಟಗಳನ್ನು, ಆಶೆಗಳನ್ನು ವ್ಯಕ್ತಪಡಿಸುತ್ತಲೇ ಇರುತ್ತೇನೆ. ನಿಜ ಹೇಳಬೇಕೆಂದರೆ, ಅವರು ನನ್ನ ಮೇಲೆ ದಾಳಿ ಮಾಡಿದ ನಂತರ ನನ್ನಲ್ಲಿರುವ ಕಿಚ್ಚು ಮತ್ತು ದಿಟ್ಟತನ ಇನ್ನಷ್ಟು ಹೆಚ್ಚಾಗಿದೆ" ಎಂದರು ಪ್ರಸಾದ್.

ನಿಜಕ್ಕೂ ಈ ಯುವಕ ಏಕಲವ್ಯನ ವಂಶಸ್ಥನೇ ಅನ್ನಿಸಿತು ನನಗೆ. ಈ ಸಂಚಿಕೆಯಲ್ಲಿ ಹುಚ್ಚಂಗಿ ಪ್ರಸಾದ್ ಅವರು ರಚಿಸಿರುವ ಹಲವು ಕವನಗಳನ್ನು ನಮ್ಮ ಓದುಗರಿಗೆ ಪ್ರಕಟಿಸಿದ್ದೇವೆ. ■

...ುವ ದಲಿತ ಕವಿ ಹುಚ್ಚಂಗಿ ಪ್ರಸಾದ್ ಇತ್ತೀಚೆಗೆ ಹಿಂದೂತ್ವ ಕೋಮುವಾದಿಗಳ ದಾಳಿಗೆ ತುತ್ತಾದರು. ...ಸಾದ್ ಅವರ ಜೀವನ, ಕಾಳಜಿ ಮತ್ತು ನಿಲುವುಗಳನ್ನು ಸ್ಪಷ್ಟಪಡಿಸುವ ಹಲವು ಕವನಗಳು ಇಲ್ಲಿವೆ.

...ಒಡಲ ಕಿಚ್ಚು' ಸಂಕಲನದ ಹಲವು ಕವನಗಳು

...ಜನರಿಂದ

...ಜನರ
...ಹನಿಗೆ ಮೊಳಕೆಯೊಡೆದ
...ಗಳೆಲ್ಲ
...ಪತಿ ಶ್ರೀಶೈಲ ಕಾಶಿ ಗೋಕರ್ಣ
...ಸ್ಥಾನಿ ಧರ್ಮಸ್ಥಳಗಳಾಗಿ
...ಲಿ ಮಾಡುತ್ತಿದ್ದಾವೆ

...ಜನರ
...ೊಳಗೆ ನಿಂತ ಮಸಿ
...ಿ ಅಯೋಧ್ಯೆಯಾಗಿ
... ಬಾಯೊಳಗೆ
...ರು ಭಾಗವಾಗಿದೆ

...ಜನರು ಬದುಕಿದ್ದು
...ಾಜ್ಯ ಕಟ್ಟಿದ್ದು
... ಅನ್ನಕಲ್ಲ
...ದ ಒಡೆಯನಾಗಲಿಕ್ಕೆ

...ಜನರು
...ಬಿದ ಎಂಜಲಿನ ಎಲೆಗಳು
...ದಿರ ಮಸೀದಿ ಮಿನಾರ್‌ಗಳಾಗಿ
...ೂ ಕೂಗಾಡುತ್ತಿವೆ
...ನ್ನು ಬೊಗಳುತ್ತಿರುತ್ತವೆ

ದೇವರ ಮಕ್ಕಳು

ಶೋಷಣೆಯ ಕುಲುಮೆಯಲಿ
ಸಾಲಾಗಿ ಸತ್ತವರು
ಪುರಾಣ ಇತಿಹಾಸದೊಳಗೆ
ಪದವಾಗಿ ಬಿದ್ದವರು
ಯಾರೋ... ಹೇಳಿದರಂತೆ
ನಾವು ದೇವರ ಮಕ್ಕಳೆಂದು.

ಕೆರೆಕಟ್ಟೆಗಳಿಗೆಲ್ಲಾ
ಶಾಸನಗಳಾದವರು
ಮಂದಿರ ಮಸೀದಿ ಮಿನಾರ್‌ಗಳಿಗೆ
ಬುನಾದಿಯಾದವರು
ಯಾರೋ... ಹೇಳಿದರಂತೆ
ನಾವು ದೇವರ ಮಕ್ಕಳೆಂದು

ಹಸಿವೆಂಬ ಅಗ್ನಿಗೆ
ಮೈಮಾರಿಕೊಂಡವರು
ಯಜಮಾನರ ಚಿತ್ತಗಳಿಗೆ
ಭುಜ ಬೆನ್ನು ಕೊಟ್ಟವರು
ಯಾರೋ... ಹೇಳಿದರಂತೆ
ನಾವು ದೇವರ ಮಕ್ಕಳೆಂದು

ಹತ್ತಿಯನು ಬೆಳೆದು
ಬೆತ್ತಲಾಗಿ ಸುತ್ತಿದವರು
ತುತ್ತು ಅನ್ನಕ್ಕಾಗಿ
ಸುತ್ತಾಡಿ ಸತ್ತವರು
ಯಾರೋ... ಹೇಳಿದರಂತೆ
ನಾವು ದೇವರ ಮಕ್ಕಳೆಂದು

ಸುತ್ತಿಗೆಯ ಹೊಡೆತಕ್ಕೆ
ಕಾಲ್ಕಳೆದುಕೊಂಡವರು
ಸಿಡಿಲಿಗೆ ಸಿಲುಕಿ
ಕರಕಲಾಗಿ ಕರಗಿದವರು
ಯಾರೋ... ಮಹಾತ್ಮರು ಹೇಳಿದರಂತೆ
ನಾವು ದೇವರ ಮಕ್ಕಳೆಂದು

ಸೂಟು ಬೂಟಿನ ಬಸವ

ಅಂದು ಏಕಾಂತ
ರಸ್ತೆ ಬದಿಯಲಿ ಭಯದ ಪಯಣ
ನನ್ನಲ್ಲೇ.... ನಾನು ಲೀನವಾದಂತೆ
ತರತರದ ಚಿಂತೆ

ಶತಮಾನದಿಂದ ಸಾಹುಕಾರನ
ಚಾಟಿಯೇಟಿಗೆ ಭುಜ ಬೆನ್ನ ಕೊಟ್ಟ
ನನ್ನಜ್ಜನ ನೆನೆದಾಗ
ಗರ್ಭದೊಳಗೆ ಬೆಂಕಿಯುಂಡೆ
ಉರಿದಂತೆ ಭಾಸ
ನುಂಗಿದಷ್ಟು ನೋವು
ಹಿಂಗದಷ್ಟು ಕಾವು

ಅರೆಬೆತ್ತಲೆಯಲಿ ನಿಂತು
ಹತ್ತಿ ಬಿಡಿಸುವ ನನ್ನವ್ವಳ
ನೆತ್ತಿ ಸುಡುವ ಸೂರ್ಯನ ಕಂಡಾಗ
ಕೊಂದು ಬಿಡಲೆಂಬ ರೋಷ

ಅನ್ನಕ್ಕಾಗಿ ಅಂಗಲಾಚಿ
ದೇಹವನ್ನು ಮಾರಿಕೊಂಡು
ಕಸದಲ್ಲಿ ಎಸೆದ ಹಸುಗೂಸೇ
ಹಸಿದ ನಾಯಿಗೆ ಮಾಂಸವಾದರೆ
ತಾಯಿಗೇಕೆ ತಾಯ್ತನ??
ಕಾಯುತ್ತಿದ್ದೇನೆ ನಾನು
ಮಸಣದ ಮೌನದ ಗೋರಿಯೊಳಗೆ
ಬುದ್ಧನನ್ನು ಭೇಟಿಯಾಗಲು

ಮತ್ತೆ ಬರುವನೇ? ಅವನು
ಕತ್ತಲಿಗೆ ಬೆತ್ತಲಾದವರ
ಮೇಲಕೆತ್ತಲು
ಸೂಟು ಬೂಟಿನ ಬಸವ
ಇಂಗ್ಲಿಷಿನಲ್ಲಿ ಮಾತಾಡುತ
ಮತ್ತೆ ಘರ್ಜಿಸುತ.

ವಾಲ್ಮೀಕಿ

ಪ್ರಿಯ ವಾಲ್ಮೀಕಿಯೇ
ಕ್ರೌಂಚ ಪಕ್ಷಿಯ ಹತ್ಯೆಯ ನೋಡಿ
ಮರುಗುವ ನಿನ್ನ ಜೀವಕ್ಕೆ
ಶಂಬೂಕನ ರೋದನೆ ಸಾವು
ಮರುಕ ತರಲಿಲ್ಲವೇಕೆ

ಪ್ರಿಯ ವಾಲ್ಮೀಕಿಯೇ
ಅಶೋಕವನದ ಸುಪ್ಪತ್ತಿಗೆಯಲ್ಲಿದ್ದ
ಸೀತೆಯನ್ನು ಕಂಡಾಗ ಬಂದ ದುಃಖ
ಗೆಡ್ಡೆ ಗೆಣಸಿಗಾಗಿ ಅಲೆಯುತ್ತ ಕಾಡಲ್ಲೇ ಸತ್ತ
ನಿನ್ನವ್ವಂದಿರನ್ನು ಕಂಡಾಗ
ನಿನಗೆ ಏಕೆ ಬರಲಿಲ್ಲ ದುಃಖ


ಪ್ರಿಯ ವಾಲ್ಮೀಕಿಯೇ
ರಾಮನ ಶೌರ್ಯ ಪರಾಕ್ರಮಕ್ಕೆ
ಬಂದ ಸಡಗರ ಸಂಭ್ರಮ
ಬುಡಕಟ್ಟು ಬೇಡರ ಧೀರತನ ಕಂಡಾಗ
ಬರಲಿಲ್ಲವೇಕೆ?

ಪ್ರಿಯ ವಾಲ್ಮೀಕಿಯೇ
ಹೇಳು...
ಎಂತೆಂತ ಸತ್ಯಗಳು
ಕಾಡಲ್ಲಿ ನಡೆದವು
ಸಾವಿರಾರು ಜೀವಿಗಳು
ಕತ್ತಲಲ್ಲೆ ಕರಗಿದವು
ನೀನೇಕೆ ಬರೆಯಲೆ ಇಲ್ಲ

ಹೇಳು....
ವಾಲ್ಮೀಕಿಯೇ...
ಹೇಳು

⏭ 09

ಸಗಣಿ ಮಾಣಿ ಗ್ಯಾಂಗ್ ಮಣಿಸಿದ ಟೀಟಿ ಹೆಗಡೆ ಪಡೆ!



ಜೀವವನ್ನಾದರೂ ಬಿಟ್ಟೇನು ಪೀಠ ಬಿಡಲಾರೆನೆಂದು ರಾಮಚಂದ್ರಾಪುರ ಮಠಾಧೀಶ ಸಗಣಿ ಮಾಣಿ ಹಠ ಹಿಡಿದು ಕುಳಿತಿರುವಾಗಲೇ ಸಾತ್ವಿಕ ಹವ್ಯಕ ಬಳಗದ ದಂಗೆ ಜೋರಾಗುತ್ತಿದೆ. ಈ ಹಲ್ಕಟ್ ಸ್ವಾಮಿ ಪೀಠದಲ್ಲಿದ್ದರೆ ಹವ್ಯಕ ಸಮುದಾಯದ ಮಾನ-ಮರ್ಯಾದೆ ಹರಾಜಾಗುತ್ತದೆ; ವೈಚಾರಿಕ ಗುಲಾಮಗಿರಿಯಿಂದ ನೈತಿಕ ಅಧಃಪತನ ಹೊಂದುತ್ತದೆ; ಹವ್ಯಕರು ಕಚ್ಚೆ ಹರುಕನ ಹಿಂಬಾಲಕರೆಂಬ ಅವಹೇಳನದಿಂದ ತಲೆತಗ್ಗಿಸುವಂತಾಗುತ್ತದೆ ಎಂದು ಹವ್ಯಕ ಹಿರಿಯರು ಬಹಿರಂಗವಾಗೇ ಬಂಡಾಯ ಸಾರಿದ್ದಾರೆ. ಸ್ವಾಮಿಯೊಬ್ಬನಿಗೆ ವರ್ಜ್ಯವಾದ ಅಷ್ಟೂ ಅವಗುಣ ತುಂಬಿ ತುಳುಕುತ್ತಿರುವ ಸಗಣಿ ಮಾಣಿ ಗುರು ಪೀಠದಲ್ಲಿದ್ದರೆ ಅದು ಹವ್ಯಕರಿಗೆ ಶ್ರೇಯಸ್ಕರ ಎಂದಿಗೂ ಅಲ್ಲವೆಂಬ ಮಾತು ಆ ಸಮುದಾಯದಲ್ಲಿ ವಿಶ್ವಾಸಾರ್ಹತೆ, ಗೌರವವಿರುವ ಮುಂದಾಳುಗಳ ಬಾಯಿಂದ ಬರುತ್ತಿದೆ.

ಇಡೀ ಹವ್ಯಕ ಜನಾಂಗವೇ ಈಗ ಶ್ರದ್ಧಾ ಭಂಗವಾದ ಹೇಸಿಗೆಯಿಂದ ಚಡಪಡಿಸುತ್ತಿದೆ! ಸಿಐಡಿ ಚಾರ್ಜ್‌ಶೀಟ್ ಬಹಿರಂಗವಾಗುತ್ತಿರುವಂತೆಯೇ ರಾಘುನ ಅಳಿದುಳಿದ ಭಕ್ತ ಗಣವೇ ಅರ್ಧಕ್ಕರ್ಧ ಕರಗಿಹೋಗಿದೆ. ಪೀಠದಲ್ಲಿ ಕುಳಿತುಕೊಂಡೇ ರಾಘು ಮಾಣಿ ವ್ಯಭಿಚಾರ ನಡೆಸಿರುವುದನ್ನು ಸಿಐಡಿ ಎಳೆಎಳೆಯಾಗಿ ದಾಖಲಿಸಿರುವುದು ಹವ್ಯಕ ಬ್ರಾಹ್ಮಣರ ಕೇರಿ-ಕೇರಿಗಳಲ್ಲಿ ಅಲ್ಲೋಲಕಲ್ಲೋಲ ಮಾಡಿದೆ! ದೈವ ಭೀತಿ, ಪೀಠದ ಶಾಪ ಬ್ಲಾಕ್‌ಮೇಲ್‌ನಿಂದ ರಾಮಕಥಾ ಗಾಯಕಿಯನ್ನು ರಾಘು ಹರಿದು ಮುಕ್ಕಿರುವುದು ಖರೆಯೆಂದು ದೋಷಾರೋಪ ಪಟ್ಟಿಯ ಜೈವಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಕ್ಷ್ಯಾಧಾರಗಳು ಸಾರಿಸಾರಿ ಹೇಳುತ್ತಿವೆ. ಇಂಟರ್‌ನೆಟ್, ಐ ಪ್ಯಾಡ್, ಮೊಬೈಲ್ ಫೋನ್ ಬಳಸುವುದರಲ್ಲಿ ನಿಸ್ಸೀಮನಾದ ರಾಘು ಸ್ತ್ರೀ ವ್ಯಾಮೋಹದ ವಿರಹ ವೇದನೆಯ ಆಲಾಪಗಳನ್ನು ತಾಂತ್ರಿಕ ಸಾಕ್ಷಿಗಳು ಸಾಬೀತುಪಡಿಸಿದರೆ, ವೈದ್ಯಕೀಯ ಪರೀಕ್ಷೆ ಸ್ವಾಮಿ ಚೆಲ್ಲಿರುವ 'ಮಂತ್ರೋದಕ' ಕರಾರುವಾಕ್ಕಾಗಿ ಕಂಡುಹಿಡಿದಿದೆ!


ಈ ಸತ್ಯ ಸಾಕ್ಷಾತ್ಕಾರ ಹವ್ಯಕ ಸಜ್ಜನರ-ಹಿರಿಯರ ಆತ್ಮಸಾಕ್ಷಿಯನ್ನು ಚುಚ್ಚತೊಡಗಿದೆ. ಹಲವು ವರ್ಷಗಳಿಂದ ತನು-ಮನ-ಧನದ ಸೇವೆ ಮಾಡುತ್ತ ರಾಘುನ ಅಂತಃಪುರದ ಅತ್ಯಾಪ್ತರಾಗಿದ್ದ ಎಂ.ಎನ್.ಭಟ್ ಮದ್ಗುಣಿ, ಸಿ.ಎಚ್.ಎಸ್. ಭಟ್‌ರಂಥವರಿಗೆ ಈಗ ಜ್ಞಾನೋದಯವಾಗಿದೆ. ರಾಘುನ ಏಕಾಂತ ದರ್ಶನ, ಕನ್ಯಾ ಸಂಸ್ಕಾರ, ಕುಂಕುಮಧಾರಣೆ, ಗಂಡನನ್ನು ಮನೆಯಲ್ಲಿ ಬಿಟ್ಟು ಗೃಹಿಣಿಯರು ಮಠಕ್ಕೆ ಒಂಟಿಯಾಗಿ ಬಂದು ತಿಂಗಳಾನುಗಟ್ಟಲೆ ಮಾಡುತ್ತಿದ್ದ ರಹಸ್ಯ ಗುರುಸೇವೆ, ಮುಚ್ಚಿದ ಬಾಗಿಲ ಕೋಣೆಯಲ್ಲಿ ಮಹಿಳೆಯರಿಗೆ ಮಾತ್ರ ಹೇಳಿಕೊಡುತ್ತಿದ್ದ ಯೋಗಾಸನ, ಜ್ಯೋತಿಷ್ಯ... ಮುಂತಾದ ಆಧ್ಯಾತ್ಮಿಕ ಅನಾಚಾರ ಕಂಡೂಕಾಣದಂತಿದ್ದ ಮದ್ಗುಣಿ ಭಟ್ಟರಂಥ ಹಿರಿಯ ಜೀವಗಳೀಗ ತಿರುಗಿ ಬಿದ್ದಿವೆ. ಗುರುವಿನ ಅಸಲಿ ಅವತಾರ ಅನಾವರಣ ಮಾಡುತ್ತಿವೆ. ಪೋಲಿ ರಾಘುಗೆ ಪೀಠತ್ಯಾಗ ಬಿಟ್ಟು ಬೇರೆ ದಾರಿಯೇ ಇಲ್ಲವೆಂದು ಕೆ.ಎಚ್. ಶ್ರೀನಿವಾಸ್, ಅಶೋಕ್ ಭಟ್, ಸಿ.ಎಚ್.ಎಸ್. ಭಟ್, ಮದ್ಗುಣಿ ಭಟ್ ಮುಂತಾದ ಹವ್ಯಕ ಪ್ರಮುಖರು ಪತ್ರಿಕಾಗೋಷ್ಠಿ ಕರೆದು ಝಾಡಿಸುತ್ತಿದ್ದಾರೆ. ಇವರ್ಯಾರೂ ಬೇಕಾಬಿಟ್ಟಿ ಮಂದಿಯಲ್ಲ; ಹವ್ಯಕರ ನಡುವೆ ನಂಬಿಕೆಯ-ಗೌರವದ ಸ್ಥಾನ-ಮಾನ ಹೊಂದಿರುವವರು.

ಇಷ್ಟಾದರೂ ಮೂರೂ ಬಿಟ್ಟಿರುವ ಬರ್ನಾಸ್ ಮಾಣಿ ಮಾತ್ರ ತಾನು ಶುದ್ಧ ಸನ್ಯಾಸಿಯೆಂದು ಮಂಕು ಶಿಷ್ಯರಿಂದ ಫೇಸ್‌ಬುಕ್ ಅಭಿಯಾನ ಮಾಡಿಸುತ್ತಿದ್ದಾನೆ. ತನ್ನ ವಿರೋಧಿಗಳ ಚಾರಿತ್ರ್ಯಹನನ ಮಾಡಿದ ಫೇಸ್‌ಬುಕ್ಕಿಗಳ ಕರೆಕರೆದು ಸನ್ಮಾನ ಮಾಡಿ ಪಾತಕಕ್ಕೆ ಪ್ರಚೋದಿಸುತ್ತಿದ್ದಾನೆ. ಸ್ವತಃ ತಾನೇ ಕಂಡಲ್ಲೇ ಕುಣಿಕುಣಿದು ಕುಪ್ಪಳಿಸುತ್ತ ಸಂಭಾವಿತನಂತೆ ಪ್ರವಚನ ಬಿಗಿಯುತ್ತಿದ್ದಾನೆ. ಒಳಗಿನ ಅಳುಕು-ಪಾಪಪ್ರಜ್ಞೆ ಮರೆ ಮಾಚಲು ದೊಡ್ಡ ಸದ್ದು ಮಾಡುತ್ತಿದ್ದಾನೆ. ರಾಮಕಥಾ ಸಂಯೋಜಕ ಗಜಾನನ ಶರ್ಮನಂಥ ಬೃಹನ್ನಳೆಯರನ್ನು ತನ್ನ ಸಮರ್ಥನೆಗೆಂದು ಮಾಧ್ಯಮದ ಮುಂದೆ ಬಿಡುತ್ತಿದ್ದಾನೆ. ರಾಘುನ ಜಿಪಿಎ ಪಡೆದಿರುವ ತಿಮ್ಮಪ್ಪ ಮಡಿಯಾಳ್, ಕೆ.ಜಿ. ಭಟ್‌ರಂಥವರೇ ಗಲೀಜು ಗುರು ಪರ ಮಾತಾಡಲು ಹಿಂಜರಿಯುತ್ತಿರುವಾಗ ಗಜಾನನ ಶರ್ಮನಂಥ ಲೂಸ್‌ಗಳು ಗೋಕರ್ಣದ 'ಅಶೋಕೆಯ ಸ್ಕೈಟ್-ಬಂಗ್ಲೆ ಆಸೆಯಿಂದ ಬಾಯಿಗೆ ಬಂದಂತೆ ಬೊಗಳುತ್ತಿರುವುದು ರಾಘುನ ಕಪಟ ಸನ್ಯಾಸ ಜಗಜ್ಜಾಹೀರುಮಾಡುತ್ತಿದೆ. ಮರ್ಯಾದಸ್ಥರ್‍ಯಾರೂ ರಾಘುನ ಸಮರ್ಥನೆಗೆ ಬರದಂತಾಗಿದೆ. ತಾಲಿಬಾನಿ ತಂಡ ಮತ್ತು ಮಠಾವಲಂಬಿ ಫಲಾನುಭವಿಗಳಷ್ಟೇ



ಈಗ ರಾಘು ಜತೆಗಿದ್ದಾರೆ.

ರಂಗೀಲಾ ರಾಘುನನ್ನು ಕುಲಗುರುವೆಂದು ಮನಸಾರೆ ಒಪ್ಪುವವರು ಹವ್ಯಕರಲ್ಲಿ ಶೇಕಡಾ ಹತ್ತರಷ್ಟೂ ಇಲ್ಲವೆಂಬುದಕ್ಕೆ ಕಳೆದ ವಾರ ಕುಮಟಾದ ಹವ್ಯಕ ವಿದ್ಯಾವರ್ಧಕ ಸಂಘಕ್ಕೆ ನಡೆದ ಗುಪ್ತ ಮತದಾನ ಒಂದು ಸಣ್ಣ ಸ್ಯಾಂಪಲ್ ಸರ್ವೆಯಂತಿದೆ! ಈ ಚುನಾವಣೆಯಲ್ಲಿ ರಾಘು ಬೆಂಬಲಿತರೆಲ್ಲರೂ ಸೋತು ಮೂಲೆಗುಂಪಾದರೆ ಆತನ ಢೋಂಗಿ ಸನ್ಯಾಸ




ಬಲವಾಗಿ ವಿರೋಧಿಸುತ್ತ ಬಂದ ಡಾ. ಟಿ.ಟಿ. ಹೆಗಡೆ ಟೀಮು ದಿಗ್ವಿಜಯ ಮಾಡಿದೆ! ಹದಿನೈದು ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಲ್ಲ ಸ್ಥಾನಕ್ಕೆ ರಾಘುನ ತಾಲಿಬಾನಿ ತಂಡ ಸ್ಪರ್ಧಿಸಿತ್ತು. ಹೇಗಾದರೂ ಮಾಡಿ ಕುಮಟಾ ಸೀಮೆಯ ಹವ್ಯಕರಲ್ಲಿ ಪ್ರಭಾವಿಯಾಗಿರುವ ಈ ಸಂಘವನ್ನು ಟೀಟಿ ಹೆಗ್ಗಡೆಯಿಂದ ತಪ್ಪಿಸಿ ತಮ್ಮ ಸುಪರ್ದಿಗೆ ಪಡೆಯಲು ರಾಘು ಬಳಗ ಕಳೆದ ಮೂರ್ನಾಲ್ಕು ತಿಂಗಳಿಂದ ಭರ್ಜರಿ ಕಸರತ್ತು ಮಾಡಿತ್ತು. ಆದರೆ ಹವ್ಯಕರ ವಿಶ್ವಾಸ ಗಳಿಸಲು ಮಾತ್ರ ಸಾಧ್ಯವಾಗಲಿಲ್ಲ.

ಕುಮಟಾದ ಹವ್ಯಕ ವಿದ್ಯಾವರ್ಧಕ ಸಂಘ ಕಟ್ಟಿ ಬೆಳೆಸಿದ್ದು ಖಂಡಿತವಾದಿ ಟೀಟಿ ಹೆಗಡೆ. 1939ರಲ್ಲಿ ಸ್ಥಾಪನೆಯಾದ ಈ ಸಂಘದ ಉಸ್ತುವಾರಿ ಟೀಟಿ ಹೆಗಡೆ ವಹಿಸಿಕೊಳ್ಳುವಾಗ ಬರೀ ಒಂದು ಲಕ್ಷ ಬಂಡವಾಳ ಮಾತ್ರ ಇತ್ತು, ಈಗ ಒಂದು ಕೋಟಿಯ ಚರ-ಸ್ಥಿರ ಆಸ್ತಿ ಟೀಟಿ ಹೆಗಡೆಯ ಪ್ರಾಮಾಣಿಕ ಕಾರ್ಯದಿಂದ ಶೇಖರಣೆಯಾಗಿದೆ. ಅಡಿಕೆ ಸೊಸೈಟಿಯಾಗಿರಲಿ, ಎಪಿಎಂಸಿಯಾಗಿರಲಿ ಅಥವಾ ಇನ್ನಿತರ ಯಾವುದೇ ಸಂಘ-ಸಂಸ್ಥೆಯೇ ಇರಲಿ ಅದರ ಪಾರುಪತ್ಯ ಟೀಟಿ ಹೆಗಡೆ ಸುಪರ್ದಿಗೆ ಬಂದಾಗೆಲ್ಲಾ ಪಾರದರ್ಶಕ ಆಡಳಿತ ನಡೆದಿದೆ. ನಿಸ್ವಾರ್ಥ, ನಿಷ್ಠೂರ ನಡೆ-ನುಡಿಯ ಈ 'ನಿಜ ಸಂತ' ಕುಮಟಾದ ಹಳ್ಳಿಗಳಲ್ಲಿ ಬಡವರ ಡಾಕ್ಟರ್ ಎಂದೇ ಜನಪ್ರಿಯರು.

ಇಂಥ ನೈತಿಕ ಪರಿಶುದ್ಧತೆಯ ಡಾ. ಟೀಟಿ ಹೆಗಡೆ ನಾಲ್ಕೈದು ವರ್ಷದ ಹಿಂದೆಯೇ ರಾಘು ದಾರಿ ತಪ್ಪಿರುವುದನ್ನು ಕರಾರುವಾಕ್ಕಾಗಿ ಗುರುತಿಸಿ ಗುಡುಗಿದ್ದರು. ರಾಘು ಸ್ತ್ರೀಯರನ್ನು ಮಗ್ಗುಲಲ್ಲಿ ಕೂಡ್ರಿಸಿಕೊಂಡು, ಮೈ-ಕೈ ಮುಟ್ಟಿ-ತಡವಿ ಹಣೆಗೆ ಕುಂಕುಮ ಇಡುವುದನ್ನು ಮೊಟ್ಟ ಮೊದಲು ಆಕ್ಷೇಪಿಸಿದ್ದೇ ಈ ಟೀಟಿ ಹೆಗಡೆ! ರಾಘುನ ಸುತ್ತಲಿರುವ ಆತನ ಭಾವ ಜಗದೀಶ ಶರ್ಮ ಮತ್ತಿತರರು ಕಳ್ಳ ಕುಬೇರರಾಗುತ್ತಿರುವುದು, ಕುರಿ ಹೋಮ ಮಾಡಿರುವುದು, ಹೆಂಗಸೊಬ್ಬಳಿಂದ ಜೀವವಿಮಾ ಪಾಲಿಸಿ ಖರೀದಿಸಿರುವುದು.... ಇತ್ಯಾದಿ ಅನಾಚಾರ ಟೀಟಿ ಹೆಗಡೆ ವಿರೋಧಿಸಿದ್ದರು. ರಾಘು ಹಿರಿಯರ, ಮಠದ ಮಂಡಳಿಯ ಅಭಿಪ್ರಾಯ ಕೇರ್ ಮಾಡದೇ ಸರ್ವಾಧಿಕಾರಿಯಂತೆ, ಶುದ್ಧ ಸಂಸಾರಿಯಂತೆ ಲೌಕಿಕ ಲೋಕದಲ್ಲಿ ಮುಳುಗಿರುವುದನ್ನು ಆತ ಗುರುತಿಸಿದ್ದರು. ಇದು ರಾಘುನ ರೌಡಿ ಪಡೆಗೆ ಪಥ್ಯವಾಗಲಿಲ್ಲ. ರಾಘುನ ತಾಲಿಬಾನಿ ಪಡೆ ಬಾಸ್ ನಿರ್ದೇಶನದಂತೆ ಸಿದ್ದಾಪುರದಲ್ಲಿ ನಡೆದ ಒಂದು ಸಭೆಯಲ್ಲಿ ಡಾ. ಹೆಗಡೆಯನ್ನು ಹಿಡಿದು ಹೊಡೆದಿತ್ತು. ಆನಂತರ ರಾಘು ಟೀಟಿ ಹೆಗಡೆಯನ್ನು ಬಂದು ಕಾಣುವಂತೆ ಹೇಳಿ ಕಳಿಸಿತ್ತು. ಆ ವಾಸ್ತವವಾದಿಯನ್ನು ಪಳಗಿಸುವ ತಂತ್ರಗಾರಿಕೆ ರಾಘುನದಾಗಿತ್ತು. ಆದರೆ ಸದಾ ರೌಡಿಗಳಿಂದ ಸುತ್ತುವರಿದಿರುವ ರಾಘುನ ಬಳಿ ಡಾ. ಹೆಗಡೆ ಹೋಗಲಿಲ್ಲ; ಬದಲಿಗೆ ಹತ್ತಾರು ಪುಟದ ಪತ್ರ ಬರೆದು ಆತನ ಅಸನ್ಯಾಸತ್ವ ಜಿಸಲಿಯತ್ತು ಬಿಚ್ಚಿಟ್ಟಿದ್ದರು. ಇದೊಂದಕ್ಕೂ ರಾಘು ಉತ್ತರಿಸುವ ಧೈರ್ಯ ತೋರಿಸಲಿಲ್ಲ.

ರಾಘುನ ಬಗ್ಗೆ ಆತನ ಗುರು ರಾಘವೇಂದ್ರ ಭಾರತಿ ಸ್ವಾಮಿಗೇ ನಂಬಿಕೆಯಿರಲಿಲ್ಲ. ಆತನ ಸ್ವಭಾವವೇಕೋ ಗುರುವಿಗೆ ಸರಿ ಕಾಣಿಸುತ್ತಿರಲಿಲ್ಲ. ರಾಘುನ ಉತ್ತರಾಧಿಕಾರಿ ಮಾಡುವ ಮನಸ್ಸು ಒಂಚೂರೂ ದೊಡ್ಡ ಗುರುವಿಗೆ ಇರಲಿಲ್ಲ. ಆಗ ಪ್ರೇಮಲತಾರ ಮಾವ (ಗಂಡನ ತಂದೆ) ಚಕ್ರಕೋಡಿ ಈಶ್ವರ ಶಾಸ್ತ್ರಿ ಎಷ್ಟು ಪ್ರಬಲವಾಗಿ ರಾಘುನ ಪರ ನಿಂತಿದ್ದರೋ ಅಷ್ಟೇ ಬೆಂಬಲ ಡಾ. ಟೀಟಿ ಹೆಗಡೆಯೂ ಕೊಟ್ಟಿದ್ದರು. ಲಗುಬಗೆಯಲ್ಲಿ ರಾಘುನ ಪಟ್ಟಾಭಿಷೇಕ ಮುಗಿಸಿದ ಅವಸರಿಗರಲ್ಲಿ ಈ ಟೀಟಿ ಹೆಗಡೆಯೂ ಒಬ್ಬರು. ಆದರೆ ರಾಘು ಕಳ್ಳ ಸನ್ಯಾಸಿ ಎಂಬ ದರ್ಶನವಾಗಿದ್ದೂ ಇದೇ ಹೆಗಡೆಗೆ. ಹಿಂದೆ ಹೆಗಡೆ ಕೊಟ್ಟಿದ್ದ ಅಪಾಯದ ಸೂಚನೆ ಇವತ್ತು ನಿಜವಾಗಿದೆ. ಡಾ. ಹೆಗಡೆಯನ್ನು ಹಣಿಯಲು ರಾಘು ಅಂಡ್ ಗ್ಯಾಂಗ್ ಸಿದ್ಧಾಪುರದ ಸಂಘರ್ಷದ ನಂತರ ಸತತ ಹವಣಿಸುತ್ತಲೇ ಇತ್ತು. ಯಾವಾಗ ತನ್ನ ಕಾಮಕಥಾ ದಶದಿಕ್ಕಿಗೆ ಪ್ರಸಾರವಾಯ್ತೋ ಆಗಂತೂ ಟೀಟಿ ಹೆಗಡೆಯನ್ನು ಹವ್ಯಕರಲ್ಲಿ ವಿಲನ್ ಮಾಡಲು ರಾಘು ಪಡೆ ಮಾಡದ ಷಡ್ಯಂತ್ರವೇ ಇಲ್ಲ.



ಡಾ. ಹೆಗಡೆಯನ್ನು ಹವ್ಯಕ ವಿದ್ಯಾವರ್ಧಕ ಸಂಘದಿಂದ ಓಡಿಸುವ ಸ್ಕೆಚ್ ರಾಘು ಹಾಕಿದ್ದ. ಸಂಘದ ಸಭೆ-ಮೀಟಿಂಗ್‌ಗಳಲ್ಲಿ ರಾಘುನ ತಾಲಿಬ[ಾನಿ] ತಂಡ ಜಗಳ ಕಾಯುವುದು, ರಗಳೆ, ದಾಂಧಲೆ ಮಾಡುವುದು ಆರಂಭಿಸಿತ್ತು. ಆದರೆ ರಾಘುನಿಗಿಂ[ತ] ಹೆಚ್ಚು ಗೌರವ-ನಂಬಿಕೆ ಕುಮಟಾ ಭಾಗದ ಹವ್ಯ[ಕರಲ್ಲಿ] ಇರುವುದರಿಂದ ತಾಲಿಬಾನಿಗಳ ಆಟ ನಡೆಯಲಿ[ಲ್ಲ]. ಆಗ ವಿದ್ಯಾವರ್ಧಕ ಸಂಘವನ್ನೇ ಹೈಜಾಕ್ ಮಾ[ಡಲು] ರಾಘು ರೌಡಿಗಳು ಸಂಚು ಮಾಡಿದರು. ಸಂಘಕ್ಕೆ ನಕಲಿ ಸದಸ್ಯರ ತುಂಬಲು ಕಿತಾಪತಿ ಮಾಡಿದರು. ಇದೂ ವಿಫಲವಾಯ್ತು.

ಆಗ ವಿದ್ಯಾವರ್ಧಕ ಸಂಘಕ್ಕೆ ಚುನಾವಣೆ ಆಗಬೇಕೆಂಬ ಒತ್ತಡ ತಂದರು. ದಶಕಗಟ್ಟಲೆ ಕಾ[...] ಎಲೆಕ್ಷನ್ ಇಲ್ಲದೆ ಡಾ. ಟೀಟಿ ಹೆಗಡೆಯನ್ನು ಅವಿರೋಧವಾಗಿ ಆರಿಸುತ್ತ ಬಂದಿದ್ದ ಸಂಘದಲ್ಲಿ ಮೊದಲ ಬಾರಿ ಚುನಾವಣೆ ನಡೆಯುವಂತಾಯ[ು]. ಎಲ್ಲ ಹದಿನೈದು ಸ್ಥಾನಕ್ಕೆ ರಾಘುನ ಪಟಾಲಮ್ ಸ್ಪರ್ಧಿಸಿತು. ಡಾ. ಹೆಗಡೆ ಬೆಂಬಲಿಗರೂ ಪ್ರತಿಷ್ಠೆ[ಯ] ಸ್ಪರ್ಧೆಯನ್ನು ಎದುರಿಸಿದರು. ರಾಘು ಕಡೆಯ ಕ[...] ಕ್ಯಾಂಡಿಡೇಟ್‌ಗಳು ಗುರುವಿನ ಮಂತ್ರಾಕ್ಷತೆ ತಗೊ[ಂಡು] ಬಂದಿದ್ದರು. ಆದರೆ ಯಾರಿಗೂ ಗೆಲ್ಲಲು ಮಾತ್ರ ಆಗಲಿಲ್ಲ! ಎಲ್ಲ 15 ಮಂದಿ ಟೀಟಿ ಹೆಗಡೆ ಬಳಗದವರನ್ನೇ ಕುಮಟೆಯ ಹವ್ಯಕರು ದೊಡ್ಡ ಅಂತರದಿಂದ ಆಯ್ಕೆ ಮಾಡಿದ್ದಾರೆ; ರಾಘು ಪಟಾಲಮ್ಮನ್ನು ಹೀನಾಯವಾಗಿ ಸೋಲಿಸಿದ್ದಾರೆ.

ಹವ್ಯಕರ ಪ್ರಾಬಲ್ಯದ ಕುಮಟಾದಲ್ಲಾದ ಮುಖಭಂಗ ರಾಘುನನ್ನು ಕಂಗೆಡಿಸದೇ ಬಿಡದು. ರಾಘುನ ಹಲವು ಸರ್ಕಸ್ ಸ್ಥಳಗಳಲ್ಲಿ ಕುಮಟೆಯ[ೂ] ಒಂದು. ಇಲ್ಲಿ ಆತನ ಗೋ ಸಮ್ಮೇಳನ, ಗೋಕ[...] ರಾಮ ಕಥಾದಂಥ ಹಲವು ಕಸರತ್ತು ನಡೆದಿದೆ. ಅನೇಕ ವಸಾಹತುಗಳೂ ಕುಮಟಾದ ಸುತ್ತ-ಮುತ್ತಲಿನಲ್ಲಿದೆ. ಹೊಸಾಡ ಎಂಬಲ್ಲಿ ಮೂಕ ಆ[...] ಬ್ರ್ಯಾಂಡ್ ಮಾಡಿಕೊಂಡು ಹೋಮ್ ಸ್ಟೇ ನಡೆಸ[ುವ] ದೂ(ದು)ರಾಲೋಚನೆಯೂ ಆತನಿಗಿತ್ತು. ಹತ್ತಿರದ[...] ಕೆಕ್ಕಾರ ಮಠವಿದೆ. ಇಲ್ಲಾತ ಮಾಡಿದ ಚಾತುರ್ಮಾ[ಸ್ಯ] 'ಸ್ತ್ರೀ ವಾಸನೆ'ಯಿಂದ ಲೋಕವಿಖ್ಯಾತವೂ ಆಗಿತ್ತು. ಇಂಥ 'ಗಂಡು ಮೆಟ್ಟಿನ' ಸ್ಥಳದಲ್ಲಾದ ರಾಘು ಸೋ[ಲು] ಏನನ್ನು ಧ್ವನಿಸುತ್ತದೆ?

ಈ ಸೋಲಿನ ಅರ್ಥ ಇಷ್ಟೇ; ರಾಮಚಂದ್ರಾ[ಪುರ] ಮಠದ ಅನುಯಾಯಿ ಹವ್ಯಕರಲ್ಲಿ ಹೆಚ್ಚಿನವರಿಗೆ ರಾಘುನ ಗುರುಗಿರಿ ಸಾಕಾಗಿದೆ. ಆತನ ಪೀಠೋಚ್ಚಾಟನೆಗೆ ಹವ್ಯಕರು ಕಾಯುತ್ತಿದ್ದಾರೆ. ತಾಲಿಬಾನಿ ಪಡೆಯ ದಾದಾಗಿರಿ, ಗುರು ಪೀಠದ[...] ಅವಕೃಪೆಯಂಥ ಬೆದರಿಕೆ ಇಲ್ಲದ ರಹಸ್ಯ ಅಭಿ[ಪ್ರಾಯ] ಸಂಗ್ರಹವಾದರೆ ಹವ್ಯಕರು 'ಹಲ್ಕಟ್ ಸ್ವಾಮಿ ಹಟಾವ್ರೋ' ಬೆಂಬಲಿಸುತ್ತಾರೆ; ಹವ್ಯಕರ ಅಂತರಾ[ಳ] ರಾಘುನನ್ನು ಪೀಠದಿಂದ ಇಳಿಸಿ ಶುದ್ಧ ವಟು ಬ[...]ಗೆ ದೀಕ್ಷೆ ಕೊಡುವ ಕೆಲಸ ಆದಷ್ಟು ಬೇಗ ಆಗಲೆಂ[ದು] ಹೇಳುತ್ತಿದೆ; ರಾಮಚಂದ್ರಾಪುರ ಮಠ ರೇಪಿಸ್ಟ್ ರಾಘುನ ಕಪಿಮುಷ್ಠಿಯಿಂದ ಮುಕ್ತವಾಗಲೆಂದು ಹವ್ಯಕರು ಹಾತೊರೆಯುತ್ತಿದ್ದಾರೆಂಬುದೇ ಕುಮ[ಟೆಯ] ಡಾ. ಟಿ.ಟಿ. ಹೆಗಡೆ ದಿಗ್ವಿಜಯದ ಹಿಂದಿನ ಗೂ[ಢಾರ್ಥ] ತಾನೆ?!

■ ಶುದ್ಧೋದನ

ಭಗತ್ ಸಿಂಗ್ ಇವತ್ತಿಗೂ ಪ್ರಸ್ತುತ

ಭಗತ್ ಸಿಂಗ್ ಅವರ ಮೊಮ್ಮಗ ಅಭಿತೇಜ್ ಸಿಂಗ್



ಭಗತ್ ಸಿಂಗ್ ಈ ದೇಶ ಕಂಡ ಅಪ್ರತಿಮ ...ಂತ್ರ ಹೋರಾಟಗಾರರಾಗಿದ್ದರು ಮಾತ್ರವಲ್ಲ, ...ದು ಜಾತ್ಯತೀತರಾಗಿದ್ದು ಮೂಲಭೂತವಾದದ ...ದ್ಧ ಹೋರಾಡಿದ ಯೋಧರೂ ಆಗಿದ್ದರು. ...ತ್ತಿಗೂ ಭಗತ್ ಸಿಂಗ್ ಹೆಸರು ಕೇಳಿದರೆ ಸಾಕು ... ದೇಶದ ಯುವಕರು ಪುಳಕಿತರಾಗುತ್ತಾರೆ. ...ುವಜನತೆಯಲ್ಲಿ ರೋಮಾಂಚನ ಹುಟ್ಟಿಸುವ ...ತ್ ಸಿಂಗ್ ಅವರ ಈ ಶಕ್ತಿಯನ್ನು ಹಲವು ...ಲಭೂತವಾದಿ ಸಂಘಟನೆಗಳು ದುರುಪಯೋಗ ...ಡಿಕೊಳ್ಳುತ್ತಿವೆ. ಅದರಲ್ಲೂ ಅಪ್ಪಟ ನಾಸ್ತಿಕರಾಗಿದ್ದ ...ತ್ ಸಿಂಗ್ ಅವರನ್ನು ಹಿಂದೂತ್ವವಾದಿ ಆರೆಸ್ಸೆಸ್ ...ತ್ತು ಅದರ ವಿವಿಧ ಸಂಘಟನೆಗಳು ...ರುಪಯೋಗಮಾಡಿಕೊಂಡಿದ್ದು ಅಪ್ಪಿಷ್ಟಲ್ಲ.

ಭಗತ್ ಸಿಂಗ್ ಅವರ ತಮ್ಮ ಕುಲ್ಬೀರ್ ಸಿಂಗ್ ...ರ ಮೊಮ್ಮಕ್ಕಳಲ್ಲಿ ಅಭಿತೇಜ್ ಸಿಂಗ್ ಕೂಡ ...ರು. ಅಭಿತೇಜ್ ಸಿಂಗ್ ಅವರ ತಂದೆ-ತಾಯಿ ...ವಾರು ದಶಕಗಳಿಂದ ಪಂಜಾಬ್ ರಾಜ್ಯದಲ್ಲಿ ...ತಿಪರ ಸಂಘಟನೆಗಳೊಂದಿಗೆ ಕೆಲಸ ಮಾಡುತ್ತಾ ...ದಿದ್ದಾರೆ. ಹಲವು ವರ್ಷಗಳ ಹಿಂದೆ ಇದೇ ...ಲ್ಬೀರ್ ಸಿಂಗ್ ಅವರ ಮತ್ತೊಬ್ಬ ಮೊಮ್ಮಗ ... ಗುಜರಾತಿನ ಮುಖ್ಯಮಂತ್ರಿ ಆಗಿದ್ದ ನರೇಂದ್ರ ...ೇದಿಯನ್ನು ಭಗತ್ ಸಿಂಗ್ ಕುರಿತ ಪುಸ್ತಕದ ...ುಗಡೆಗೆ ಕಾರ್ಯಕ್ರಮಕ್ಕೆ ಆಹ್ವಾನಿಸಿದಾಗ ಅದನ್ನು ...ತೇಜ್ ಕುಟುಂಬ ವಿರೋಧಿಸಿತ್ತು. "ಎಲ್ಲಾ ...ಹದ ಕೋಮು ವಾದವನ್ನು ವಿರೋಧಿಸುತ್ತಿದ್ದ ...ತ್ ಸಿಂಗ್ ಅವರನ್ನು ಕುರಿತ ಪುಸ್ತಕ ಬಿಡುಗಡೆಗೆ ...ೇಮುವಾದಿಯಾದ ಮೋದಿಯನ್ನು ಕರೆದದ್ದು ...ು" ಎಂದು ಅವರೆಲ್ಲರೂ ವಾದಿಸಿದ್ದರು.

...ಅಭಿತೇಜ್ ಸದ್ಯ ಆಮ್ ಆದ್ಮಿ ಪಕ್ಷದ ...ಸ್ಯರಾಗಿದ್ದರೂ ಅವರು ಚುನಾವಣೆ ...ಜಕೀಯದಿಂದ ದೂರ ಉಳಿದಿದ್ದಾರೆ. ಕೇವಲ ...ರ ಪ್ರಾಯದ ಅಭಿತೇಜ್ ಓದಿದ್ದು ಮತ್ತು ...ದದ್ದು ಚಂದೀಘರ್‌ನಲ್ಲಿ, ಮ್ಯಾನೇಜ್‌ಮೆಂಟ್‌ನಲ್ಲಿ ...ಪದವೀಧರರಾಗಿರುವ ಅಭಿತೇಜ್ ಮೂರು ತಿಂಗಳ ...ದೆ 'ಯೂತ್ ಫಾರ್ ಶಹೀದ್ ಎ ಆಜಮ್' ...ಬ ಸಂಘಟನೆಯನ್ನು ಹುಟ್ಟುಹಾಕಿದ್ದಾರೆ. ...ಹೀದ್ ಎ ಆಜಮ್' ಎಂದರೆ ದೇಶಕ್ಕಾಗಿ ಮಡಿದ ...ಹುತಾತ್ಮರಲ್ಲೇ ಅತಿ ಶ್ರೇಷ್ಠರಾದವರು ಎಂದು ಅರ್ಥ. ...ದರೆ ಇಲ್ಲಿ ಶಹೀದ್ ಎ ಆಜಮ್ ಎಂದರೆ ...ದು ಭಗತ್ ಸಿಂಗ್ ಎಂದೇ ಅವರ ನಿಲುವು. ...ಗ ಈ ಸಂಘಟನೆಯ ಮೂಲಕ ದೇಶದ ...ುವಕರಿಗೆ ಭಗತ್ ಸಿಂಗ್ ಅವರ ಜೀವನ, ...ೋರಾಟ ಮತ್ತು ನಿಲುವುಗಳನ್ನು ಪರಿಚಯಿಸುವ ...ಕೆಲಸವನ್ನು ಅಭಿತೇಜ್ ಮಾಡುತ್ತಿದ್ದಾರೆ.

...ಈ ನಿಟ್ಟಿನಲ್ಲಿ ಅಭಿತೇಜ್ ಸಿಂಗ್ ಅವರನ್ನು ...ನ್ನೆ ಬೆಂಗಳೂರಿನ ಪತ್ರಕರ್ತರ ಅಧ್ಯಯನ ಕೇಂದ್ರ ...ತ್ತು ಡಿವೈಎಫ್‌ಐ ಜಂಟಿಯಾಗಿ ಬೆಂಗಳೂರಿಗೆ ...ಹ್ವಾನಿಸಿದ್ದವು. ಮಂಗಳವಾರ ಸ್ಥಳೀಯ ...ಪತ್ರಕರ್ತರೊಂದಿಗೆ ಒಂದು ಸಂವಾದವನ್ನೂ ...ರ್ಪಡಿಸಲಾಗಿತ್ತು. ಸಂವಾದಕ್ಕೂ ಮುನ್ನ ...ಶ್ರೀಪಾದ ಅವರು ಪತ್ರಿಕೆಗಾಗಿ ಅಭಿತೇಜ್ ಸಿಂಗ್ ...ರನ್ನು ಮಾತನಾಡಿಸಿದರು. ಆ ಸಂದರ್ಶನ ಇಲ್ಲಿದೆ.

** ಪ್ರಶ್ನೆ: ಬೆಂಗಳೂರಿಗೆ ಸ್ವಾಗತ. ಭಗತ್ ಸಿಂಗ್ ...ರ ಕುಟುಂಬ ಮತ್ತು ಭಗತ್ ಸಿಂಗ್ ಅವರ ಲೆಗಸಿ ಕುರಿತಾಗಿ ನಮ್ಮೊಂದಿಗೆ ನಿಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತೀರಾ?*

ಅಭಿತೇಜ್ ಸಿಂಗ್: ನನ್ನ ಪೂರ್ಣ ಹೆಸರು ಅಭಿತೇಜ್ ಸಿಂಗ್ ಸಂಧು. ನಾನು ಶಹೀದ್-ಎ-ಆಜಮ್ ಭಗತ್ ಸಿಂಗ್ ಅವರ ತಮ್ಮ ಸರ್ದಾರ್ ಕುಲ್ಬೀರ್ ಸಿಂಗ್ ಅವರ ಮೊಮ್ಮಗ. ಭಗತ್ ಸಿಂಗ್ ಅವರಿಗೆ ಐವರು ಅಣ್ಣತಮ್ಮಂದಿರು. ಭಗತ್ ಸಿಂಗ್ ದೊಡ್ಡವರು, ಅವರ ನಂತರ ಕುಲ್ಬೀರ್ ಸಿಂಗ್, ಕುರ್ದಾರ್ ಸಿಂಗ್, ವೀರ್ ಸಿಂಗ್ ಮತ್ತು ಬೀರ್ ಸಿಂಗ್. ಇಂದು ದೇಶದಲ್ಲಿ ನಿರ್ಮಾಣವಾಗುತ್ತಿರುವ ವಾತಾವರಣ, ಇಲ್ಲಿನ ಯುವಜನತೆ ಆಯ್ದುಕೊಳ್ಳುತ್ತಿರುವ ದಾರಿಗಳ ಕುರಿತು ಚರ್ಚಿಸುವುದು ಸಹ ನಾನು ಇಂದು ಬೆಂಗಳೂರಿಗೆ ಬರಲು ಒಂದು ಕಾರಣ.

ನಮ್ಮಲ್ಲಿ ಭಗತ್ ಸಿಂಗ್ ಅವರ ಸಿದ್ಧಾಂತಗಳು ಮತ್ತು ಆದರ್ಶಗಳನ್ನು ಯುವಜನತೆಯನ್ನೊಳಗೊಂಡಂತೆ ಎಲ್ಲರೊಂದಿಗೂ ನಿರಂತರ ಸಂವಾದವನ್ನು ನಡೆಸುವಂತಹ ಕೆಲವೇ ಕೆಲವು ಸಂಘಟನೆಗಳಿವೆ. ಶಾಲಾಕಾಲೇಜುಗಳಲ್ಲಿ ಯುವಜನತೆಯೊಂದಿಗೆ ಸಂವಾದ, ಚರ್ಚೆಗಳನ್ನು ನಡೆಸುತ್ತಿರುವ ಸಮಾನ ಮನಸ್ಕ ಸಂಘಟನೆಗಳೊಂದಿಗೆ ವೇದಿಕೆಯನ್ನು ಹಂಚಿಕೊಳ್ಳಲು ನಾವು 'ಶಹೀದ್-ಎ-ಆಜಮ್ ಭಗತ್ ಸಿಂಗ್ ಯುವ ಒಕ್ಕೂಟ'ವನ್ನು ಪ್ರಾರಂಭಿಸಿದ್ದೇವೆ. ಇಂದು ನಮ್ಮಲ್ಲಿನ ಶಕ್ತಿಗಳು ಸಹ ಯುವಜನತೆಯನ್ನು ಕೇಂದ್ರೀಕರಿಸುತ್ತಿವೆ. ಇವುಗಳಲ್ಲಿ ಬಹುಪಾಲು ಸಂಸ್ಥೆಗಳು ಯುವಜನತೆಯ ಮನಸ್ಸನ್ನು ಸಂಕುಚಿತಗೊಳಿಸುತ್ತಿವೆ. ಜಾತಿ, ಧರ್ಮಗಳ ಕುರಿತಂತೆ ಮುಕ್ತವಾಗಿ ತೆರೆದುಕೊಳ್ಳಲು ನಿರಾಕರಿಸುವ (ಮುಚ್ಚಿಕೊಂಡ) ಮನಸ್ಸುಗಳನ್ನು ರೂಪಿಸುತ್ತಿವೆ. ಅವರಲ್ಲಿ ಅಸಹನೆಯನ್ನು ಬೆಳೆಸುತ್ತಿವೆ.

** ಪ್ರಶ್ನೆ: ನಮ್ಮೆಲ್ಲರ ಆತಂಕವೇನೆಂದರೆ ಇಂದಿನ ಯುವಜನತೆ ಬಲಪಂಥೀಯ ಐಡಿಯಾಲಜಿಗಳ ಕಡೆ ಏತಕ್ಕೆ ಆಕರ್ಷಿತರಾಗುತ್ತಿದ್ದಾರೆ ಎಂಬುದಾಗಿದೆ. ಏತಕ್ಕೆ ಬಲಪಂಥೀಯ ಸನಾತನವಾದದ ಕಡೆಗೆ ಯುವಕರು ವಲಸೆ ಹೋಗುತ್ತಿದ್ದಾರೆ? ಈ ವಲಸೆಯನ್ನು ನೀವು ಹೇಗೆ ಅರ್ಥೈಸುತ್ತೀರಿ?*

ಉತ್ತರ: ಹೂ... ಇದಕ್ಕೆ ಒಂದು ನಿರ್ದಿಷ್ಟ ಉತ್ತರ ಕೊಡಲು ಕಷ್ಟವಾಗಬಹುದಾದರೂ ನನಗನಿಸುವಂತೆ ಇಂದು ದೇಶದಲ್ಲಿ ಪ್ರಮುಖವಾಗಿ ನಾಯಕತ್ವದ ಕೊರತೆ ನಮ್ಮನ್ನು ಕಾಡುತ್ತಿದೆ. ಇದು ಒಂದು ಕ್ರೈಸಿಸ್ ಆಗಿದೆ. ಇಲ್ಲಿನ ರಾಜಕೀಯ ವಲಯದಲ್ಲಿ ಮಾತ್ರವಲ್ಲ, ಎಲ್ಲಾ ನೆಲೆಯಿಂದಲೂ ಎಡ-ಬಲ ಎಲ್ಲವನ್ನೂ ಒಳಗೊಂಡಂತೆ ಭಗತ್ ಸಿಂಗ್ ಮಾದರಿಯ ನಾಯಕರು ಕಂಡುಬರುತ್ತಿಲ್ಲ. ನಮಗೆ ಮುಂದಿನ ತಲೆಮಾರನ್ನು ರೂಪಿಸುವ ನಾಯಕರು

ಸಂದರ್ಶನ


ಬೇಕಾಗಿದ್ದಾರೆಯೇ ಹೊರತು ಮುಂದಿನ ಚುನಾವಣೆಯನ್ನು ಗೆಲ್ಲುವ ನಾಯಕರಲ್ಲ. ಇಂದು ಬಹುಪಾಲು ಯುವಕರು ಸ್ವಕೇಂದ್ರಿತ ಚಿಂತನೆಯಲ್ಲಿ ತೊಡಗಿದ್ದಾರೆ. ಇಲ್ಲಿ ಸ್ವಕೇಂದ್ರಿತವು ಭ್ರಷ್ಟತೆಯನ್ನು ಸಂಕೇತಿಸುತ್ತದೆ. ಯುವಜನತೆಗೆ ಇಂದು ಒಳ್ಳೆಯ ದಿನಗಳಲ್ಲ. ಇಷ್ಟೆಲ್ಲ ಹೇಳಿದ ನಂತರವೂ ಯುವಜನತೆ ಭಗತ್ ಸಿಂಗ್ ಅವರನ್ನು ಆರಾಧಿಸುತ್ತಾರೆ. ಅವರನ್ನು ಕುರಿತು ಸಾಮಾಜಿಕ ವೇದಿಕೆಗಳಲ್ಲಿ, ತಾಣಗಳಲ್ಲಿ ಚರ್ಚಿಸುತ್ತಾರೆ.

** ಪ್ರಶ್ನೆ: ಆದರೆ ಬಲಪಂಥೀಯ ಸಂಘಟನೆಗಳತ್ತ ವಲಸೆಗೊಳ್ಳುತ್ತಿರುವ ಇಂದಿನ ಯುವಜನತೆ ಭಗತ್ ಸಿಂಗ್ ಅವರನ್ನು ಅನುಸರಿಸುತ್ತಿದ್ದಾರೆ ಅಥವಾ ಅನುಸರಿಸುತ್ತಾರೆ ಎಂದು ನಿಮಗೆ ಇನ್ನೂ ನಂಬಿಕೆ ಇದೆಯೇ?*

ಉತ್ತರ: ಇದರ ಭರವಸೆ ಮತ್ತು ಆಶಯಗಳ ಕುರಿತಾಗಿ ಜನರಿಗೇ ಬಿಡುತ್ತೇನೆ. ಯುವಕರನ್ನು ಭಗತ್ ಸಿಂಗ್ ಅವರ ತತ್ವಗಳ ಕಡೆಗೆ ಸೆಳೆಯುವುದು ನನ್ನ ಕರ್ತವ್ಯ.

** ಪ್ರಶ್ನೆ: ನಾನೇತಕ್ಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆಂದರೆ ಇಂದು ಬಲಪಂಥೀಯ ಸಂಘಟನೆಗಳು ಮತ್ತು ರಾಜಕಾರಣಿಗಳು ಭಗತ್ ಸಿಂಗ್ ಅವರನ್ನು ಹೈಜಾಕ್ ಮಾಡಿದ್ದಾರೆ ಅದಕ್ಕೆ.*

ಉತ್ತರ: ಇಲ್ಲ, ಪ್ರತಿಯೊಬ್ಬರೂ ತಾವು ಭಗತ್ ಸಿಂಗ್ ಅವರ ಸಿದ್ಧಾಂತವನ್ನು ಹೈಜಾಕ್ ಮಾಡಿದ್ದೇವೆ ಎಂದು ನಂಬಿದ್ದಾರೆ. ಭಗತ್ ಸಿಂಗ್ ಅವರ ಶಕ್ತಿ ಎಷ್ಟು ದೊಡ್ಡದೆಂದರೆ ಅವರನ್ನು ಹೈಜಾಕ್ ಮಾಡಲು ಯಾರಿಂದಲೂ ಸಾಧ್ಯವಿಲ್ಲ, ಅಷ್ಟೇಕೆ ಅವರ ಕುಟುಂಬಕ್ಕೂ, ಅವರನ್ನು ಹೈಜಾಕ್ ಮಾಡಲು ಸಾಧ್ಯವಿಲ್ಲ, ಯಾಕೆಂದರೆ ಭಗತ್ ಸಿಂಗ್ ಅವರ



ಸಿದ್ಧಾಂತ ಜನರಲ್ಲಿ ಒಂದು ಬಗೆಯ ಪ್ರಜ್ಞೆಯನ್ನು ಹುಟ್ಟುಹಾಕುತ್ತವೆ. ಅವರ ಸಿದ್ಧಾಂತದೊಂದಿಗೆ ಗುರುತಿಸಿಕೊಳ್ಳ ಬಯಸುವವನು ಮಾತ್ರ ಅವರನ್ನು ಹಂಚಿಕೊಳ್ಳಬಲ್ಲರು.

** ಪ್ರಶ್ನೆ: ಅದು ಸರಿ, ಆದರೆ ಇಂದು ಸಾಮಾಜಿಕ ಜಾಲತಾಣ ಮತ್ತು ಅಂತರ್ಜಾಲ ನೆಟ್‌ವರ್ಕ್‌ಅನ್ನು ಗಮನಿಸಿದರೆ ಬಹುಪಾಲು ಯುವಜನತೆ ಬಲಪಂಥೀಯ ದೃಷ್ಟಿಕೋನದಿಂದ ಭಗತ್ ಸಿಂಗ್ ಅವರನ್ನು ವ್ಯಾಖ್ಯಾನಿಸುತ್ತಾರೆ. ಇದು ಹೇಗೆ ಸಾಧ್ಯವಾಯಿತು? ಇದನ್ನು ಮೀರುವುದು ಹೇಗೆ?*

ಉತ್ತರ: ನೀವು ಹೇಳುತ್ತಿರುವುದು ನಿಜ. ನಮ್ಮಲ್ಲಿರುವ ಅನೇಕ ಯುವಕರಲ್ಲಿ ಇರುವ ಒಂದು ಸೀಮಿತ ತಿಳಿವಳಿಕೆಯೆಂದರೆ ಭಗತ್ ಸಿಂಗ್ ಎಂಬ ಪಂಜಾಬಿನ ಯುವಕನೊಬ್ಬ ಸ್ವಾತಂತ್ರ ಚಳವಳಿಯಲ್ಲಿ ಭಾಗವಹಿಸಿ ಬಾಂಬನ್ನು ಎಸೆದ, ಆದ್ದರಿಂದ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಟರು ಎಂಬಂತಿದೆ. ಅದು ಸರಿಯಲ್ಲ, ಭಗತ್ ಸಿಂಗ್ ಅವರ ಹೋರಾಟ ಅವರ ಸಿದ್ಧಾಂತದಷ್ಟೇ ಮುಖ್ಯ. ಅವರ ಸಿದ್ಧಾಂತವನ್ನು ಎಲ್ಲರಿಗೂ ಗೊತ್ತುಮಾಡಲು ಸಾಧ್ಯವಾಗಿರದಿದ್ದದ್ದು ಒಂದು ದುರಂತ.

** ಪ್ರಶ್ನೆ: ಅಷ್ಟೇ ಅಲ್ಲ, ಈಗ ಕೆಲವರು ಭಗತ್ ಸಿಂಗ್ ಅವರ ಕೊರಳಿಗೆ ಜನಿವಾರವನ್ನು ಸಹ ಹಾಕಿದ್ದಾರೆ. ಬಲಪಂಥೀಯರ ಕೈಯಲ್ಲಿ ಈ ತರಹದ ಬ್ರಾಹ್ಮಣೀಕರಣಗೊಂಡ ಭಗತ್ ಸಿಂಗ್ ಅವರ ಫೋಟೋಗಳನ್ನು ವಿದ್ಯಾರ್ಥಿಗಳಾಗಿದ್ದಾಗ ನಾವು ನೋಡುತ್ತಿದ್ದೆವು. ಇದರ ಬಗ್ಗೆ ನಿಮ್ಮ ಅನಿಸಿಕೆ ಏನು?*

ಉತ್ತರ: ನೋಡಿ, ಈ ಮಾದರಿಯ ನೂರಾರು ಫೋಟೋಗಳನ್ನು ನಾವು ಕಾಣಬಹುದು. ಪಗಡಿಯನ್ನು ಧರಿಸಿದ ಭಗತ್ ಸಿಂಗ್ ಅವರ ನೂರಾರು ಫೋಟೋಗಳಿವೆ. ಅದು ಶಾಲೆಯ ನಾಟಕಗಳಲ್ಲಿ ಬಳಸುತ್ತಿದ್ದ ಬಿಳೀ ಬಣ್ಣದ ಪಗಡಿ. ಕಳೆದ 70 ವರ್ಷಗಳಿಂದ ಈ ಪಗಡಿ ಧರಿಸಿದ ಫೋಟೋಗಳ ಬಣ್ಣವೂ ಆಯಾ ರಾಜಕೀಯ ಪಕ್ಷಗಳ ಸಿದ್ಧಾಂತಕ್ಕೆ ಮತ್ತು ರಾಜಕೀಯ ಲಾಭಕ್ಕೆ ಬದಲಾಗುತ್ತಾ ಹೋಗಿದೆ. ಉದಾಹರಣೆಗೆ, ಅಕಾಲಿದಳ ಅವರು ಬಳಸುವ ಭಗತ್ ಸಿಂಗ್ ಫೋಟೋದಲ್ಲಿ ಪಗಡಿ ನೀಲಿ ಬಣ್ಣವನ್ನು ಹೊಂದಿದೆ. ಹಾಗೆಯೇ ಇನ್ನೊಂದು ರಾಜಕೀಯ ಪಕ್ಷದ ಫೋಟೋಗಳಲ್ಲಿ ಅದು ಕೇಸರಿ ಬಣ್ಣವನ್ನು ಪಡೆದಿದೆ. ಆದರೆ ಭಗತ್ ಸಿಂಗ್ ಅವರ ಸಿದ್ಧಾಂತಗಳಿಗೂ, ಪಗಡಿಗಳ ಈ ಬಣ್ಣಗಳಿಗೂ ಯಾವುದೇ ಸಂಬಂಧವಿಲ್ಲ. ಕಳೆದ 70 ವರ್ಷಗಳಿಂದ ಭಗತ್ ಸಿಂಗ್ ಅವರ ಫೋಟೋಗಳಿಗೆ ಹೂಹಾರ ಹಾಕುತ್ತಿದ್ದೇವೆ, ಅವರ ವಿಗ್ರಹಗಳನ್ನು ನಿರ್ಮಿಸುತ್ತಿದ್ದೇವೆ. ಆದರೆ ಸಿದ್ಧಾಂತವನ್ನು ಪರಿಚಯಿಸುವ ಕೆಲಸ ಆಗಿಲ್ಲ, ಆದ್ದರಿಂದಲೇ ಈಗ ನಮ್ಮ ಸಂಘಟನೆ ಇವತ್ತು ಇತರೆ ವೇದಿಕೆಗಳೊಂದಿಗೆ ಕೈಜೋಡಿಸಿ ಭಗತ್ ಸಿಂಗ್ ಅವರ ಸಿದ್ಧಾಂತವನ್ನು ಕೆಳಮಟ್ಟದಲ್ಲಿ ಜಾರಿಗೊಳಿಸಲು ಯತ್ನಿಸುತ್ತಿದೆ.

** ಪ್ರಶ್ನೆ: ನನ್ನ ಮೂಲಭೂತ ಪ್ರಶ್ನೆಯನ್ನು ಮತ್ತೆ ಕೇಳುತ್ತಿದ್ದೇನೆ, ಮೂಲಭೂತ ಸಂಘಟನೆಗಳತ್ತ ವಲಸೆಹೋದ ಯುವಜನತೆಯನ್ನು ಮರಳಿ ಪ್ರಗತಿಪರ ಸಂಘಟನೆಗಳ ತೆಕ್ಕೆಗೆ ತರುವುದು ಹೇಗೆ?*

ಉತ್ತರ: ಇದು ಕೇವಲ ಭಗತ್ ಸಿಂಗ್ ಅವರ ಕುಟುಂಬದ ಜವಾಬ್ದಾರಿ ಅಲ್ಲ, ಇದು ಎಲ್ಲರ ಜವಾಬ್ದಾರಿ. ಇದು ಭಗತ್ ಸಿಂಗ್ ಅವರ ಎಲ್ಲಾ ಅನುಯಾಯಿಗಳ ಕರ್ತವ್ಯ. ವೈಯಕ್ತಿಕವಾಗಿ ನನಗೆ ಈ ಎಡಪಂಥೀಯ-ಬಲಪಂಥೀಯ ಕುರಿತಾಗಿ ಗೊತ್ತಿಲ್ಲ, ಭಗತ್ ಸಿಂಗ್ ಅವರ ಸಿದ್ಧಾಂತವನ್ನು ಮಾತ್ರ ನಾನು ಅರಿತಿದ್ದೇನೆ. ಅವರ ಸಿದ್ಧಾಂತವನ್ನು ಯುವಜನತೆಯತ್ತ ಕೊಂಡೊಯ್ಯುವುದು ಮಾತ್ರ ನನ್ನ ಕರ್ತವ್ಯ ಮತ್ತು ಅದನ್ನು ನಾನು ಮಾಡಲು ಯತ್ನಿಸುತ್ತಿದ್ದೇನೆ.

** ಪ್ರಶ್ನೆ: ಇಂದಿನ ಯುವಜನತೆಯನ್ನೂ ಕೋಮುವಾದ ಮುತ್ತಿಕೊಂಡಿದೆ. ಆದ್ದರಿಂದ ಅವರು ದಾದ್ರಿಯಲ್ಲಿ ನಡೆದ ಹತ್ಯೆಯನ್ನೂ ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು?*

ಉತ್ತರ: ಹೌದು ಈ ವಿಷಯ ಕುರಿತಾಗಿಯೇ ನಾನು ಹೇಳುತ್ತಿದ್ದೇನೆ. ಯುವಜನತೆಯ ಮನಸ್ಸು ಸಂಪೂರ್ಣವಾಗಿ ಭ್ರಷ್ಟಗೊಂಡಿದೆ. ಇಂದಿನ ಯುವ ಜನತೆ ಕ್ಯಾಪಿಟಲ್ ಶಕ್ತಿಗಳಿಗೆ ಬಲಿಯಾಗಿದ್ದಾರೆ. ಸಮಾಜದ ಕುರಿತಾಗಿ ಅವರಲ್ಲಿ ಕಳಕಳಿ ಇಲ್ಲ, ಆದ್ದರಿಂದ ಭಗತ್ ಸಿಂಗ್ ಅವರನ್ನು ಯುವಕರಿಗೆ ಪರಿಚಯಿಸುವುದು ಇವತ್ತಿನ ತುರ್ತು ಕೆಲಸವಾಗಿದೆ.

** ಪ್ರಶ್ನೆ: ಪ್ರಾಕ್ಟಿಕಲ್ ಆಗಿ ಯುವಜನತೆಯನ್ನು ಒಳಗೊಂಡಂತೆ ಇದನ್ನು ಒಂದು ಪ್ರಗತಿಪರ ಸಂಘಟನೆಯಾಗಿ ಕಟ್ಟುವುದು ಹೇಗೆ?*

ಉತ್ತರ: ನಮ್ಮ 'ಶಹೀದ್-ಎ-ಆಜಮ್ ಯುವಜನತೆ ವೇದಿಕೆ' ಹಲವಾರು ಸದಸ್ಯರನ್ನೊಳಗೊಂಡ ವೇದಿಕೆ. ನಾವು ಈ ವೇದಿಕೆಯನ್ನು ಕಟ್ಟುತ್ತೇವೆ. ಎಲ್ಲಾ ಐಡಿಯಾಲಜಿಗಳನ್ನು ಬಳಸಿಕೊಳ್ಳುತ್ತೇವೆ, ರೋಟಿ, ಕಪಡಾ ಔರ್ ಮಕಾನ್ ಎನ್ನುವ ನೆಲೆಯಲ್ಲಿ.

** ಪ್ರಶ್ನೆ: ಈಗ ಪ್ರಜಾಪ್ರಭುತ್ವ ಇಲ್ಲಿ ಇರುವುದರಿಂದ ಭಗತ್ ಸಿಂಗ್ ಅವರ ಸಿದ್ಧಾಂತ ಮಾತ್ರವಲ್ಲ, ಅವರ ಸಶಸ್ತ್ರ ಹೋರಾಟದ ಬಗ್ಗೆ ಜನರ ಅಭಿಪ್ರಾಯ ಏನಿದೆ ಎಂದು ನಿಮಗನ್ನಿಸುತ್ತದೆ?*

ಉತ್ತರ: ಭಾರತದ ಪ್ರತಿಯೊಂದು ಕುಟುಂಬ ಇವತ್ತು ಭಗತ್ ಸಿಂಗ್ ಅವರೊಂದಿಗೆ ಗುರುತಿಸಿಕೊಳ್ಳಬೇಕು. 1931ರಲ್ಲಿ ತಮ್ಮ 23ನೇ ವಯಸ್ಸಿನಲ್ಲಿ ಭಗತ್ ಸಿಂಗ್ ಹುತಾತ್ಮರಾದರು. ನೇಣುಗಂಬಕ್ಕೇರಲು ಸಿದ್ಧವಾಗಿದ್ದ ಯುವಕ ಭಗತ್ ಸಿಂಗ್ ಜೈಲಿನ ಗೋಡೆಗಳ ಮೇಲೆ 'ಏ ಇಲಾಹಿ ಮುಂದೆಯೂ ಆ ಒಂದು ದಿನ ಬರುತ್ತದೆ, ಆಗ ನಮ್ಮದೇ ಜಮೀನ್ ಮತ್ತು ನಮ್ಮದೇ ಆಕಾಶವಿರುತ್ತದೆ' ಎಂದು ಬರೆದಿದ್ದರು. ಲಕ್ಷಾಂತರ ಜನತೆ ಸ್ವಾತಂತ್ರಕ್ಕಾಗಿ ತಮ್ಮ ಜೀವ ತ್ಯಾಗ ಮಾಡಿದರು. ಆದರೆ ನಾವು ಭಗತ್ ಸಿಂಗ್ ಅವರನ್ನು ಸರಿಯಾಗಿ ಅರಿಯುವಲ್ಲಿ ಎಡವುತ್ತಿದ್ದೇವೆ, ಅವರ ಹೋರಾಟದ ಮಾದರಿಯನ್ನು ಅರಿತುಕೊಳ್ಳುವಲ್ಲಿ ವಿಫಲರಾಗುತ್ತಿದ್ದೇವೆ. ಸ್ವಾತಂತ್ರ ಚಳವಳಿಯ ಸಂದರ್ಭದಲ್ಲಿ ಎರಡು ಬಗೆಯ ಆಶಯಗಳಿದ್ದವು. ಒಂದು ನಮ್ಮದೇ ಸರ್ಕಾರವನ್ನು ಸ್ಥಾಪಿಸುವುದು, ಮತ್ತೊಂದು ಆಶಯವು ಪರ್ಯಾಯ ವ್ಯವಸ್ಥೆಯನ್ನೇ ರೂಪಿಸಿಕೊಳ್ಳುವುದು. ಭಗತ್ ಸಿಂಗ್ ಅವರ ಹೋರಾಟ ಸಾಮ್ರಾಜ್ಯಶಾಹಿಯ ವಿರುದ್ಧವಾಗಿತ್ತು, ಆದರೆ ಅಂದು ಕ್ರಾಂತಿಕಾರಿಗಳು ಕಂಡ ಕನಸು ಇಂದಿಗೂ ಅಪೂರ್ಣವಾಗಿದೆ. ಆ ಕಾಲದ ಸಾಮ್ರಾಜ್ಯಶಾಹಿ ವ್ಯವಸ್ಥೆ ಇಂದಿಗೂ ಮುಂದುವರೆಯುತ್ತಿದೆ. ಭಗತ್ ಸಿಂಗ್ ಅವರು 'ಸ್ಪಿರಿಟ್ ಆಫ್ ಡೆಮಾಕ್ರಸಿ' ಬಗ್ಗೆ ಮಾತನಾಡುತ್ತಿದ್ದರು. ಅದು ಸಮಾನತೆಯಿಂದ ಮಾತ್ರ ಸಾಧ್ಯವೆಂದು ಹೇಳುತ್ತಿದ್ದರು. ಸಾಮಾಜಿಕ, ರಾಜಕೀಯ, ಆರ್ಥಿಕ ಸಮಾನತೆ ಕುರಿತಾಗಿ ಅವರು ಹೇಳುತ್ತಿದ್ದರು. ಆದರೆ 70 ವರ್ಷಗಳ ನಂತರವೂ ಹಿಂದೂಸ್ತಾನ ಮತ್ತು ಇಂಡಿಯಾ ನಡುವಿನ ವ್ಯತ್ಯಾಸ ಬೆಳೆಯುತ್ತಿದೆ. 'ಶಹೀದ್ -ಎ- ಆಜಮ್' ಎಂಬುದು ಬರೀ ಭಾವಾವೇಶವಲ್ಲ, ಅವರು ಅಹಿಂಸಾತ್ಮಕವಾಗಿ ಹೋರಾಟ ಮಾಡಿದ್ದರು. ಲೇಖನಿಯ ಮೂಲಕವೂ ಹೋರಾಟ ಮಾಡಿದ್ದರು. 23ನೇ ವಯಸ್ಸಿನ ಭಗತ್ ಸಿಂಗ್ ಅವರು ಕೋರ್ಟಿನಲ್ಲಿ ಬ್ರಿಟಿಷರಿಗೆ ಡಿಬೇಟ್‌ನ ಮೂಲಕ, ಚರ್ಚೆಯ ಮೂಲಕ ವಾದಿಸಲು ಆಹ್ವಾನಿಸುತ್ತಿದ್ದರು. ಬಂದೂಕಿನ ಮೂಲಕ ಅಲ್ಲ, ಭಗತ್ ಸಿಂಗ್ ಹಿಂಸೆಯನ್ನು ಕೈಗೆತ್ತಿಕೊಂಡವರು ಎಂದು ತಪ್ಪಾಗಿ ಅರ್ಥೈಸಲಾಗಿದೆ. ಆದರೆ ಭಗತ್ ಸಿಂಗ್ ಅವರು ಅಹಿಂಸೆಯಲ್ಲಿ ನಂಬಿಕೆ ಇಟ್ಟಿದ್ದರು.

** ಪ್ರಶ್ನೆ: ನೀವು ಚುನಾವಣಾ ರಾಜಕೀಯಕ್ಕೆ ಸೇರಲು ಬಯಸುತ್ತೀರಾ?*

ಉತ್ತರ: ಇಲ್ಲ, ನಾನು ರಾಜಕೀಯ ಪ್ರವೇಶಿಸಲು ಬಯಸುವುದಿಲ್ಲ, ಇದು ನನಗೆ ಒಪ್ಪಿಗೆ ಇಲ್ಲ. ಲೇಖಕರು, ಕಲಾವಿದರು, ಸಂಗೀತಗಾರರು, ಹಾಡುಗಾರರು ಪ್ರತಿಯೊಬ್ಬರು ಒಂದು ಸಾಮಾನ್ಯವಾದ ಒಂದು ಸಮಾನಮನಸ್ಕ ಒಕ್ಕೂಟವನ್ನು ಕಟ್ಟಬೇಕು.

** ಪ್ರಶ್ನೆ: ಸದ್ಯದ ಭವಿಷ್ಯದಲ್ಲಿ ನಿಮ್ಮ ಆಶಯಗಳೇನು?*

ಉತ್ತರ: ಇವತ್ತು ಧಾರ್ಮಿಕ ಮತೀಯವಾದಕ್ಕೆ ಬಲಿಯಾಗಿರುವ ನಮ್ಮ ಯುವಜನತೆಯನ್ನು ಒಳಗೊಳ್ಳುವಂತೆ ಮತ್ತು ಸಂಘ ಪರಿವಾರದ ಹುಸಿಯಾದ ಮತ್ತು ಮತೀಯವಾದದ ಹಿಂದುತ್ವದಿಂದ ಈ ಯುಜನತೆಯನ್ನು ಹೊರತರಲು ನಮ್ಮ ಜನಪರ ಸಂಘಟನೆಗಳು ಒಗ್ಗೂಡಿ ಶ್ರಮಿಸಬೇಕಿದೆ. ಭಗತ್ ಸಿಂಗ್ ಅವರು ಇಂದಿಗೂ ಪ್ರಸ್ತುತ ಮಾತ್ರವಲ್ಲ, ಅವರು ಯುವಜನತೆಗೆ ಸ್ಫೂರ್ತಿಯೂ ಹೌದು. ಭಗತ್ ಸಿಂಗ್ ಅವರ ಸಿದ್ಧಾಂತವನ್ನು ಜನತೆಗೆ ಪರಿಚಯಿಸಿದರೆ ಬದಲಾವಣೆ ಖಂಡಿತ ಸಾಧ್ಯ.

ಸಂದರ್ಶಕ: ಬಿ. ಶ್ರೀಪಾದ

ಕಳಸಾ ಹೋರಾಟದ ಪರಾವಲಂಬಿ ಕೀಟಗಳು


ಜಯಮೃತ್ಯುಂಜಯ ಸ್ವಾಮಿ

ಕಳಸಾ ಬಂಡೂರಿ ಹೋರಾಟ ಸಂಪೂರ್ಣ ರೈತರ ಕೈತಪ್ಪಿ ಹೋಗುತ್ತಿದೆ. ಅದೇನಿದ್ದರೂ ಈಗ ಪೊಲಿಟಿಷಿಯನ್‌ಗಳ ಪಗಡೆಯಾಟ ಮತ್ತು ಪುಡಿ ನಾಯಕರುಗಳ ಹೋರಾಟದ ವಸ್ತುವಾಗಿ ಮಾತ್ರ ಉಳಿದಿದೆ. ನೀರಿಗಾಗಿ ಸಂತ್ರಸ್ತ ರೈತರ ನೈಜ ಕೂಗು ಈಗಲೂ ಮೊಳೆಯುತ್ತಿದೆಯಾದರೂ ಅದು ಸಮಯಸಾಧಕ 'ಓ'ರಾಟಗಾರರ ಅರಚಾಟಗಳ ನಡುವೆ ತನ್ನ ಮೊದಲ ತೀವ್ರತೆಯನ್ನು ಉಳಿಸಿಕೊಂಡಿಲ್ಲ.


ಒಂದು ಕಡೆ ರಾಜ್ಯದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಸರ್ಕಾರಕ್ಕೆ ಕಳಸಾಬಂಡೂರಿ ವಿಚಾರವಾಗಿ ಇಚ್ಛಾಶಕ್ತಿ ಇಲ್ಲ, ಮತ್ತೊಂದೆಡೆ ಕೇಂದ್ರದ ಗದ್ದುಗೆ ಏರಿರುವ ಬಿಜೆಪಿ ಸರ್ಕಾರಕ್ಕೆ ಜರೂರು ಆಲೋಚನಾ ಶಕ್ತಿಯೇ ಇಲ್ಲ. ಇಂತಹ ಬಂಡ ಪ್ರಭುತ್ವಗಳ ನಡುವೆ ವಾಟಾಳ್‌ನಂತಹ ಪರಮ ಜೋಕರ್‌ಗಳು ಕೂಡಾ ಹೋರಾಟದ ದಿಕ್ಕು ತಪ್ಪಿಸಲು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಮೊನ್ನೆ ನಡೆದ ಕಣಕುಂಬಿ ತಡೆಗೋಡೆ ಹೊಡೆಯುವ ಪ್ರಹಸನ ಕೂಡಾ ಅಂತಹದ್ದೇ ಒಂದು ಭಾಗ.


ಕಳಸಾ ಹೋರಾಟದ ವಿಪರ್ಯಾಸ


ಕಳಸಾ ಬಂಡೂರಿ ಹೋರಾಟ ಮೂಲತಃ ರೈತ ಕೇಂದ್ರಿತ ಚಳವಳಿ. ವಿಪರ್ಯಾಸವೆಂದರೆ ಇಂತಹ ಹೋರಾಟದಲ್ಲಿ ರಾಜ್ಯ ರೈತ ಸಂಘದ ಮುಖಂಡರೆನಿಸಿಕೊಂಡವರು ಮೀಸಲಿಟ್ಟು ಕೃತಾರ್ಥರಾಗಿ ತೆರೆ ಹಿಂದಕ್ಕೆ ಸರಿದಿದ್ದಾರೆ. ಇಷ್ಟೆಲ್ಲ ನಾಯಕತ್ವಗಳ ಕೊರತೆಯ ಹೊರತಾಗಿಯೂ ರೈತರ ಸಂಘರ್ಷ ನೂರು ದಿನ ಪೂರೈಸಿಯೂ ಬಿರುಸಾಗಿ ಮುನ್ನುಗ್ಗುತ್ತಿರೋದನ್ನ ಕಂಡ ಕೆಲ 'ಪಾರ್ಟ್ ಟೈಂ' ನಾಯಕರೇ ಇದೇ ನೆಪದಲ್ಲಿ 'ಫುಲ್ ಟೈಂ' ನಾಯಕರಾಗಿಬಿಡುವ ಹಪಾಹಪಿಗೆ ಬಿದ್ದಿದ್ದಾರೆ. ಇನ್ನೇನು ಕೆಲವೇ ದಿನಗಳಲ್ಲಿ ಎದುರಾಗಲಿರುವ ತಾಲೂಕು ಮತ್ತು ಜಿಲ್ಲಾ ಪಂಚಾಯತಿ ಎಲೆಕ್ಷನ್ ಮೇಲೆ ಕಣ್ಣಿಟ್ಟಿರುವ ಕೆಲ ಲೋಕಲ್ ವೀರರು ಕೂಡಾ ಕಳಸಾ ಹೋರಾಟದಲ್ಲಿ ಝುಗಮಗಿಸಲು ಯತ್ನಿಸುತ್ತಿದ್ದಾರೆ.


ನೈಸ್ ಖೇಣಿಯ ಅಂತಹದೊಂದು ಪ್ರಯತ್ನಕ್ಕೆ ಈಗಾಗಲೇ ಜನರೇ ಹಿಗ್ಗಾಮುಗ್ಗಾ ಬಾರಿಸಿ ಕಳಿಸಿದ್ದಾರೆ. ರೈತರ ಬದುಕುಗಳ ಮೇಲೆ ತನ್ನ ನೈಸ್ ಸಾಮ್ರಾಜ್ಯ ಸ್ಥಾಪಿಸಿದ ಅಶೋಕ್ ಖೇಣಿಯ ರೈತಪರ ಕಾಳಜಿ ಎಂಥದ್ದೆಂದರೆ, ಮೊನ್ನೆಯಷ್ಟೆ ಅದ್ಯಾವುದೋ ಸಿನಿಮಾ ಶೂಟಿಂಗ್ ವೇಳೆ 'ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರೋದು ಸಾಲಬಾಧೆಯಿಂದ ಅಲ್ಲ, ಮೋಜು, ಮಸ್ತಿ ಕುಡಿತದ ಕಾರಣಕ್ಕೆ' ಅಂತ ಅಣಿಮುತ್ತು ಉದುರಿಸಿದ್ದ. ರಾಜ್ಯಾದ್ಯಂತ ಆತನ ಹೇಳಿಕೆಗೆ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ಕ್ಷಮೆ ಕೇಳಿದ್ದನಾದರೂ 'ರೈತದ್ರೋಹಿ' ಕಳಂಕ ಕಳೆದುಹೋಗಿರಲಿಲ್ಲ. ಅದನ್ನು ನಿವಾರಿಸಿಕೊಳ್ಳುವ ನಿಟ್ಟಿನಲ್ಲಿ ಆತನಿಗೆ ರಹದಾರಿಯಾಗಿ ಕಂಡದ್ದೇ ಈ ಕಳಸಾ ಹೋರಾಟ ಮತ್ತು ಹುಣಸೇಮಠದ ಈ ಕೃತ್ಯದ ಪೌರೋಹಿತ್ಯ ವಹಿಸಿದ್ದ. ವಿಷಯ ತಿಳಿದ ರೈತ ನಾಯಕರು ಆಯೋಜಕರ ಬಳಿ ಬಂದು ತಗಾದೆ ತೆಗೆದಿದ್ದಲ್ಲದೆ 'ಇಲ್ಯಾವ ರೈತನೂ ಸತ್ತಿಲ್ಲ, ಬೇಕಾದರೆ ನಿಮ್ಮ ಅಕೌಂಟ್ ನಂಬರ್ ಕೊಡಿ ನಾವೇ ಹತ್ತು ಸಾವಿರ ಹಾಕ್ತೀವಿ' ಅಂತ ತರಾಟೆಗೆ ತೆಗೆದುಕೊಂಡಿದ್ದರು. ಆಮೇಲೆ ಅದ್ಯಾವುದೋ ನೇಮ್‌ಪ್ಲೇಟ್ ಸಂಘಟನೆಯೊಂದನ್ನು ತೋರಿಸಿ, ಇದು ಖೇಣಿಯ ದುಡ್ಡಲ್ಲ; ಈ ಸಂಘದ ದುಡ್ಡು ಅಂತ ಗುರುರಾಜ ಸಬೂಬು ಕೊಡಲು ಯತ್ನಿಸಿದನಾದರೂ ಖೇಣಿಯ ಆಗಮನಕ್ಕಾಗಿ ರೈತ ಕುಟುಂಬಗಳನ್ನು ಎರಡು ಗಂಟೆ ಕಾಯಿಸಿದ್ದು ಅವರ ಅಯೋಗ್ಯತೆಯನ್ನು ಎತ್ತಿ ತೋರಿಸುತ್ತಿತ್ತು. ಇದಕ್ಕಿಂತಲೂ ವಿಪರ್ಯಾಸವೆಂದರೆ ಖೇಣಿಯಂತಹ ಒಬ್ಬ ರೈತದ್ರೋಹಿಯನ್ನು ತಾವು ಹೋದಬಂದಲ್ಲೆಲ್ಲಾ ಜೊತೆಗಾಕಿಕೊಂಡು ತಿರುಗುತ್ತಿರುವ ಪಂಚಮಸಾಲಿ ಮಠದ ಜಯಮೃತ್ಯುಂಜಯ ಸ್ವಾಮಿಗಳನ್ನು ಜನರು ಆಡಿಕೊಳ್ಳುತ್ತಿದ್ದಾರೆ.

ಕಳಸಾ ಬಂಡೂರಿ ಹೋರಾಟದ ಯಾವುದೇ ಪೆಂಡಾಲ್ ಕಂಡರೂ ಒಳನುಗ್ಗಿ, ಘೋಷಣೆ ಕೂಗಿ ಫೋಟೋ ಕ್ಲಿಕ್ಕಿಸಿಕೊಳ್ಳುವ ನವಲಗುಂದದ ಜೆಡಿಎಸ್ ಶಾಸಕ ಕೋನರೆಡ್ಡಿಯದು ಪುಕ್ಕಟೆ ಪ್ರಚಾರದ ಪ್ರತಿಭಟನೆ ಎನ್ನುವುದೂ ಜನತೆಗೆ ಅರ್ಥವಾಗಿ ಹೋಗಿದೆ. ಮೊದಮೊದಲು ಆತನ ಹೋರಾಟ ಪ್ರಾಮಾಣಿಕವಾದದ್ದು ಎಂದು ನಂಬಿ ಆತನ ನಾಯಕತ್ವಕ್ಕೆ ಜೈ ಎಂದಿದ್ದವರಿಗೇ


ವಾಟಾಳ್ ನಾಗರಾಜ್


ವೀರೇಶ್


ಶಂಕರಪ್ಪ


ಕೋನರೆಡ್ಡಿ

ಈಗ ನಾಚಿಕೆಯಾಗುತ್ತಿದೆ. ಆತನ ಹೋರಾಟ, ಅವನ ಭಾಷಣಗಳಷ್ಟೇ ದಿಟ್ಟವಾಗಿದ್ದರೆ ಆತ ಈ ಭಾಗದ ರೈತ ಮುಖಂಡರಾಗಿ ರೂಪುಗೊಳ್ಳುತ್ತಿದ್ದರು ಮಾತ್ರವಲ್ಲ ಜೊತೆಗೆ ಜೆಡಿಎಸ್ ಪಕ್ಷಕ್ಕೂ ಈ ಭಾಗದಲ್ಲಿ ಭದ್ರ ನೆಲೆ ಒದಗಿಸುವ ಅವಕಾಶಗಳಿದ್ದವು. ಆದರೆ ಆತನದು ಸಮಯಸಾಧಕ ರಾಜಕಾರಣ.

ರಾಜ್ಯ (ಕಾಂಗ್ರೆಸ್) ಮತ್ತು ಕೇಂದ್ರ (ಬಿ... ಸರ್ಕಾರಗಳನ್ನು ಯಾವ ಮುಲಾಜಿಲ್ಲದೆ ಜರಿ... ಕೋನರೆಡ್ಡಿಯ ಮಾತುಗಳು ಔಪಚಾರಿಕವಷ್ಟೇ. ಆತ ಭ... ಮಾಡುವ ಪ್ರತಿ ಕಡೆಯೂ 'ನಾನು ನನ್ನ ಶಾಸಕ... ರಾಜೀನಾಮೆ ಪತ್ರವನ್ನು ನವಲಗುಂದ ಸ್ವಾಮಿ... ಪಾದಾರವಿಂದಕ್ಕೆ ಅರ್ಪಿಸಿಯೇ ಈ ಹೋರಾ... ಧುಮುಕಿರೋದು' ಅಂತ ಪಟಾಕಿ ಸುಡುತ್ತಾನೆ. ... ಕಾಳಜಿ ನಿಜಕ್ಕೂ ಪ್ರಾಮಾಣಿಕವಾಗಿದ್ದರೆ ರಾಜೀನಾಮೆ... ಯಾವುದೇ ಸ್ವಾಮಿಗೆ ಕೊಡುವ ಔಚಿತ್ಯವೇನು? ನೇರ... ಸ್ಪೀಕರ್‌ರಿಗೇ ಸಲ್ಲಿಸಬಹುದಲ್ಲವೇ? ನಮ್ಮ ಸಂವಿಧಾ... ಪ್ರಕಾರ ಒಬ್ಬ ಶಾಸಕ ರಾಜೀನಾಮೆಯನ್ನು ಸ್ಪೀಕ... ಸಲ್ಲಿಸಿದರೆ ಮಾತ್ರ ಅದು ಅಧಿಕೃತವಾಗುತ್ತದೆ. ಈ... ಕೋನರೆಡ್ಡಿಗೆ ತಿಳಿದಿಲ್ಲವೇ?

ಇನ್ನು ಧಾರವಾಡ, ಬೆಳಗಾಂ, ಗದಗ ಜಿ... ಹಳ್ಳಿಹಳ್ಳಿಯನ್ನು ಸುತ್ತಾಡುತ್ತಿರುವ ರೈತನಾಯಕ ವೀ... ಸೊಟ್ಟರಮಠ ಹಾಗೂ ಅಂಬೂರಿ ಶಂಕ್ರಪ್ಪ ಎನ್ನುವವ... ಕಳಸಾ ಬಂಡೂರಿ ಹೋರಾಟವನ್ನು ಎತ... ಉದ್ಯೋಗವಾಗಿಸಿಕೊಂಡಿದ್ದಾರೆ. ಇವರೀರ್ವರೇ ಭ... ಯಾವ ಹಂತಕ್ಕೆ ಬಂದು ತಲುಪಿದೆಯೆಂದರೆ ಆರಂ... ಈ ಹೋರಾಟದ ಮುಂಚೂಣಿ ವಹಿ... ಜಯಮೃತ್ಯುಂಜಯ ಸ್ವಾಮಿಗಳನ್ನು ಅವಮಾನಿಸಿ... ಮೊದಲಿನಿಂದಲೂ ಹೋರಾಟಕ್ಕೆ ಆರ್ಥಿಕ ... ಒದಗಿಸುತ್ತಾ ಬಂದಿದ್ದ ನರಗುಂದದ ... ಬಿ.ಆರ್.ಯಾವಗಲ್‌ರನ್ನೇ ಮೊನ್ನೆ ಕಣಕುಂಬಿ ಸಮಾ... ವೇದಿಕೆಯಿಂದ ಅನಾಮತ್ತು ಕೆಳಗಿಳಿಸಿ ಅವಮಾನಿ...

ಪೂರ್ಣ ಪ್ರಮಾಣದ ಪಾಲ್ಗೊಳ್ಳುವಿಕೆಯನ್ನೇ ಪ್ರದರ್ಶಿಸಿಲ್ಲ. ರೈತ ನಾಯಕ ಶಾಸಕ ಪುಟ್ಟಣ್ಣಯ್ಯ ಮತ್ತು ಕೋಡಿಹಳ್ಳಿ ಚಂದ್ರಶೇಖರ್ ಕಳಸಾ ಹೋರಾಟಕ್ಕೆ ಕ್ಯಾರೇ ಅಂದಿಲ್ಲ. ಕನ್ನಡ ಚಿತ್ರೋದ್ಯಮದ 'ಹೀರೋ'ಗಳು, ಕನ್ನಡ ಪರ ಸಂಘಟನೆಗಳ ಸ್ವಯಂಘೋಷಿತ ಸಂರಕ್ಷಕರುಗಳು ತಮ್ಮ ಅಮೂಲ್ಯವಾದ ಒಂದು ದಿನವನ್ನು ಕಳಸಾ ಹೋರಾಟಕ್ಕೆ ಉತ್ತರ ಕರ್ನಾಟಕದ ರೈತರ ಸಂಕಷ್ಟಗಳು.

ಮೊನ್ನೆ ಧಾರವಾಡದಲ್ಲಿ ನಡೆದ ದಸರಾ ಮಹೋತ್ಸವದ ಸಂದರ್ಭದಲ್ಲಿ ಖೇಣಿಯ ಪಟಾಲಂ, ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳಿಗೆ ಬರೋಬ್ಬರಿ ತಲಾ 'ಐದು ಸಾವಿರ' ರೂಪಾಯಿಯ ಚೆಕ್ ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಖೇಣಿಯ ಖಾಸಾ ಶಿಷ್ಯ ಗುರುರಾಜ

ಮಂಡ್ಯ: ಮೈಷುಗರ್ ಸುತ್ತ ಅಂಬಿ, ಸಿದ್ದು, ಕೃಷ್ಣ ಜುಗಲ್‌ಬಂದಿ

ಮಂಡ್ಯದ ಮಟ್ಟಿಗೆ ಕಾವೇರಿಯನ್ನು ಜೀವನಾಡಿ ಎನ್ನುವುದಾದರೆ ಮೈಷುಗರ್ ಸಕ್ಕರೆ ಕಾರ್ಖಾನೆ ಜಿಲ್ಲೆಯ ಹೃದಯವಿದ್ದಂತೆ. ಕಾವೇರಿಯ ಜೀವಚೈತನ್ಯವನ್ನು ರೈತನ ಆರ್ಥಿಕ ಮುಗುಳ್ನಗೆಯಾಗಿಸುವುದೇ ಈ ಮೈಷುಗರ್ ಕಾರ್ಖಾನೆ. ಅಂಥಾ ಹೃದಯವೇ ಇವತ್ತು ತನ್ನ ಮಿಡಿತವನ್ನು ಕಳೆದುಕೊಂಡು ಸ್ತಬ್ಧಗೊಳ್ಳುವ ದುರಂತದಲ್ಲಿದೆ. ಹಾಗೇನಾದರೂ ಆದರೆ ಅನಾಮತ್ತು ಲಕ್ಷಾಂತರ ರೈತರ ಬದುಕು ಬೀದಿಗೆ ಬೀಳುವುದು ಗ್ಯಾರಂಟಿ. ಕೇವಲ ರೈತರಿಗೆ ಮಾತ್ರವಲ್ಲ, ಸರ್ಕಾರದ ಬೊಕ್ಕಸಕ್ಕೂ ಕೋಟ್ಯಂತರ ಆದಾಯ ತಂದುಕೊಡಬಲ್ಲ ಮೈಷುಗರ್ ಕಾರ್ಖಾನೆಯನ್ನು ಅಧಿಕಾರಸ್ಥ ಜನಪ್ರತಿನಿಧಿಗಳೇ ಇವತ್ತಿನ ಈ ದುಸ್ಥಿತಿಗೆ ಕಾರಣರಾಗುತ್ತಾರೆ. ಮೈಷುಗರ್‌ಗೆ ಮತ್ತೆ ಬಲತುಂಬಿ ಅದನ್ನು ಲಾಭದತ್ತ ಮುಖ ಮಾಡಿಸುವ ಪ್ರಾಮಾಣಿಕ ಇಚ್ಛೆ ಯಾವೊಬ್ಬ ರಾಜಕಾರಣಿಯಲ್ಲೂ ಕಾಣುತ್ತಿಲ್ಲ. ಕೆಚ್ಚಲಿಗೆ ಬಾಯಿಹಾಕಿ ರಕ್ತವನ್ನೇ ಹೀರುವಂತೆ ಮೈಷುಗರ್‌ನ ಅನುದಾನವನ್ನೂ ನುಂಗಿ ನೀರು ಕುಡಿಯುತ್ತಿರುವ ರೈತದ್ರೋಹಿಗಳಿಗೆ ಅಂತ ಸದ್ಬುದ್ಧಿಯಾದರು ಎಲ್ಲಿಂದ ಬರಬೇಕು. ಹೆಚ್ಚೆಂದರೆ ರೈತರ ಒಲವು ಗಿಟ್ಟಿಸಿಕೊಳ್ಳಲು 'ಯಾವ ಕಾರಣಕ್ಕೂ ಮೈಷುಗರ್ ಮುಚ್ಚಲು ಬಿಡುವುದಿಲ್ಲ' ಎಂಬ ಬಾಯಿಪಾಠವೊಂದನ್ನು ಸಲೀಸಾಗಿ ಉದುರಿಸುತ್ತಾರಷ್ಟೆ. ಆದರೆ ನೈಜ ಇಚ್ಛಾಶಕ್ತಿ ಯಾರಲ್ಲೂ ಇಲ್ಲ.

ಹಾಗೆ ನೋಡಿದರೆ, ಆಡಳಿತ ಮಂಡಳಿ ಜೊತೆ ಸೇರಿ ಉಣ್ಣಲು ಕುಳಿತ ಎಲ್ಲಾ ರಾಜಕೀಯ ಮುಖಂಡರೇ ಮೈಷುಗರ್ ನಷ್ಟಕ್ಕೆ ಕಾರಣ. ಇದರಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಎಂಬ ಭೇದಭಾವವಿಲ್ಲ, ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪ್ರತಿಯೊಂದು ಪಕ್ಷದವರೂ ಮೈಷುಗರ್ ಹಾಳು ಮಾಡಿದವರೆ. ಸರ್ಕಾರ ಬಿಡುಗಡೆ ಮಾಡಿದ ಕೋಟ್ಯಾಂತರ ಹಣವನ್ನು ಕೂಡಾ ಬಿಟ್ಟಿಲ್ಲ. ಜಿಲ್ಲಾ ಉಸ್ತುವಾರಿ ವಹಿಸಿಕೊಂಡಿರುವ ಸಚಿವ ಅಂಬರೀಶರಂತೂ ಮಂಡ್ಯದಲ್ಲಿ ಅಂತಹದ್ದೊಂದು ಕಾರ್ಖಾನೆ ಇದೆ ಎಂಬುದನ್ನೇ ಮರೆತಂತಿದೆ.



ಮೈಷುಗರ್ ಕಾರ್ಖಾನೆ ಎರಡು ತಿಂಗಳ ಹಿಂದೆಯೇ ಕಬ್ಬು ಅರೆಯಲು ಶುರು ಮಾಡಬೇಕಿತ್ತು, ಆದರೆ ರಾಜಕಾರಣಿಗಳ ದಿವ್ಯ ನಿರ್ಲಕ್ಷ್ಯದಿಂದಾಗಿ ಇಷ್ಟು ದಿನವಾದರೂ ಅದು ಮಿಸುಗಾಡುವ ಲಕ್ಷಣ ಕಾಣಿಸುತ್ತಿಲ್ಲ. ಕಳೆದ ಮೂರು ತಿಂಗಳಿನಿಂದ ಕಾರ್ಮಿಕರಿಗೆ ಸಂಬಳವೂ ನೀಡಿರಲಿಲ್ಲ. ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಮಹದೇವನದ್ದು ಒಂಥರಾ ತೊಘಲಕ್ ದರ್ಬಾರ್ ಇದ್ದಂತೆ. ತನ್ನ ಮಾತು ಕೇಳಲಿಲ್ಲವೆಂಬ ಏಕೈಕ ಕಾರಣಕ್ಕೆ ಎಂಟಕ್ಕೂ ಹೆಚ್ಚು ಕಾರ್ಮಿಕರನ್ನು ವಜಾ ಮಾಡಿರುವ ಮಹದೇವ್ ಆಡಳಿತದಡಿ ಕಾರ್ಮಿಕರ ಗೋಳು ಹೇಳತೀರದು. ಕಾರ್ಮಿಕರ ನಡುವೆಯೇ ಗುಂಪುಗಾರಿಕೆ ಹುಟ್ಟುಹಾಕಿ ಅವರ ಒಗ್ಗಟ್ಟನ್ನು ಮುರಿಯುವ ಆಡಳಿತ ಮಂಡಳಿ ಅವರ ಮೇಲೆ ಇನ್ನಿಲ್ಲದಂತೆ ದಬ್ಬಾಳಿಕೆ ನಡೆಸುತ್ತಿದೆ. ಕಾರ್ಮಿಕ ವಜಾ ಪ್ರಕರಣ ಅಂತಹ ದಬ್ಬಾಳಿಕೆಯ ಒಂದು ನಿದರ್ಶನ ಅಷ್ಟೆ.

ಆದರೆ ಯಾವಾಗ ಮಹದೇವ್‌ನ ಆರ್ಭಟ ಅತಿಯಾಯಿತೊ ಆಗ ಬಣಗಳಾಗಿ ಹಂಚಿಹೋಗಿದ್ದ ಕಾರ್ಮಿಕರೆಲ್ಲ ಒಗ್ಗಟ್ಟಾಗಿ ರೈತ ಹೋರಾಟ ಸಮಿತಿ ಹಾಗೂ ಕರ್ನಾಟಕ ಜನಶಕ್ತಿಯ ನೇತೃತ್ವದಲ್ಲಿ ಹೋರಾಟಕ್ಕಿಳಿದಿದ್ದರು. ಹೋರಾಟ ಶುರುವಾಗಿ ಹತ್ತಾರು ದಿನ ಕಳೆದರೂ ಸಚಿವ ಅಂಬರೀಶ್ ಅತ್ತ ತಿರುಗಿಯೂ ನೋಡಲಿಲ್ಲ. ಸುಮ್ಮನೆ ಕೂತು ಪ್ರತಿಭಟನೆ ಮಾಡುವುದರಿಂದ ಈ ಕುಂಭಕರ್ಣ ವ್ಯವಸ್ಥೆ ಅಲ್ಲಾಡುವುದಿಲ್ಲ ಎಂದರಿತ ಹೋರಾಟಗಾರರು ಅಕ್ಟೋಬರ್ 9ರಂದು ಜಿಲ್ಲೆಗೆ ಆಗಮಿಸಲಿದ್ದ ರಾಹುಲ್ ಗಾಂಧಿಗೆ ಕಪ್ಪು ಬಾವುಟ ಪ್ರದರ್ಶನ ಮಾಡಲು ನಿರ್ಧರಿಸಿದ್ದರು. ಈ ಸುದ್ದಿ ಮುಟ್ಟಿದ್ದೇ ತಡ, ಅಷ್ಟು... ಕಾರ್ಮಿಕರ ಹೋರಾಟಕ್ಕೆ ಕ್ಯಾರೇ ಎನ್ನದ ಸರ್ಕಾರ... ಸಚಿವ ಮಹದೇವ ಪ್ರಸಾದ್‌ರನ್ನೇ ಕಾರ್ಖಾನೆಗೆ ... ಸಂಧಾನಕ್ಕೆ ಮುಂದಾಗಿತ್ತು. ಕಾರ್ಮಿಕರ ವಜಾ ... ಮಾಡುವುದಾಗಿ ಮತ್ತು ಕಬ್ಬು ಬೆಳೆಗಾರರಿಗೆ ಬರಬೇ... 6.30 ಕೋಟಿ ಬಾಕಿ ಪಾವತಿಸುತ್ತೇವೆ ... ಕಾರ್ಖಾನೆಯನ್ನು ಮಾರಾಟ ಮಾಡುವುದಿಲ್ಲ ... ಭರವಸೆಗಳು ಸಚಿವರಿಂದ ಬಂದ ನಂತರ... ಹೋರಾಟಗಾರರು ತಮ್ಮ ಪ್ರತಿಭಟನೆಯನ್ನು ಹಿಂಪಡೆ...

ಅಂಬರೀಶ್ ವೈಫಲ್ಯ

ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡು... ವರ್ಷಗಳಾದರೂ ಜಿಲ್ಲಾ ಉಸ್ತುವಾರಿ ಮತ್ತು ವಸತಿ ... ಅಂಬರೀಶ್‌ರದ್ದು ದಿವ್ಯ ವೈಫಲ್ಯವೆಂದೇ ಹೇಳಬ... ರಾಜಕಾರಣದಲ್ಲಿ ಬದ್ಧತೆ, ಗೊತ್ತು-ಗುರಿ ಇಲ್ಲದೆ ... ಸಲಗದಂತೆ ತಾನು ಹೇಳಿದ್ದೇ ವೇದವಾಕ್ಯ ... ತಿರುಗುತ್ತಿರುವ ಅಂಬರೀಶ್ ಹಾಗೂ ಆತನ ಬೆಂಬ... ಜಿಲ್ಲೆಯ ರೈತಾಪಿ ವರ್ಗದ ಸಮಸ್ಯೆ ಕಣ್ಣಿಗೆ ಬೀಳ... ಮೈಷುಗರ್ ಇನ್ನೂ ಆರಂಭವಾಗದಿರುವುದರಿಂದ ... ಬೆಳೆಗಾರರು ಕಂಗಾಲಾಗಿದ್ದಾರೆ. ಕಾರ್ಖಾನೆಯ... ಕಾರ್ಮಿಕರಿಗೆ 3 ತಿಂಗಳಿಂದ ಸಂಬಳವೂ ಬಂದಿಲ್ಲ. ... ಮಂಡಳಿಯ ಕಾರ್ಮಿಕವಿರೋಧಿ ಧೋರಣೆಯ ... ಸಿಡಿದೆದ್ದು ಕಾರ್ಮಿಕರು ಪ್ರತಿಭಟನೆ ನಡೆಸುತ್ತಿ... ಇಷ್ಟಾದರೂ ಅಂಬಿ ಅತ್ತ ಸುಳಿಯುವುದಿಲ್ಲ. ... ಆತನ ಜನಪರ ಕಾಳಜಿ ಹೇಗಿರಬೇಡ. ಕಾರ್ಮಿಕರ ... ಆಲಿಸಲು ಸಕ್ಕರೆ ಸಚಿವರೇ ಬರಬೇಕಾಯ್ತೆ ಹೊ... ಅಂಬಿ ತನ್ನ 'ವಸತಿ' ಬಿಟ್ಟು ಹೊರಬರಲಿಲ್ಲ.

ಇನ್ನು ಜಿಲ್ಲೆಯಲ್ಲಿ ಸಾಲಬಾಧೆ ತಾಳದೆ 60ಕ್ಕೂ... ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈಗಲೂ ಆ... ನಿಲ್ಲುವ ಯಾವ ಲಕ್ಷಣವೂ ಕಾಣಿಸುತ್ತಿಲ್ಲ. ... ಸಂದರ್ಭದಲ್ಲಿ ಜಿಲ್ಲೆಯ ನೆಲದಲ್ಲಿ ಸಕ್ರಿಯರಾಗಿ... ಉಸ್ತುವಾರಿ ಮಂತ್ರಿ ಅಂಬಿ ರೈತರ ಮನೆಗೆ ಭೇಟಿ ಕೊ...

...ಮ ಹುದಿ ಲೀಡರ್‌ಗಳೇ ಕಳಸಾ ಬಂಡೂರಿ ...ರಾಟವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದರೆ, ...ನ್ ರಾಷ್ಟ್ರೀಯ ಪಕ್ಷವಾದ ಬಿಜೆಪಿ ಮುಖಂಡರು ...ನಿಡುತ್ತಾರೆಯೇ? ಗೋವಾ ಸರ್ಕಾರಕ್ಕೆ ಸಮಸ್ಯೆ ಅರ್ಥ ...ಸಿ ರಾಜ್ಯದ ರೈತರಿಗೆ ನ್ಯಾಯ ಒದಗಿಸುವ ಬದಲು ...ಟಿಕಲ್ ಮೀಡಿಯೇಟರ್‌ನಂತೆ ವರ್ತಿಸಿದ ನರೇಂದ್ರ ...ದಿಯಿಂದಾಗಿ ಹೋರಾಟಗಾರರು ಬಿಜೆಪಿ ವಿರುದ್ಧ ...ದ್ದಿದ್ದಾರೆ. ಆದರ ಬಿಸಿ ಮುಟ್ಟುತ್ತಿರುವುದು ಜಗದೀಶ ..., ಪ್ರಹ್ಲಾದ್ ಜೋಷಿಯಂತ ಲೋಕಲ್ ಬಿಜೆಪಿ ...ರ್‌ಗಳಿಗೆ. ಅದನ್ನು ಸ್ವಲ್ಪ ಮಟ್ಟಿಗಾದರೂ ...ಸಿಕೊಳ್ಳುವ ನಿಟ್ಟಿನಲ್ಲಿ ಮೊನ್ನೆ ಹುಬ್ಬಳ್ಳಿಯ ಮೂರು ... ಮಠದಲ್ಲಿ ಶೆಟ್ಟರ್, ಜೋಷಿ ಇಬ್ಬರೂ ಸೇರಿ ...ದೋ ಸಂಘ ನೀಡಿದ್ದ ಹಣವನ್ನೇ ತಮ್ಮ ಖಾಸಗಿ ...ರಿಯಿಂದ ತಿಂದ ಹಣವೆಂಬಂತೆ ಆತ್ಮಹತ್ಯೆ ...ಕೊಂಡ ರೈತರ ಕುಟುಂಬಗಳಿಗೆ ಹಂಚಲು ...ಾಗಿದ್ದರು. ಆದರೆ ರೈತ ಮುಖಂಡರು ಅವರಿಬ್ಬರನ್ನು ...ಯೇ ತರಾಟೆಗೆ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ...ತಿಯನ್ನು ಅರ್ಥ ಮಾಡಿಸಿ ನೀರು ಕೊಡಿಸುವ ... ಹಣ ಹಂಚುತ್ತಿದ್ದೀರಾ ಅಂತ ನೀರಿಳಿಸಿದ್ದರು.

ಸಾರಾ-ವಾಟಾಳ್ ಹೈಡ್ರಾಮಾ

...ೀಗೆ ಕಳಸಾ ಬಂಡೂರಿ ಹೋರಾಟ ಸಮಯಸಾಧಕ ... ಹೈಜಾಕ್ ಆಗುತ್ತಿರುವಾಗ ಅಪ್ಪಟ ಕನ್ನಡ ...ಟಗಾರರಾದ ವಾಟಾಳ್ ನಾಗರಾಜ್ ಮತ್ತು ಸಾ.ರಾ. ...ಂದು ಎಂಬ ಗಳಸ್ಯಕಂಠಸ್ಯ ಜೋಡಿ ಸುಮ್ಮನಿದ್ದರೆ ...ಟನ್ನ? ಚಿತ್ರವಿಚಿತ್ರ 'ಓ'ರಾಟಗಳ ಮೂಲಕ ಜೋಕರ್ ...ಖ್ಯಾತಿಗೆ ಈಡಾಗಿರುವ ವಾಟಾಳ್ ನಾಗರಾಜ್, ...ಾಯಿ ಪ್ರತಿಭಟನೆಯಲ್ಲಿ ಪುಕ್ಕಟೆ ಪ್ರಚಾರ ಗಿಟ್ಟಿಸುವ ...ನೆಯನ್ನು ಹಾಕಿಕೊಂಡಿದ್ದೆ ತಡ ಸಾ.ರಾ. ಗೋವಿಂದು, ... ಕುಮಾರ್, ಲಕ್ಷ್ಮಿಪತಿ, ಶಿವರಾಮೇಗೌಡ ...ಾದವರೆಲ್ಲ ಒಂದೇ ಮಾತಿಗೆ ಸೈ ಎಂದಿದ್ದರು. ... ಭಾಗವಾಗಿ ರೂಪುಗೊಂಡಿದ್ದೇ ಕಣಕುಂಬಿ ...ೀಡೆ ಹೊಡೆಯುವ ಸಾಹಸ!

...ಗೆ ನೋಡಿದರೆ ಅಂತಹದ್ದೊಂದು ಪ್ರಯತ್ನ ರೈತರಿಗೆ ...ಗುವುದಕ್ಕಿಂತ ಹೆಚ್ಚಾಗಿ ಮಾರಕವಾಗುವ ಸಂಭವವೇ ...ಏಕೆಂದರೆ ಕಣಕುಂಬಿಯಲ್ಲಿ ಆ ತಡೆಗೋಡೆಯನ್ನು ...ಟಿರೋದೆ ನ್ಯಾಯಾಲಯದ ಆದೇಶದ ಮೇರೆಗೆ, ...ಬಿಂದ ನ್ಯಾಯಾಧೀಕರಣದ ಮುಂದಿರುವ ಈ ...ದ ತೀರ್ಪು 2016ಕ್ಕೆ ಹೊರಬೀಳಲಿದೆ. ಸ್ವತಃ ...ಕೋರ್ಟ್ ಈ ಗಡುವು ವಿಧಿಸಿಯೇ ಮಹದಾಯಿ ...ರು ಹಂಚಿಕೆ ನ್ಯಾಯಾಧೀಕರಣವನ್ನು ರಚನೆ ಮಾಡಿದೆ. ...ವರೆಗೆ ಯಥಾಸ್ಥಿತಿ ಕಾಯ್ದುಕೊಳ್ಳುವುದು ಉಭಯ ...ಜವಾಬ್ದಾರಿ ಅಥವಾ ಕೇಂದ್ರದ ನೇತೃತ್ವದಲ್ಲಿ ಪರಸ್ಪರ ಮಾತುಕತೆ ಮೂಲಕ ತಾವೇ ಒಂದು ಒಪ್ಪಂದಕ್ಕೆ ಬಂದರೆ ಅದಕ್ಕೂ ನ್ಯಾಯಾಲಯ ಅಡ್ಡಿ ಮಾಡುವುದಿಲ್ಲ. ಇವೆರಡೂ ಮಾರ್ಗವನ್ನು ಬಿಟ್ಟು ಮೂರನೇ ಆಯ್ಕೆಗೆ ಮುಂದಾಗುವುದೇ ನ್ಯಾಯಾಂಗ ನಿಂದನೆಯಾಗುತ್ತೆ. ಇದರ ಅರಿವು ಇರುವುದರಿಂದಲೇ ರಾಜ್ಯ ಸರ್ಕಾರ ಕೇಂದ್ರ ಮಧ್ಯಸ್ಥಿಕೆ ಮಾಡಬೇಕೆಂದು ದುಂಬಾಲು ಬಿದ್ದಿರೋದು.



ಹುಬ್ಬಳ್ಳಿ: ಕಳಸಾ ಬಂಡೂರಿ ಹೋರಾಟ ಸಮನ್ವಯ ಸಮಿತಿ ಸದಸ್ಯರು ಹಾಗೂ ಕನ್ನಡ ಒಕ್ಕೂಟದ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆಯಿತು.

ಇಂತಹ ಪರಿಸ್ಥಿತಿಯಲ್ಲಿ ಕಣಕುಂಬಿ ತಡೆಗೋಡೆ ಹೊಡೆಯುವುದೆಂದರೆ ನ್ಯಾಯಾಲಯದ ಆದೇಶದ ಉಲ್ಲಂಘನೆ ಅಲ್ಲದೆ ಮತ್ತೇನೂ ಅಲ್ಲ. ಆಗ ಕರ್ನಾಟಕ ಸರ್ಕಾರ ನ್ಯಾಯಾಧೀಕರಣದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತೆ. ಆದರೆ ವ್ಯತಿರಿಕ್ತ ಪರಿಣಾಮ ಬೀಳೋದು ಈ ಭಾಗದ ರೈತರ ಮೇಲೆ. ಇಂತಹ ಅವಘಡ ಸಂಭವಿಸಬಹುದೆನ್ನುವ ಮುನ್ನೆಚ್ಚರಿಕೆಯಿಂದ ಗೋವಾ ಸರ್ಕಾರ ಬೆಳಗಾಂ ಜಿಲ್ಲಾಧಿಕಾರಿ ಮತ್ತು ಕರ್ನಾಟಕ ಮುಖ್ಯಮಂತ್ರಿಗೆ ಪತ್ರ ಬರೆದು ಕಣಕುಂಬಿ ತಡೆಗೋಡೆಗೆ ರಕ್ಷಣೆ ಒದಗಿಸೋದು ನಿಜ ಜವಾಬ್ದಾರಿ ಎಂಬ ಎಚ್ಚರಿಕೆಯನ್ನು ನೀಡಿದೆ.

ಇಷ್ಟೆಲ್ಲ ಪ್ರತಿಕೂಲ ಪರಿಸ್ಥಿತಿಯ ನಡುವೆಯೂ ವಾಟಾಳ್ ನಾಗರಾಜ್ ಮತ್ತು ಸಾ.ರಾ. ಗೋವಿಂದು ತಡೆಗೋಡೆ ಹೊಡೆಯುವ ಸಾಹಸಕ್ಕೆ ಮುಂದಾಗುತ್ತಾರೆಂದರೆ ಅವರನ್ನು ಏನೆಂದು ಕರೆಯಬೇಕು?

ಬೆಂಗಳೂರು 'ಓ'ರಾಟಗಾರರಿಗೆ ಮುಖಭಂಗ

ಇಲ್ಲಿನ ಹೋರಾಟಗಾರರಿಗೆ ಸಮಸ್ಯೆಯ ಸಂಕೀರ್ಣ ಪರಿಚಯ ಇರುವುದರಿಂದಲೇ ರೈತರಿಂದ ಅಂತಹ ಆಕ್ರೋಶದ ನುಡಿಗಳು ಹೊರಬಂದಿದ್ದಾಗ ಸಮಾಧಾನಪಡಿಸಿದ್ದರು. ಆದರೆ ಪಬ್ಲಿಸಿಟಿಗೋಸ್ಕರ ಅಖಾಡಕ್ಕಿಳಿದಿದ್ದ ವಾಟಾಳ್, ಸಾರಾಗಳಿಗೆ ಇದೆಲ್ಲ ಎಲ್ಲಿ ಅರ್ಥವಾಗಬೇಕು. ಅವರು ಕಣಕುಂಬಿ ತಡೆಗೋಡೆ ಹೊಡೆಯುವುದೇ ಸೈ ಅಂತ ಮುಂದೆ ಬಂದಾಗ ಹುಬ್ಬಳ್ಳಿಯ ಹೋರಾಟ ಸಮನ್ವಯ ಸಮಿತಿ ಮತ್ತು ನರಗುಂದದ ರೈತರು ವಾಟಾಳ್‌ರ ಹೋರಾಟಕ್ಕೆ ಬಹಿರಂಗವಾಗಿಯೇ ತಮ್ಮ ವಿರೋಧ ವ್ಯಕ್ತಪಡಿಸಿದ್ದರು. ರೈತರ ಸೂಕ್ತ ಬೆಂಬಲ ಸಿಗದೆ ವಾಟಾಳ್ ಟೀಮು ಕಂಗಾಲಾಗಿ ಹೋದಾಗ ಅವರಿಗೆ ಆಸರೆಯಾಗಿ ಕಂಡದ್ದೆ ಲೋಕನಾಥ್ ಹೆಬಸೂರು ಎಂಬ ಕೋನರೆಡ್ಡಿಯ ಮಾಜಿ ಶಿಷ್ಯ.

ಜಿಲ್ಲಾ ಪಂಚಾಯತ್ ಚುನಾವಣೆ ವೇಳೆಗೆ ದಿಢೀರ್ ನಾಯಕನಾಗಿಬಿಡುವ ಹುಮ್ಮಸ್ಸಿನಲ್ಲಿರುವ ಲೋಕನಾಥ್ ಹೆಬಸೂರಿನ ಕಾಲಿಗೆರಗಿದ ವಾಟಾಳ್ ಟೀಮು ಹೇಗಾದರೂ ಮಾಡಿ ಒಂದಷ್ಟು ರೈತರನ್ನು ಹೊಂದಿಸಿಕೊಂಡು ಬರುವಂತೆ ಅಂಗಲಾಚಿತ್ತು. ಒಂದು ದಿನ ಮೊದಲೇ ಹುಬ್ಬಳ್ಳಿಯ ಐಬಿಗೆ ಆಗಮಿಸಿ ತಂಗಿದ್ದ ವಾಟಾಳ್ ಟೀಮು ಅವತ್ತು ಸಹ ತಮಗೆ ಬೆಂಬಲ ನೀಡುವಂತೆ ಹೋರಾಟ ಸಮನ್ವಯ ಸಮಿತಿಯನ್ನು ಒಪ್ಪಿಸುವ ವ್ಯರ್ಥ ಪ್ರಯತ್ನ ನಡೆಸಿತ್ತು. ಆದರೆ ಅದು ಕೈಗೂಡಿರಲಿಲ್ಲ. ಮಾರನೆಯ ದಿನ ಬೆಳಗ್ಗೆ ಲೋಕನಾಥ್ ಹೆಬಸೂರರ ನೇತೃತ್ವದಲ್ಲಿ ಒಂದಷ್ಟು ಮಂದಿ ಹೊರಟ ಮೇಲಷ್ಟೇ ವಾಟಾಳ್‌ನ ಬೆಂಗಳೂರು 'ಓ'ರಾಟಗಾರರಿಗೆ ಕೊಂಚ ಧೈರ್ಯ ಬಂದದ್ದು. ಇಲ್ಲದೇ ಹೋಗಿದ್ದಲ್ಲಿ ಅವರ ಆರ್ಭಟ ಆರಂಭದಲ್ಲೇ ಪಂಕ್ಚರ್ ಆಗಿಬಿಡುವ ಅಪಾಯವಿತ್ತು. ಏನೇ ಮಾಡಿದರೂ ಪ್ರಚಾರದ ದೃಷ್ಟಿಯಿಂದಲೇ ಮಾಡುವ ವಾಟಾಳ್, ಅವತ್ತು ಬೆಳಗ್ಗೆ ಹುಬ್ಬಳ್ಳಿಯ ಕಿತ್ತೂರು ಚೆನ್ನಮ್ಮ ಸರ್ಕಲ್‌ನಲ್ಲಿ ಚೆನ್ನಮ್ಮನ ಪ್ರತಿಮೆಗೆ ಹಾರ ಹಾಕಿ, ತಡೆಗೋಡೆ ಹೊಡೆಯುವುದಕ್ಕಾಗಿ ತಂದಿದ್ದ ಗುದ್ದಲಿಗೆ ಪೂಜೆ ಮಾಡಿ ಚಾಲನೆ ನೀಡಿದ್ದರು.



ಅದೇ ವೇಳೆಗೆ ಪಕ್ಕದಲ್ಲೇ ಪೆಂಡಾಲ್ ಹಾಕಿಕೊಂಡು ನಿರಂತರ ಹೋರಾಟ ನಡೆಸುತ್ತಿರುವ ಸಮನ್ವಯ ಸಮಿತಿ ಪ್ರತಿಭಟನಾಕಾರರ ಬಳಿಗೆ ಬಂದ ವಾಟಾಳ್ ನಾಗರಾಜ್ "ನಿಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಲೆಂದೇ ನಾವು ಈ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ನೀವು ನಮ್ಮ ಜೊತೆ ಬನ್ನಿ" ಎಂಬರ್ಥದ ಬಿಟ್ಟಿ ಸಲಹೆ ನೀಡಿದ್ದರು. ಆದರೆ ಸಮನ್ವಯ ಸಮಿತಿಯವರು ತಮ್ಮ ನಿರ್ಧಾರದಿಂದ ಕದಲಲಿಲ್ಲ. ಆಗ ವಾಟಾಳ್ ಟೀಮಿನ ಆಸಾಮಿಯೊಬ್ಬ ಸಮನ್ವಯ ಸಮಿತಿ ಹೋರಾಟಗಾರರಿಗೆ ಗುದ್ದಲಿ ತೋರಿಸಿ ಅವರನ್ನು ಕೆರಳಿಸುವ ಯತ್ನ ಮಾಡಿದ್ದ. ಪೆಂಡಾಲ್‌ನಲ್ಲಿದ್ದ ಹೋರಾಟಗಾರರು ಅದನ್ನು ಪ್ರತಿರೋಧಿಸಿದಾಗ ಸಾರಾ-ವಾಟಾಳ್ ತಂಡದಲ್ಲಿದ್ದ ಕೆ.ಆರ್. ಕುಮಾರ್, ಶಿವರಾಮೇಗೌಡ, ಲಕ್ಷ್ಮೀಪತಿ ಮೊದಲಾದವರು ತಮ್ಮ ನಡೆಯನ್ನು ಸಮರ್ಥಿಸಿಕೊಂಡು ವಾಗ್ವಾದಕ್ಕಿಳಿದಿದ್ದರು. ಆಗ ಪರಿಸ್ಥಿತಿ ಕೈಮೀರಿ ಪರಸ್ಪರ ಕೈಕೈ ಮಿಲಾಯಿಸುವ ಹಂತಕ್ಕೂ ಹೋಗಿತ್ತು. ಇದಾದ ನಂತರ ವಾಟಾಳ್ ಮತ್ತು ಸಾರಾ ತಮ್ಮ ಹುಡುಗರನ್ನು ಕರೆದುಕೊಂಡು ಜಾಗ ಖಾಲಿ ಮಾಡಿದ್ದರು. ಹೆಬಸೂರನನ್ನು ನಂಬಿ ಬಂದಿದ್ದ ರೈತರೂ ಅವರನ್ನು ಹಿಂಬಾಲಿಸಿ ನಡೆದಿದ್ದರು.

ಅಷ್ಟಾದರೂ ವಾಟಾಳ್ 'ಓ'ರಾಟ ಯಶ ಕಾಣಲಿಲ್ಲ. ಅದರಿಂದಾಗಬಹುದಾದ ಅಪಾಯವನ್ನು ಅರಿತಿದ್ದ ರಾಜ್ಯ ಸರ್ಕಾರ ಪೊಲೀಸರ ಮೂಲಕ ಅವರನ್ನೆಲ್ಲ ಕಣಕುಂಬಿ ತಲುಪುವ ಮೊದಲೇ ಬಂಧಿಸಿ ತಂದು ಹುಬ್ಬಳ್ಳಿಯ ಅದೇ ಚೆನ್ನಮ್ಮ ಸರ್ಕಲ್‌ನಲ್ಲಿ ಬಿಟ್ಟು ಹೋಗಿದ್ದರು. ಹೀಗೇ ಆಗುತ್ತೆ ಎಂಬುದು ಸ್ವತಃ ವಾಟಾಳ್ ಮತ್ತು ಸಾರಾ ಗೋವಿಂದುಗೆ ಮೊದಲೇ ಗೊತ್ತಿದ್ದರೂ ಅಚ್ಚರಿಯಿಲ್ಲ. ಯಾಕೆಂದರೆ ನ್ಯಾಯಾಂಗನಿಂದನೆಯಂತಹ ರಿಸ್ಕ್ ತೆಗೆದುಕೊಳ್ಳುವ ಧೈರ್ಯ ಅವರಲ್ಲಿ ಇರುವುದೇ ಡೌಟು!

ಅಂದಹಾಗೆ, ಒಂದು ಪ್ರಶ್ನೆಯಂತು ಬಿಟ್ಟೂಬಿಡದೆ ಕಾಡುತ್ತದೆ. ಅದೇನೆಂದರೆ ವಾಟಾಳ್ ಮತ್ತು 'ಸಾರಾ' ಸಗಟು ಟೀಮಿಗಳಿಗೆ ರೈತ ಪರ ಕಾಳಜಿ ನಿಜಕ್ಕೂ ಇದ್ದಿದ್ದರೆ, ಅವರು ಯಾಕೆ ಮೊದಲಿನಿಂದಲೂ ಹೋರಾಟ ನಡೆಸಿಕೊಂಡು ಬರುತ್ತಿರುವ ಕಳಸಾ ಬಂಡೂರಿ ಹೋರಾಟ ಸಮನ್ವಯ ಸಮಿತಿಯ ಜೊತೆ ಕೈ ಮಿಲಾಯಿಸುತ್ತಿದ್ದರು?

ಇದೊಂದೆ ಪ್ರಶ್ನೆ ಸಾಕು, ಕಳಸಾಬಂಡೂರಿ ಹೋರಾಟದ ಬಗ್ಗೆ ಈ ರೈತದ್ರೋಹಿ ರಾಜಕಾರಣಿಗಳಿಗೆ ಮತ್ತು 'ಓ'ರಾಟಗಾರರಿಗೆ ಅದೆಷ್ಟು ಆಸಕ್ತಿ ಇದೆ ಎಂದು ಸಾಬೀತುಪಡಿಸಲು.

■ ಹುಬ್ಬಳ್ಳಿಯಾಂವ


...ಮೂರು ಬಾರಿ ಮಾತ್ರ, ಅದೂ ಅನಿವಾರ್ಯತೆಯ ... ಮೊದಲ ಬಾರಿ ಅಂಬಿ ಮೃತ ರೈತನ ಮನೆಗೆ ...ಗ ರೈತಾಪಿ ಜನರೇ 'ಈಗ ರೈತರು ನೆನಪಾದ್ರಾ' ...ಜಾಡಿಸಿ ಕಳಿಸಿದ್ದರು. ನಂತರ ಸಿಎಂ ಸಿದ್ಧರಾಮಯ್ಯ ... ಒಮ್ಮೆ, ಮೊನ್ನೆ ರಾಹುಲ್ ಗಾಂಧಿ ಜೊತೆ ...ಕೊಂಡದ್ದು ಬಿಟ್ಟರೆ ಅಂಬಿ ಮತ್ತೆಲ್ಲೂ ಮುಖ ...ಲ್ಲ, ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗಳನ್ನೂ ...ಕ್ಕೆ ಬಂದಾಗ ಕಾಟಾಚಾರಕ್ಕೊಬಂತೆ ಶಿಷ್ಯ ಅಮರಾವತಿ ... ಅಡ್ಡೆಯಲ್ಲಿ ನಡೆಸಿ ಅಲ್ಲೇ ಒಂದಷ್ಟು ವಿಶ್ರಾಂತಿ ... ರಾಜಧಾನಿಯತ್ತ ಮುಖ ಮಾಡಿದರೆ ಮುಗಿಯಿತು ..., ಮಂಡ್ಯಕ್ಕು ಇರುವ ನಂಟು ಎಂಬಂತಾಗಿದೆ. ...ಿಸು, ಮತ ಹಾಕಿ ಗೆಲ್ಲಿಸಿದ್ದೇವೆ, ವಿಧಿ ಇಲ್ಲ ...ಾಜ ಮಂಡ್ಯದ ಜನ ಸಂಕಷ್ಟ ಹೇಳಿಕೊಳ್ಳಲು ...ನಿಸ ಅಂಬಿ ಮನೆಗೆ ಕಾಲಿಟ್ಟರೆ 'ಅಲ್ಲೇ ಅಮರಾವತಿ ...ಲ ಹೋಗೋದು ಬಿಟ್ಟು ಇಲ್ಯಾಕ್ರಲಾ ಬಂದ್ರಿ' ...ಗದರಿಸಿ ಕಳುಹಿಸುತ್ತಾರೆ.

ಮಂಡ್ಯ ಪೊಲಿಟಿಕ್ಸ್

...ೆ ಮೈಷುಗರ್ಸ್ ಕಬ್ಬು ಅರೆಯುವುದನ್ನು ಇನ್ನೂ ...ಮಾಡಿಲ್ಲ, ಸಾಲಬಾಧೆ ತಾಳದೆ ರೈತರ ಆತ್ಮಹತ್ಯೆ ...ಸರ್ಣಿ ಮುಂದುವರೆದೇ ಇದೆ. ಇದ್ಯಾವುದರ ...ನೆ ಇಲ್ಲದೆ ಮಂಡ್ಯದ ರಾಜಕಾರಣ ದಿನಕ್ಕೊಂದು ...ಸಕ್ಕೆ ಸಾಕ್ಷಿಯಾಗುತ್ತಾ ಜನರ ಮನಸ್ಸಲ್ಲಿ ಹೇಸಿಗೆ ಮೂಡಿಸುತ್ತಿದೆ. 10 ದಿನದ ಅವಧಿಯಲ್ಲಿ 2 ಹೈಪ್ರೋಫೈಲ್ ಭೇಟಿಗಳನ್ನು ಕಂಡ ಮಂಡ್ಯ ಜಿಲ್ಲೆಗೆ ಲಭಿಸಿದ್ದು ಮಾತ್ರ ಎಳ್ಳುಕಾಳಿನಷ್ಟು. ಅದೂ ರೈತ ಹೋರಾಟ ಸಮಿತಿ ಮತ್ತು ಕರ್ನಾಟಕ ಜನಶಕ್ತಿ ಸಂಘಟನೆಗಳ ಹೋರಾಟದ ಫಲದಿಂದ. ಎಐಸಿಸಿ ಉಪಾಧ್ಯಕ್ಷ ರಾಹುಲ್ ಗಾಂಧಿ ಭೇಟಿ ನೀಡಿ ಹೋದ ಬೆನ್ನಲ್ಲೇ ಮತ್ತೊಮ್ಮೆ ರಾಜ್ಯ ಹೆದ್ದಾರಿ 48 ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಬಂದಿದ್ದ ಸಿಎಂ ಸಿದ್ದರಾಮಯ್ಯನವರು ಯಾವುದೇ ಕಾರಣಕ್ಕೂ ಮೈಷುಗರ್ ಮುಚ್ಚುವುದಾಗಲಿ ಅಥವಾ ಖಾಸಗಿಯವರಿಗೆ ಮಾರಾಟ ಮಾಡುವುದಾಗಲಿ ಮಾಡುವುದಿಲ್ಲ ಎಂಬ ಭರವಸೆಯನ್ನು ನೀಡಿದ್ದಕ್ಕೆ ಸಂಘಟನೆಗಳ ಹೋರಾಟದ ಬಿಸಿ ಕಾರಣವೇ ಹೊರತು ಜಿಲ್ಲಾ ಜನಪ್ರತಿನಿಧಿಗಳ ಕಾಳಜಿಯಲ್ಲ ಎಂಬುದು ಸುಸ್ಪಷ್ಟ.

ರಾಹುಲ್ ಭೇಟಿಯ ಸಂದರ್ಭದಲ್ಲಾದ 'ಚೆಕ್' ರಾದಿಯು ಜಿಲ್ಲಾ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದನ್ನು ಸಾಬೀತುಪಡಿಸಿದೆ. ಸೂಣಬದಕೊಪ್ಪಲಿನ ಮೃತ ರೈತ ಲೋಕೇಶ್ ಕುಟುಂಬಕ್ಕೆ ರಾಹುಲ್ ಗಾಂಧಿ ಕೊಟ್ಟಿದ್ದ ಚೆಕ್ಕನ್ನು ಅಂಬರೀಶ್ ಸಂಸದ ಸಿ.ಎಸ್.ಪುಟ್ಟರಾಜುಗೆ ಕೊಟ್ಟಿದ್ದಾರೆ ಅಂತ ರಮ್ಯಾ, ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್ ಅವರಿಗೆ ಚಾಡಿ ಹೇಳಿದರು ಮತ್ತು ಅದಕ್ಕೆ ಪ್ರತಿಯಾಗಿ ಸಿಂಗ್ ಅಂಬರೀಶ್‌ರನ್ನು ತರಾಟೆಗೆ ತೆಗೆದುಕೊಂಡರು ಎಂ...ೇ ಆ ವಿದ್ಯಮಾನ. ಈ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಬಣ ರಾಜಕಾರಣದ ಮುಂದುವರೆದ ಕಂತು ಇದಾಗಿತ್ತಷ್ಟೆ. ಇದೇವೇಳೆ 'ಅಂಬರೀಶ್ ಕಾರ್ಯವೈಖರಿ ಸರಿಯಿಲ್ಲ. ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆ. ಮೊದಲು ಅಂಬರೀಶ್‌ರನ್ನು ಸಂಪುಟದಿಂದ ಕೈಬಿಡಿ' ಅಂತ ನಗರಸಭಾ ಸದಸ್ಯ ಅನಿಲ್‌ಕುಮಾರ್ ರಾಹುಲ್ ಗಾಂಧಿಗೆ ಮನವಿ ಪತ್ರ ನೀಡಿದ್ದು ಕೂಡಾ ಬಣ ರಾಜಕಾರಣದ ಸ್ಯಾಂಪಲ್ಲೇ ಆಗಿದೆ. ಆಮೇಲೆ ಅಂಬಿ ಬೆಂಬಲಿಗರು ರೌಡಿಯೊಬ್ಬನ ಮೂಲಕ ಅನಿಲ್ ಕುಮಾರ್‌ಗೆ ಬೆದರಿಕೆ ಹಾಕಿಸಿದ ಪ್ರಕರಣವೂ ಜನರ ನಡುವೆ ಸದ್ದು ಮಾಡುತ್ತಿದೆ.

ಈ ನಡುವೆ ಎಸ್.ಎಂ.ಕೃಷ್ಣ ದಿಲ್ಲಿಯತ್ತ ದೌಡಾಯಿಸಿದ್ದು ಜಿಲ್ಲೆಯಲ್ಲಿ ಮತ್ತೊಂದು ಸುತ್ತಿನ ಬಿಸಿಯನ್ನು ಸೃಷ್ಟಿಸಿತ್ತು. ಸಿಎಂ ಸಿದ್ದರಾಮಯ್ಯ ಮೂಲ ಕಾಂಗ್ರೆಸ್ಸಿಗರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ಅಪಸ್ವರದ ಕೂಗು ಸಿದ್ದು ಮುಖ್ಯಮಂತ್ರಿ ಗಾದಿಗೇರಿದ ಮರುದಿನದಿಂದಲೇ ಚಾಲ್ತಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಒಂದಷ್ಟು ಶಾಸಕರು ಸಿಎಂ ವಿರುದ್ಧ ಗರಂ ಆಗಿರುವ ಸಂದರ್ಭವನ್ನೇ ಬಳಸಿಕೊಂಡ ಕೃಷ್ಣ ಸಿದ್ದಾರಾಮಯ್ಯನವರ ಬುಡಕ್ಕೆ ಕೈಹಾಕಲು ದಿಲ್ಲಿಗೆ ದೌಡಾಯಿಸಿದ್ದರು. ಈ ವಿಚಾರದಲ್ಲಿ ಕೃಷ್ಣಗೆ ಚುರುಕು ಮುಟ್ಟಿಸುವ ಒಂದು ಅವಕಾಶವನ್ನು ಸಿದ್ದರಾಮಯ್ಯ ಬಲು ಚೆನ್ನಾಗಿ ಬಳಸಿಕೊಂಡಿದ್ದಾರೆ. ಆದರೆ ಅದು ಮಂಡ್ಯ ಜನರ ಅಸಹನೆಯನ್ನು ಕೆಣಕುವಂತಿರುವುದೇ ದುರದೃಷ್ಟ.




ಮಂಡ್ಯ ರಾಜಕಾರಣದಲ್ಲಿ ಅಂಬಿ ಮತ್ತು ಕೃಷ್ಣ ಬಣಗಳ ಹೈಪೋಟಿಯನ್ನು ಚೆನ್ನಾಗಿ ತಿಳಿದುಕೊಂಡಿರುವ ಸಿದ್ದರಾಮಯ್ಯ ಅಕ್ಟೋಬರ್ 15ರಂದು ರಾಜ್ಯ ಹೆದ್ದಾರಿ 48ನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಉದ್ಘಾಟನೆಗೆಂದು ಮಂಡ್ಯದ ಕೆರಗೋಡಿಗೆ ಬಂದಿದ್ದಾಗ ಸಾರ್ವಜನಿಕ ವೇದಿಕೆಯಲ್ಲೇ 'ಸೋಮಾರಿ ಸಚಿವರೆಂದೇ ಖ್ಯಾತವಾಗಿರುವ ಅಂಬರೀಶ್ 15-20 ಕೆಜಿ ತೂಕ ಕಡಿಮೆ ಮಾಡಿಕೊಂಡು ಸಿನಿಮಾ ಹೀರೋತರ ಸ್ಲಿಮ್ ಆಗಿದ್ದಾನೆ. ಈ ರಸ್ತೆ ಕಾಮಗಾರಿ ತರಲು ಸಾಕಷ್ಟು ಶ್ರಮಿಸಿದ್ದಾನೆ' ಅಂತೆಲ್ಲಾ ಹಾಡಿ ಹೊಗ...ಟ್ಟರು. ಕೃಷ್ಣ ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವ ಪ್ರಯತ್ನದಲ್ಲಿರುವಾಗಲೇ ಸಿದ್ದರಾಮಯ್ಯ ಅಂಬರೀಶ್‌ರನ್ನು ಹೊಗಳಿದ್ದರ ಹಿಂದೆ ಸಾಕಷ್ಟು ರಾಜಕೀಯ ಕಾರಣಗಳಿವೆ. ಕೆಲದಿನಗಳ ಹಿಂದಷ್ಟೇ ಸಿಎಂ ಮೇಲೆ ಮುನಿಸಿಕೊಂಡು ಬೆಳಗಾವಿ ಅಧಿವೇಶನವನ್ನು ಅರ್ಧಕ್ಕೆ ಬಿಟ್ಟು ವಾಪಾಸಾಗಿದ್ದ ಅಂಬಿ, ಸಿದ್ದರಾಮಯ್ಯನ ಹೊಗಳಿಕೆ ತಲುಪುತ್ತಿದ್ದಂತೆಯೇ 'ಯಾವುದೇ ಕಾರಣಕ್ಕೂ ಸಿದ್ದರಾಮಯ್ಯನವರನ್ನು ಹೈಕಮಾಂಡ್ ಕೆಳಗಿಳಿಸುವುದಿಲ್ಲ' ಎಂದು ಮಾಧ್ಯಮಗಳ ಮುಂದೆ ಹೇಳಿಕೊಂಡಿದ್ದರು. ಇದಾದನಂತರ ಸಿದ್ದರಾಮಯ್ಯ ಅಂಬರೀಶ್ ಜೊತೆ ಅಮರಾವತಿ ಚಂದ್ರನ ಅಡ್ಡೆಯಲ್ಲಿ ಕುಳಿತು ಒಂದಷ್ಟು ಹೊತ್ತು ಮಾತನಾಡಿ ಹೊರಟಿದ್ದಾರೆ. ಇದೆಲ್ಲಾ ನೇರವಾಗಿ ಕೃಷ್ಣರಿಗೆ ಟಾಂಗ್ ಕೊಡಲೆಂದೇ ಸೃಷ್ಟಿಯಾದ ಹೈಡ್ರಾಮಾ ವಷ್ಟೇ. ಆದರೆ ಅಂಬಿಯ ಸೋಮಾರಿತನ, ಹೊಣೆಗೇಡಿತನದಿಂದ ಈಗಾಗಲೇ ಸಾಕಷ್ಟು ಸೊರಗಿಹೋಗಿರುವ ಜನ ಸಿದ್ದರಾಮಯ್ಯನವರ ಮೇಲೆಯೇ ಭರವಸೆ ಇಟ್ಟುಕೊಂಡಿದ್ದರು. ಅವರಾದರೂ ಅಂಬಿಯ ಕಿವಿಹಿಂಡಿ ಜನರಿಗೆ ಸ್ಪಂದಿಸುವಂತೆ ಮಾಡುತ್ತಾರೆ ಎಂಬ ನಿರೀಕ್ಷೆ ಇಟ್ಟುಕೊಂಡಿದ್ದರು. ಏಕೆಂದರೆ ಮೊನ್ನೆ ಕರ್ನಾಟಕ ಜನಶಕ್ತಿ ನೇತೃತ್ವದಲ್ಲಿ ಮೈಷುಗರ್ ಕಾರ್ಮಿಕರು ಮತ್ತು ರೈತರು ಪ್ರತಿಭಟನೆ ನಡೆಸುತ್ತಿದ್ದಲ್ಲಿಗೇ ಬಂದಿದ್ದ ಸಿದ್ದರಾಮಯ್ಯನವರು ಕಾರ್ಮಿಕರ ಕಷ್ಟಗಳಿಗೆ ಕಿವಿಯಾಗಿದ್ದರು. ಅವರ ಜೊತೆ ಬಂದಿದ್ದ ಅಂಬಿ ಮಾತನಾಡಲು ಮುಂದಾದಾಗ ಹೋರಾಟಗಾರರು ಅಂಬಿ ಈ ವಿಚಾರದಲ್ಲಿ ಮಾತನಾಡುವ ಹಕ್ಕು ಉಳಿಸಿಕೊಂಡಿಲ್ಲ ಅಂತ ಗಲಾಟೆ ಮಾಡಿದ್ದರು. ಆಗ ಸಿದ್ದರಾಮಯ್ಯನವರೇ ಹೋರಾಟಗಾರರನ್ನು ಸಮಾಧಾನ ಮಾಡಿ ಈ ವ್ಯಾಪ್ತಿಯ ಕಬ್ಬನ್ನು ಪಕ್ಕದ ಕಾರ್ಖಾನೆಗೆ ಪೂರೈಕೆ ಮಾಡಲು ತಿಳಿಸುತ್ತೇನೆ ಎಂಬ ಭರವಸೆಯನ್ನೂ ನೀಡಿದ್ದರು. ಈಗ ಅವರೇ ಅಂಬಿಯ ಭುಜ ತಟ್ಟಿರುವುದು ವಿಪರ್ಯಾಸ.

■ ವರದಿಗಾರ

ಬಣ್ಣದ ಹೋರಾಟದವರ ನಿಜಬಣ್ಣ!

ಈ ಬಾರಿ ಬಿಜೆಪಿ ಅಧಿಕಾರ ಹಿಡಿಯಲು ಒಂದು ಪ್ರಮುಖ ಕಾರಣ ಜನರನ್ನು ಇನ್ನಿಲ್ಲದಂತೆ ಬಾಧಿಸಿದ ದಿನಬಳಕೆ ವಸ್ತುಗಳ ಬೆಲೆಯೇರಿಕೆ. ಬೆಲೆಯೇರಿಕೆಯ ವಿರುದ್ಧ ದೇಶದುದ್ದಕ್ಕೂ ನಾನಾ ರೀತಿಯ ಹೋರಾಟಗಳು ನಡೆದಿವೆ. ಅವರಲ್ಲಿ ಬಿಜೆಪಿ ರಾಜ್ಯಸಭಾ ಸದಸ್ಯೆ ಮಾಜಿ ಬಾಲಿವುಡ್ ತಾರೆ ಹೇಮಾಮಾಲಿನಿ ನಡೆಸಿದ ವಿನೂತನ ಹೋರಾಟ ಭಾರೀ ಪ್ರಚಾರ ಪಡೆದುಕೊಂಡಿತ್ತು. ಅಂದು ಸಂಸತ್ ಭವನದ ಮುಂದುಗಡೆ ಹೇಮಾಮಾಲಿನಿ, ಸುಷ್ಮಾ ಸ್ವರಾಜ್, ಮನೇಕಾ ಗಾಂಧಿ ಮುಂತಾದ ಮಹಿಳಾ ಮಣಿಗಳು ತಮ್ಮ ಕುತ್ತಿಗೆಗೆ ಹಸಿರು ಬಣ್ಣದ ಬ್ಯಾನರ್‌ಗಳನ್ನು ತಗುಲಿಸಿಕೊಂಡಿದ್ದರು. ಅವರಿಗೆ ಬೆಂಬಲವಾಗಿ ಅಡ್ವಾಣಿ, ಜಸ್ವಂತ್ ಸಿಂಗ್‌ರಂಥ ಘಟಾನುಘಟಿಗಳು ಅಂಕದಲ್ಲಿದ್ದರು.


ಬ್ಯಾನರ್ ಹಾಕಿಕೊಂಡಿರುವ ಹೇಮಾಮಾಲಿನಿ, ಸುಷ್ಮಾ ಸ್ವರಾಜ್

ಅಷ್ಟಾಗಿ ಆ ಬ್ಯಾನರ್‌ನಲ್ಲಿದ್ದುದು ಬೆಲೆಗಳ ಹೋಲಿಕೆ ಪಟ್ಟಿ. 2004ರಲ್ಲಿ ಎನ್‌ಡಿಎ ಅಧಿಕಾರದಲ್ಲಿದ್ದಾಗ ಅಕ್ಕಿ, ಗೋಧಿ, ಎಣ್ಣೆ, ಬೇಳೆ, ಈರುಳ್ಳಿ ಇತ್ಯಾದಿಗಳ ದರ ಎಷ್ಟಿತ್ತು ಮತ್ತು ಯುಪಿಎ ಅಧಿಕಾರಾವಧಿಯಲ್ಲಿ ಎಷ್ಟು ಏರಿಕೆಯಾಗಿದೆ ಎಂಬ ವಿವರ ಪಟ್ಟಿಯಲ್ಲಿತ್ತು. ಬಣ್ಣದ ಜಗತ್ತಿನ ಜನಪ್ರಿಯ ನಟಿಯನ್ನು ಈ ರೀತಿ ತೊಡಗಿಸುವ ಮೂಲಕ ಬಿಜೆಪಿ ಕೂಟ ಜನರ ಆಕ್ರೋಶವನ್ನು ಮತಗಳಾಗಿ ಪರಿವರ್ತಿಸುವ ಹುನ್ನಾರ ನಡೆಸಿತ್ತು, ಅದರಲ್ಲಿ ಯಶಸ್ವಿಯೂ ಆಯ್ತೆನ್ನಿ.

ಈಗ ಪರಿಸ್ಥಿತಿ ಏನಾಗಿದೆ? ಯುಪಿಎ ಅವಧಿಯ ಹತ್ತು ವರ್ಷಗಳ ಸಾಧನೆಯನ್ನು, ಅಂದರೆ ಬೆಲೆಯೇರಿಕೆ ಸಾಧನೆಯ ದಾಖಲೆಯನ್ನು ಮೋದಿ ಭೂಪ ಒಂದೇ ವರ್ಷದಲ್ಲಿ ಮುರಿದು ಮುನ್ನುಗ್ಗುತ್ತಿದ್ದಾನೆ. ಒಂದು ವರ್ಷದ ಹಿಂದೆ ಕೆಜಿಗೆ 60 -70 ರೂ ಇದ್ದ ಬೇಳೆಯ ಬೆಲೆ 200 ರೂ ಆಗಿದೆ. 10 - 15 ರೂಗೆ ಸಿಗುತ್ತಿದ್ದ ಈರುಳ್ಳಿ 50 - 60 ಕ್ಕೆ ಏರಿ ಕೂತಿದೆ. ಸಿಮೆಂಟ್, ಕಬ್ಬಿಣದಂತ ಗೃಹ ನಿರ್ಮಾಣ ಸಾಮಗ್ರಿಗಳ ಬೆಲೆ ದುಪ್ಪಟ್ಟಾಗಿ ಸಾಮಾನ್ಯ ಜನರು ಮನೆ ಕಟ್ಟುವ ಕನಸನ್ನೂ ಕಾಣದ ಸ್ಥಿತಿಗೆ ತಲುಪುತ್ತಿದೆ. ಇಷ್ಟೆಲ್ಲಾ ಒಂದೇ ವರ್ಷದಲ್ಲಿ ನಡೆದರೂ ಬಣ್ಣದ ಹೋರಾಟಗಾರರ ಸುಳಿವೇ ಇಲ್ಲ; ಕನಸಿನ ಕನ್ಯೆಯೂ ಇಲ್ಲ, ವಾಕ್‌ಚತುರೆಯೂ ಇಲ್ಲ, ಪ್ರಾಣಿ ಪ್ರೇಮಿಯೂ ಇಲ್ಲ.

ತಮ್ಮದೇ ಪ್ರಧಾನಿಯ ಜನವಿರೋಧಿ ನೀತಿಗಳ ವಿರುದ್ಧ ಬಿಜೆಪಿಯವರು ಹೋರಾಟ ಮಾಡುತ್ತಾರೆಂದು ನಿರೀಕ್ಷಿಸುವುದು ಮೂರ್ಖತನವಾದೀತು. ಆದರೆ ವಿರೋಧ ಪಕ್ಷವಾದ ಕಾಂಗ್ರೆಸ್‌ನವರಿಗೇನಾಗಿದೆ? ಇತರೆ ಪಕ್ಷಗಳಿಗೇನಾಗಿದೆ? ಎಲ್ಲರಿಗೂ ಸಾಮೂಹಿಕ ಲಕ್ವಾ ಏನಾದರೂ ಬಡಿದಿದೆಯೆ?

ಒಂದೇ ವರ್ಷದಲ್ಲಿ ಹತ್ತು ವರ್ಷದ ಸಾಧನೆ!

ಕರ್ನಾಟಕದಲ್ಲಿ ಕೆಲವು ಮಂತ್ರಿ ಮಹೋದಯರು ತಮ್ಮ ಬಂಗಲೆಗಳ ನವೀಕರಣ ಮಾಡಲು ಲಕ್ಷಾಂತರ ರೂಪಾಯಿ ಸಾರ್ವಜನಿಕ ಹಣವನ್ನು ದುರುಪಯೋಗ ಮಾಡುತ್ತಿರುವ ಸುದ್ದಿ ಪತ್ರಿಕೆಗಳಲ್ಲಿ ಕಾಣುತ್ತಿದ್ದೇವೆ. ಆದರೆ



ಅದೇ ಸಂದರ್ಭದಲ್ಲಿ ನಮ್ಮ ರೈತರು ಒಂದೆರಡು ಲಕ್ಷದ ಸಾಲ ತೀರಿಸುವ ಭರವಸೆಯಿಲ್ಲದೆ ತಮ್ಮ ಬದುಕಿಗೇ ಕೊನೆ ಹಾಡುತ್ತಿದ್ದಾರೆ.

ಮತ್ತೊಂದು ಕಡೆ ಕೇಂದ್ರದಲ್ಲಿರುವ ಮೋದಿ ಮಹಾಶಯರು ಯುಪಿಎ ಸರ್ಕಾರದ ಹತ್ತು ವರ್ಷದ ಸಾಧನೆಯನ್ನು ಒಂದೇ ವರ್ಷದಲ್ಲಿ ಮಾಡಿದ್ದೇವೆಂದು ಹೋದಬಂದಲ್ಲೆಲ್ಲಾ ಬೊಂಬಡಾ ಬಜಾಯಿಸುತ್ತಿದ್ದಾರೆ. ಮೋದಿಯ ಮಾಧ್ಯಮ ತಂಡ ಇಂಥ ಸುದ್ದಿಗಳು ಮೂಲೆಮೂಲೆಗಳಿಗೂ ತಲುಪುವಂತೆ ಮಾಡುತ್ತಾ ತಮ್ಮ ದಕ್ಷತೆಯನ್ನು ಮೆರೆದಿದ್ದಾರೆ. ಮೋದಿ ಸರ್ಕಾರದ ಒಂದೇ ವರ್ಷದ ಸಾಧನೆ ಬಗ್ಗೆ ಇಲ್ಲೊಂದು ಸ್ಯಾಂಪಲ್ ಹೊರಬಿದ್ದಿದೆ ನೋಡಿ.

ಮಂತ್ರಿಗಳು ಸಂಸದರು ಆಗಾಗ್ಗೆ ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಉಳಿದುಕೊಂಡು ಪ್ರಪಂಚದ ಅತಿದೊಡ್ಡ ಪ್ರಜಾಪ್ರಭುತ್ವಕ್ಕೆ ಸೇವೆ ಸಲ್ಲಿಸುತ್ತಾರೆ. ಅವರಿಗೆ ಪ್ರಜಾತಾಂತ್ರಿಕವಾಗಿ "ಆಯ್ಕೆ"ಯಾಗಿರುವ ಸರ್ಕಾರದಿಂದಲೇ ಬಿಲ್ ಪಾವತಿಯಾಗುತ್ತದೆ. ಹೀಗೆ 2004ರಿಂದ 2014ರವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ ಯುಪಿಎ ಸರ್ಕಾರದ ಮಂತ್ರಿಗಳು ಮತ್ತು ಸಂಸದರ ಫೈವ್ ಸ್ಟಾರ್ ಹೋಟೆಲ್ ಬಿಲ್ 19 ಕೋಟಿ 77 ಲಕ್ಷ ರೂಪಾಯಿ! ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಮಂತ್ರಿ ಮಾನ್ಯರ ಫೈವ್ ಸ್ಟಾರ್ ಹೋಟೆಲ್ ಬಿಲ್ 25 ಕೋಟಿಗಳನ್ನು ಮೀರಿದೆ! ಒಂದೇ ವರ್ಷದಲ್ಲಿ ಹತ್ತು ವರ್ಷಗಳನ್ನು ಮೀರಿದ ಸಾಧನೆ!


ಇಂಥ ಅಪವ್ಯಯದ ಬಗ್ಗೆ ಬಿಜೆಪಿಯ ಸಂಸದ ಮತ್ತು ಸದನ ಸಮಿತಿಯ ಚೇರ್ಮನ್ ಅರ್ಜುನ್ ಮೇಘವಾಲ್‌ರನ್ನು ಪ್ರಶ್ನೆ ಮಾಡಿದಾಗ ಅವರು ನೀಡಿದ ಸಮರ್ಥನೆ ಹೀಗಿತ್ತು: "ಈ ಬಾರಿಯ ಲೋಕಸಭೆಯಲ್ಲಿ ಮೊದಲ ಬಾರಿ ಆಯ್ಕೆಯಾದ 330 ಮಂದಿ ಎಂಪಿಗಳಿದ್ದಾರೆ. ಅವರಿಗೆ ಅಧಿಕೃತ ನಿವಾಸಗಳನ್ನು ಒದಗಿಸಲು ಸಾಧ್ಯವಾಗದೆ ಇರುವುದರಿಂದ ಈ ವೆಚ್ಚ ಹೆಚ್ಚಾಗಿದೆ."

ಈ ಹೊಸ ಸಂಸದರು ಫೈವ್‌ಸ್ಟಾರ್ ಹೋಟೆಲ್‌ನಲ್ಲೇ ಯಾಕೆ ವಾಸ್ತವ್ಯ ಹೂಡಬೇಕು? ಸರ್ಕಾರಿ ಅತಿಥಿಗೃಹಗಳು, ರಾಜ್ಯ ಭವನಗಳು ಇದಕ್ಕಾಗಿಯೇ ಇವೆಯಲ್ಲವೆ? ಒಂದು ವೇಳೆ ಹೆಚ್ಚಿನ ಸ್ಥಳಾವಕಾಶ ಬೇಕೆಂದರೆ ಕಡಿಮೆ ವೆಚ್ಚದ ಮಧ್ಯಮವರ್ಗದ ಹೋಟೆಲ್‌ಗಳಲ್ಲಿ ಉಳಿಯಬಹುದಲ್ಲವೆ? ಈ ಪ್ರಶ್ನೆಗೆ ಸದ್ಯ ಅವರ ಬಳಿ ಉತ್ತರವಿಲ್ಲ.

ಅಧಿಕೃತ ಗೈಡ್‌ಲೈನ್ಸ್ ಪ್ರಕಾರ ಈ ಮಹಾನುಭಾವರನ್ನು ಲಭ್ಯವಿರುವ ಸರ್ಕಾರಿ ವ್ಯವಸ್ಥೆಯಲ್ಲಿ ಉಳಿಸಬೇಕು. ಫೈವ್‌ಸ್ಟಾರ್ ಹೋಟೆಲ್‌ಗಳಲ್ಲೇ ಉಳಿಸಬೇಕೆಂಬ ಯಾವ ನಿಯಮವೂ ಇಲ್ಲ. ಆದರೆ ಪ್ರಜಾಪ್ರಭುತ್ವದ ಪ್ರಭುಗಳಾಗಿ ದೆಹಲಿ ಸೇರಿದವರು ಕೇಳಬೇಕಲ್ಲಾ? ಮೊನ್ನೆ ಮೊನ್ನೆವರೆಗೆ ಸ್ಕೂಟರ್‌ಗೆ ಪೆಟ್ರೋಲ್ ಹಾಕಿಸಲು ಒದ್ದಾಡುತ್ತಿದ್ದ ನಮ್ಮ ಕರ್ನಾಟಕದ 'ಚಿತ್ತರೆ' ಖ್ಯಾತಿಯ ಸಂಸದನೇ ಇನ್ನು ಹೆಚ್ಚು ಹೆಚ್ಚು ಸವಲತ್ತುಗಳು ಬೇಕೆಂದು ಅಂಕಣ ಕೆತ್ತುತ್ತಿರುವಾಗ ಇನ್ನು ನೂರಾರು ಕೋಟಿಗಳ ಆಸ್ತಿ ಪಾಸ್ತಿಗಳನ್ನು ಘೋಷಿಸಿಕೊಂಡಿರು[illegible] ಮಹನೀಯರು ಸುಮ್ಮನಿರುತ್ತಾರೆಯೆ?

ಕೇಂದ್ರ ಮಂತ್ರಿಯ ನಾಯಿಮಾತ

ಬಿಜೆಪಿ ಆಡಳಿತದಲ್ಲಿರುವ ಹರ್ಯಾಣದಲ್ಲಿ ದಲಿತರು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ [illegible] ಅಂಕೆಯಿಲ್ಲ. ಇತ್ತೀಚೆಗೆ ಫರೀದಾಬಾದ್ ಬಳಿ ಜಾತಿವಾದಿ ಶಕ್ತಿಗಳು ದಲಿತರ ಮನೆಯೊಂದಕ್ಕೆ ಪೆಟ್ರೋ[illegible] ಬೆಂಕಿ ಹಚ್ಚಿದ ಪರಿಣಾಮವಾಗಿ ಎರಡು ಹಸುಗೂಸುಗಳು ಜೀವಂತ ಕರಕಲಾಗಿ ಹೋದವು. ಸುಟ್ಟ ಗಾಯ[illegible] ಯುವ ದಂಪತಿಗಳು ಹೇಗೋ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಇಂಥ ಘೋರಕೃತ್ಯ ಎಸಗಿದವರ ಮೇಲೆ ಕಠಿಣ ಕ್ರಮ ಜರುಗಿಸುವಂತೆ ಆಗ್ರಹಿಸಿ ದೇಶಾದ್ಯಂತ ಪ್ರತಿಭಟನೆಗಳು ನಡೆದವು. ಈ ಎರಡು ಹಸುಗೂಸುಗಳ ದಾರುಣ ಸಾವನ್ನು ಕಂಡು ಮನುಷ್ಯತ್ವದ ಲಕ್ಷಣವುಳ್ಳ ಪ್ರತಿಯೊಬ್ಬರೂ ಮರುಗಿದರು.



ಆದರೆ ಇಲ್ಲೊಬ್ಬ ಮಹಾನುಭಾವರಿದ್ದಾರೆ. ಜನರಲ್ ವಿಜಯಕುಮಾರ್ ಸಿಂಗ್ ಅಲಿಯಾಸ್ ವಿ.ಕೆ.ಸಿಂಗ್ ಎಂಬುದು ಅವರ ನಾಮಧೇಯ. ಇವರು ಸಾಮಾನ್ಯ ವ್ಯಕ್ತಿಯೇನಲ್ಲ; ಭಾರತದ ಮಾಜಿ ಸೇನಾ ದಂಡನಾಯಕರಾಗಿದ್ದವರು. ನಿವೃತ್ತಿ ನಂತರ ಬಿಜೆಪಿ ಸೇರಿ ಉತ್ತರ ಪ್ರದೇಶದ ಘಾಜಿಯಾಬಾದ್‌ನಿಂದ ಲೋಕಸಭೆಗೆ ಸ್ಪರ್ಧಿಸಿ 5.6 ಲಕ್ಷ ಓಟುಗಳ ಅಂತರದಲ್ಲಿ ಗೆದ್ದು ಬಂದವರು. ಇದು ಈ ಲೋಕಸಭಾ ಚುನ[illegible] ಎರಡನೇ ಅತಿ ಹೆಚ್ಚು ಅಂತರದ ಗೆಲುವು. ಇವರು ಹಾಲಿ ನರೇಂದ್ರ ಮೋದಿ ಸರ್ಕಾರದಲ್ಲಿ ಒಬ್ಬ ಮಂತ್ರಿ[illegible]

ಈ ಹಸುಳೆಗಳ ಜೀವಂತ ದಹನ ಘಟನೆಯ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಈತನ ಉತ್ತ[illegible] "ಯಾರೋ ನಾಯಿಗೆ ಕಲ್ಲು ಹೊಡೆದರೆ, ಅದಕ್ಕೆ ಕೇಂದ್ರ ಸರ್ಕಾರ ಹೇಗೆ ಹೊಣೆಯಾಗುತ್ತೆ?".

ಹಾಗೆಂದರೆ ಇಲ್ಲಿ ನಾಯಿ ಯಾರು? ವಿ.ಕೆ. ಸಿಂಗ್ ಎಂಬ ಜಾತಿವಾದಿ ದುರಹಂಕಾರಿ ಮಂತ್ರಿಗೆ [illegible] ದಲಿತ ಕೂಸುಗಳು ಬೀದಿ ನಾಯಿಯ ಸಮಾನವಾಗಿ ಕಂಡಿವೆ!

ಒಂದು ವರ್ಷದ ಹೆಣ್ಣುಕೂಸು ಮತ್ತು ಎರಡೂವರೆ ವರ್ಷದ ಗಂಡುಕೂಸು ಜೀವಂತ ಸುಟ್ಟ[illegible] ಹೃದಯವಿದ್ರಾವಕ ಘಟನೆ ಈ ಮನುಷ್ಯನ (ಕ್ಷಮಿಸಿ, ಈ ಜೀವಿ ಮನುಷ್ಯ ರೂಪ ಹೊಂದಿರುವುದರಿಂದ[illegible] ಸಂಬೋಧಿಸಬೇಕಾಗಿ ಬಂದಿದೆ) ಅಂತಃಕರಣದ ಮೇಲೆ ಯಾವುದೇ ಪರಿಣಾಮ ಬೀರಿರಲಿಲ್ಲ. ಬದಲಿಗೆ [illegible] ಕಂಡುಬಂದದ್ದು ತಮ್ಮ ಸರ್ಕಾರವನ್ನು ಸಮರ್ಥಿಸಿಕೊಳ್ಳುವ ಉಮೇದು ಮಾತ್ರ.

ಇಂಥ ಅಮಾನವೀಯ, ಸಂವೇದನಾರಹಿತ ಹೇಳಿಕೆಯ ಬಗ್ಗೆ ತೀವ್ರ ಖಂಡನೆ ವ್ಯಕ್ತವಾದ ನಂತರವ[illegible] ಪ್ರಾಣಿ ಎಚ್ಚೆತ್ತುಕೊಂಡು ಕ್ಷಮಾಪಣೆ ಕೇಳಬೇಕಿತ್ತು. ಆದರೆ ಈ ಪ್ರಾಣಿ "ನನ್ನ ಅಭಿಪ್ರಾಯ ನನ್ನದು, ಅ[illegible] ಈ ದೇಶದ ನಾಗರಿಕತೆಗೆ ಸವಾಲಾಕುವ ದಾಟಿಯಲ್ಲಿ ಮಾತಾಡುತ್ತಿದೆ. ಆತನ ಹೇಳಿಕೆಯ ವಿಡಿ[illegible] ಜಗಜ್ಜಾಹೀರಾಗಿದ್ದರೂ ಲೆಕ್ಕಿಸದೆ "ಪತ್ರಕರ್ತರು ನನ್ನ ಮಾತನ್ನು ತಿರುಚಿದ್ದಾರೆ" ಎಂದು ಪ್ರತ್ಯಾರೋಪ [illegible] ಇನ್ನೂ ಮುಂದುವರೆದು "ಇಂಥಾ ಪತ್ರಕರ್ತರಿಗೆ ಆಗ್ರಾದಲ್ಲಿರುವ ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊ[illegible] ಎಂಬ ದಾರ್ಷ್ಟ್ಯದ ಮಾತನ್ನಾಡಿದ್ದಾನೆ. ಈ ಹಿಂದೆ ಇದೇ ವಿ.ಕೆ.ಸಿಂಗ್‌ನ್ನು ಇಂದ್ರ ಚಂದ್ರ ಎಂದು [illegible] ಪತ್ರಕರ್ತರು ಈಗ ಯಾವ ಆಸ್ಪತ್ರೆಯನ್ನು ಆರಿಸಿಕೊಳ್ಳುತ್ತಾರೆಂಬುದು ಸದ್ಯ ತಿಳಿದುಬಂದಿಲ್ಲ.


ಈತನ ಭಂಡತನದ ಬಗ್ಗೆ ಮಾಧ್ಯಮಗಳಲ್ಲಿ ಬಿರುಸಿನ ಚರ್ಚೆ ಆರಂಭವಾದ ಹಿನ್ನೆಲೆಯಲ್ಲಿ ಕೇಂ[illegible] ಮಂತ್ರಿಗಳು ತಮ್ಮ ಮುಖ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಗೃಹಮಂತ್ರಿ ರಾಜನಾಥ ಸಿಂಗ್[illegible] ತಮ್ಮ ಹಲ್ಲು ಬಿಗಿಹಿಡಿದು ಮಾತಾಡಬೇಕೆಂಬ ಪುಕ್ಕಟೆ ಸಲಹೆ ಕೊಟ್ಟಿದ್ದಾರೆ. ಬಿಜೆಪಿಯ ಮೈತ್ರಿಕ[illegible] ಬಿಹಾರದ ಮಾಂಝಿ, ಪಾಸ್ವಾನ್ ಮುಂತಾದವರು ವಿ.ಕೆ.ಸಿಂಗ್ ಹೇಳಿಕೆಯನ್ನು ಬಹಿರಂಗವಾಗಿ ಖಂ[illegible] ಒತ್ತಡಕ್ಕೀಡಾದರು. ಅದಕ್ಕೂ ಕಾರಣವಿದೆ. ಯಾಕೆಂದರೆ ಇದೀಗ ಬಿಹಾರದಲ್ಲಿ ಚುನಾವಣಾ ಪ್ರಕ್ರಿಯೆ [illegible] ದಲಿತರ ಮತಬ್ಯಾಂಕನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ಪಕ್ಷಗಳು ರಾಜಕೀಯ ಮಾಡುತ್ತಿರುವುದು.

ಇದ್ಯಾವುದಕ್ಕೂ ಜಪ್ಪಯ್ಯ ಎನ್ನದ ಈ ಆಸಾಮಿ ಮತ್ತೊಂದು ವರಸೆ ಶುರು ಮಾಡಿಬಿಟ್ಟ. "ನಾನು [illegible] ಯೋಧರು ಜೀವದ ಹಂಗು ತೊರೆದು ದೇಶಕ್ಕಾಗಿ ಹೋರಾಡಿದ್ದೇವೆ" ಎಂದು ಟ್ವೀಟ್ ಮಾಡಿದ. [illegible] ಸಂದರ್ಭದಲ್ಲಿ ಈ ಟ್ವೀಟ್‌ನ ಉದ್ದೇಶವೇನು? ತಾನು ದೇಶ ಕಾಯುವ ಸೇನಾಧಿಕಾರಿಯಾಗಿದ್ದರಿಂ[illegible] ಪ್ರಶ್ನಿಸಬಾರದು ಎಂದೇ? ಈತನ ಪಕ್ಷ ದೇಶಭಕ್ತಿಯ ಹೆಸರಿನಲ್ಲಿ ದೇಶವನ್ನೇ ವಿನಾಶಕಾರಿ ಕೂಪಕ್ಕೆ ತ[illegible] ಇಂಥಾ ಸಮರ್ಥನೆ ಸಹಜ ಎನಿಸಿರಲಿಕ್ಕೂ ಸಾಕು.

ಇಲ್ಲಿ ಮತ್ತೊಂದು ಮಾತನ್ನು ಹೇಳಲೇಬೇಕು. ಯುದ್ಧದಲ್ಲಿ ಪ್ರಾಣ ಕಳೆದುಕೊಳ್ಳುವವರು ಸಾಮಾನ್ಯ[illegible] ಹೊರತು ವಿಕೆ ಸಿಂಗ್‌ನಂಥ ಉನ್ನತಾಧಿಕಾರಿಗಳಲ್ಲ ಎಂಬುದನ್ನು ಹೆಚ್ಚು ವಿವರಿಸುವ ಅಗತ್ಯವಿಲ್ಲ. ಇಂಥ ಉನ್ನ[illegible] ತಮ್ಮ ಎಸಿ ಕಚೇರಿಗಳಲ್ಲೇ ಕುಳಿತು ಯುದ್ಧ 'ಮಾಡುತ್ತಾರೆ'.

ಮೋದಿ ಕೂಟದ ಮನಸ್ಥಿತಿಯನ್ನು ಬಹಿರಂಗಪಡಿಸುವಂತೆ ಇಂಥಾ ಹೇಳಿಕೆಗಳು ಆಗಾಗ್ಗೆ ಹೊ[illegible] ಇರುತ್ತವೆ. ಇದಕ್ಕೆ ಮೋದಿಯ ಚಾರಿತ್ರಿಕ 'ಕುನ್ನಿ' ಹೇಳಿಕೆಯೇ ಸಾಕ್ಷಿ.

ಪ್ರಧಾನಿ ಅಭ್ಯರ್ಥಿಯಾಗಿ ಇವರು ಬಿರುಸಿನ ಪ್ರಚಾರ ಕೈಗೊಂಡಿದ್ದ ಸಂದರ್ಭದಲ್ಲಿ ಪತ್ರಕರ್ತರ[illegible]




ಗುಜರಾತ್ ಕೋಮು ಹತ್ಯಾಕಾಂಡದಲ್ಲಿ ಸಾವಿರಾರು ಮಂದಿ ಪ್ರಾಣ ಕಳೆದುಕೊಂಡರಲ್ಲಾ? ಆ ಬಗ್ಗೆ ನಿಮ್ಮ ಅಭಿ[illegible] ಎಂದು ಕೇಳಿದ್ದರು. ಆಗ ಮಾನ್ಯ ಮೋದಿಯವರು ಕೊಟ್ಟಿದ್ದ ಉತ್ತರ "ಒಂದು ಕುನ್ನಿ ನನ್ನ ಕಾರಿನ [illegible] ಸತ್ತರೂ ನನಗೆ ನೋವಾಗುತ್ತದೆ; ಜನರು ಸತ್ತರೆ ನೋವಾಗದೆ ಇರುತ್ತದೆಯೆ?" ಎಂದು ಉತ್ತರಿಸಿದ್ದ[illegible] ಜ್ವಾಲೆಗೆ ಬಲಿಯಾದ ಅಮಾಯಕ ಮುಸ್ಲಿಮರನ್ನು ಕುನ್ನಿಗಳಿಗೆ ಹೋಲಿಸಿದ್ದರ ಬಗ್ಗೆ ದೇಶಾದ್ಯಂತ [illegible] ಮಹಾಪೂರವೇ ಹರಿದಿತ್ತು.

ಈಗ ವಿಕೆ ಸಿಂಗ್‌ನ ಸರದಿ. ಈ ಬಗ್ಗೆ ಪಕ್ಷಾತೀತವಾಗಿ ಖಂಡನೆ ವ್ಯಕ್ತವಾಗಿದೆ. ಸಮಾಜವಾದಿ ಪಕ್ಷ[illegible] ಆಜಂ ಖಾನ್ ಪ್ರತಿಕ್ರಿಯೆ ಗಮನ ಸೆಳೆಯುವಂಥದ್ದು. "ಮೋದಿ ಆಡಳಿತದಲ್ಲಿ ಆರೆಸ್ಸೆಸ್‌ನ ಷಡ್ಯಂತ್ರ[illegible] ಪಡೆದುಕೊಂಡಿವೆ, ಎರಡು ವರ್ಷಗಳ ಹಿಂದಿನ ಮೋದಿಯ ಕುನ್ನಿ ಈಗ ಬೆಳೆದು ದೊಡ್ಡ ನಾಯಿಯ[illegible]

ಯಾರು ಏನೇ ಹೇಳಲಿ; ಈ ಮಾತನ್[illegible] ಒಪ್ಪಲೇಬೇಕಲ್ಲವೆ?

ಅಶೋಕ್ ಖೇಣಿಗೆ ಮುಖಭಂಗ!



ಅಶೋಕ್ ಖೇಣಿ

ಕಳಸಾ ಬಂಡೂರಿ ಯೋಜನೆ ಪೂರ್ಣಗೊಳಿಸಬೇಕೆಂದು ಒತ್ತಾಯಿಸಿ ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಹೋರಾಟ ಆರಂಭವಾಗಿ ಇಲ್ಲಿಗೆ ಮೂರು ತಿಂಗಳಾಗುತ್ತಾ ಬಂತು. ಹಾಗೆ ನೋಡಿದರೆ ಈ ಯೋಜನೆ ಸಾಪೇಕ್ಷವಾಗಿ ಸಣ್ಣ ಯೋಜನೆ. ಉತ್ತರ ಕರ್ನಾಟಕದ ಆರೇಳು ತಾಲೂಕುಗಳ ಜನರಿಗೆ ಕುಡಿಯುವ ನೀರು ಮತ್ತು ನೀರಾವರಿ ಸೌಲಭ್ಯ ಒದಗಿಸುತ್ತದೆಂಬ ನಿರೀಕ್ಷೆ ಇದೆ. ಆದ್ದರೂ ಈ ಹೋರಾಟಕ್ಕೆ ಇಡೀ ಕರ್ನಾಟಕದ ಜನತೆ ಒಕ್ಕೊರಲಿನ ಬೆಂಬಲ ಕೊಟ್ಟಿದೆ. ...ಅಂಗದವರೂ ಹುಬ್ಬಳ್ಳಿವರೆಗೆ ಪಾದ ಬೆಳೆಸಿ ತಮ್ಮ ಬೆಂಬಲ ಘೋಷಿಸಿದ್ದಾರೆ. ಸಾಹಿತಿಗಳು, ...ಸಂಸ್ಥೆಗಳು ಎಲ್ಲರೂ ಸರದಿಯಂತೆ ಬೆಂಬಲದ ಮಹಾಪೂರ ಹರಿಸುತ್ತಿದ್ದಾರೆ.

...ಹೀಗೆ ಬೆಂಬಲ ಸೂಚಿಸುತ್ತಿರುವವರಲ್ಲಿ ಜನಪರ ...ಗಳು ಮಾತ್ರವಲ್ಲ; ತಮ್ಮ ಬೇಳೆ ಬೇಯಿಸಿಕೊಳ್ಳಲು ಸುಸಂದರ್ಭ ವೆಂದು ಮೂರು ಕಾಸಿನ ...ಯೂ ಉಳಿಸಿಕೊಳ್ಳದ ರಾಜಕಾರಣಿಗಳು ಮತ್ತಿತರ ಅವಕಾಶವಾದಿಗಳು ಈ ಹೋರಾಟದಲ್ಲಿ ...ರಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹೋರಾಟದ ದೃಷ್ಟಿಯಿಂದ ಇಂಥ ನಾಲಾಯಕ್ಕುಗಳನ್ನು ಪತ್ತೆಹಚ್ಚಿ ...ಇಡುವುದು ಅಲ್ಲಿನ ಹೋರಾಟಗಾರರಿಗೆ ...ತ್ತೊಂದು ಹೆಚ್ಚುವರಿ ಕೆಲಸವಾಗಿದೆ. ಅದರಲ್ಲೂ ...ಗ್ರೆಸ್ - ಬಿಜೆಪಿ ಕೂಟದವರ ಮಸಲತ್ತು ...ಬಹಿರಂಗಾಗಿರುತ್ತದೆ. ತಮ್ಮದೇ ಕೇಂದ್ರ ಸರ್ಕಾರ ಮತ್ತು ಗೋವಾ ರಾಜ್ಯ ಸರ್ಕಾರಗಳಿಗೆ ತಿಳಿಹೇಳಿ ಈ ಯೋಜನೆಯನ್ನು ಸುಗಮಗೊಳಿಸಲು ಕಿಂಚಿತ್ತೂ ಪ್ರಯತ್ನ ಮಾಡದೆ, ಕೇವಲ ಪೋಸು ಕೊಡುವ ಮೂಲಕ ಮನ್ನಣೆ ಪಡೆಯಲು ಈ ಕೂಟ ತಿಪ್ಪರಲಾಗ ...ಸುತ್ತಿದೆ.

...ದೇ ಹಾದಿಯಲ್ಲಿ ಮತ್ತೊಂದು ಹೊಸ ಪಕ್ಷವೂ ... ಅದರ ಹೆಸರು ಕರ್ನಾಟಕ ಮಕ್ಕಳ ಪಕ್ಷ ಅಂತ. ...ಮ ಹುಡುಗಾಟ ಅಂತ ಕೇಳಬೇಡಿ. ಕಳೆದ ...ಲ್ಲಿ ಚುನಾವಣೆ ವೇಳೆಯಲ್ಲಿ ದಿಢೀರನೆ ಇಂಥ ...ಮ ಹುಡುಗಾಟದ ಪಕ್ಷ ಕಟ್ಟಿ, ಮೊದಲ ...ಯತ್ನದಲ್ಲೇ ಎಂಎಲ್‌ಎ ಕೂಡ ಆಗಿ ಅಶೋಕ್ ...ಣಿ ಎಂಬ ವ್ಯಕ್ತಿ ಉತ್ತರ ಕರ್ನಾಟಕದಲ್ಲಿ ...ಸಿದ್ದಾನೆ ಎಂಬುದನ್ನು ಮರೆಯಬೇಡಿ. ಈ ...ಷ್ಯ ತನಗೆ ಜನಮನ್ನಣೆ ಗಳಿಸಿಕೊಳ್ಳಲು ನಾನಾ ...ಪ್ಪುಗಳನ್ನು ಮಾಡುತ್ತಿರುತ್ತಾನೆ. ಹಾಗೆಯೇ ಕಳಸಾ ಬಂಡೂರಿ ಹೋರಾಟದಲ್ಲೂ ತೂರಿಕೊಳ್ಳುವ ಪ್ರಯತ್ನ ...ದ್ದಾನೆ. ಬೆಂಗಳೂರು ಮತ್ತು ಮೈಸೂರು ನಡುವೆ ...ಮ ಎಕ್ಸ್‌ಪ್ರೆಸ್ ವೇ ಕಾರಿಡಾರ್ ಮಾಡುತ್ತೇನೆಂದು ಸಾವಿರಾರು ಎಕರೆ ಸರ್ಕಾರಿ ಭೂಮಿಯನ್ನು, ರೈತರ ಭೂಮಿಯನ್ನು ಕಬಳಿಸಿ ರೈತ ಕಂಟಕನಾಗಿರುವುದು ನಮಗೆಲ್ಲಾ ತಿಳಿದ ಸಂಗತಿ. ತನ್ನ ದುಷ್ಟ ಯೋಜನೆಯ ವಿರುದ್ಧದ ಹೋರಾಟವನ್ನು ಉಪಶಮನ ಮಾಡಲು ಆತ ಅಶೋಕ್ ಖೇಣಿ ಅಭಿಮಾನಿ ಸಂಘವೊಂದನ್ನು ಮಂಡ್ಯ - ಮೈಸೂರು ಪ್ರಾಂತ್ಯದಲ್ಲಿ ಹುಟ್ಟು ಹಾಕಿದ್ದ. ಕೆಲವು ಪುಢಾರಿಗಳನ್ನು, ಮತ್ತಷ್ಟು ಪುಂಡರನ್ನೂ ಕಟ್ಟಿಕೊಂಡು ಯುವಕರಿಗೆ ದಿಕ್ಕುತಪ್ಪಿಸಿ ಕ್ರಿಕೆಟ್ ಟೂರ್ನ್‌ಮೆಂಟ್, ಗಣಪತಿ ಉತ್ಸವ, ರಾಜ್ಯೋತ್ಸವ ಕಾರ್ಯಕ್ರಮ ಇತ್ಯಾದಿಗಳನ್ನು ನಡೆಸುತ್ತಿದ್ದ. ಸದ್ಯಕ್ಕೆ ಅವು ಅಪ್ರಸ್ತುತ ಆಗಿರುವುದರಿಂದ ಖೇಣಿ ಈ ಪುಢಾರಿಗಳಿಗೆ ಕಾಸು ಬಿಚ್ಚುತ್ತಿಲ್ಲವಾಗಿ ಈ ಭಾಗದಲ್ಲಿದ್ದ ಎಲ್ಲ ಅಭಿಮಾನಿಗಳು ಸದ್ಯ ನಾಪತ್ತೆಯಾಗಿದ್ದಾರೆ.

ಆದರೆ ಈ ಮನುಷ್ಯ ಉತ್ತರ ಕರ್ನಾಟಕದ



ಭಾಗದಲ್ಲಿ ಈ ತಂತ್ರ ಮುಂದುವರೆಸಿದ್ದಾನೆ. ಕಳೆದ ವಾರ ಕಳಸಾ ಬಂಡೂರಿ ಹೋರಾಟಕ್ಕೆ ರಾಜಸ್ತಾನದ ಜಲತಜ್ಞ ರಾಜೆಂದ್ರ ಸಿಂಗ್‌ರನ್ನು ಕರೆಸಿ ಮುನ್ನೆಲೆಗೆ ಬರಲು ಪ್ರಯತ್ನಿಸಿದ್ದಾನೆ. ಆದರೆ ಮೊದಲ ಯತ್ನವೇ ಆತನಿಗೆ ತಿರುಗುಬಾಣವಾಗಿ ಮುಖಭಂಗ ಅನುಭವಿಸುವಂತಾಗಿದೆ.

ನಡೆದದ್ದಿಷ್ಟು. 'ಸಮಾನತೆಗಾಗಿ ಜನಾಂದೋಲನ' ಸಂಘಟನೆಯ ಕಾರ್ಯಕರ್ತರು ಮಾಜಿ ನಕ್ಸಲ್ ನಾಯಕ ಸಿರಿಮನೆ ನಾಗರಾಜ್ ಮತ್ತು ಸ್ವರಾಜ್ ಅಭಿಯಾನದ ಶಿವಾನಂದ ಕುಗ್ವೆ ಅವರ ನೇತೃತ್ವದಲ್ಲಿ ಕಳೆದ ವಾರ ಈ ಹೋರಾಟಕ್ಕೆ ಬೆಂಬಲ ನೀಡಿ ಭಾಗವಹಿಸಿದ್ದರು. ಆದರೆ ಈ ತಂಡ ಅಂದು ವೇದಿಕೆ ಏರಲು ಹೊರಡುತ್ತಿದ್ದಂತೆ ವೇದಿಕೆಯ ಬ್ಯಾಕ್‌ಡ್ರಾಪ್‌ನಲ್ಲಿ ಅಶೋಕ್ ಖೇಣಿಯ ಭಾರಿ ಬ್ಯಾನರ್‌ವೊಂದು ರಾರಾಜಿಸುತ್ತಿತ್ತು. ಅದಕ್ಕೆ 'ಅಶೋಕ್ ಖೇಣಿ ಯೂತ್ ಮೂವ್‌ಮೆಂಟ್' ಎಂಬ ಹೆಸರು ಬೇರೆ. ಕೂಡಲೆ ಪ್ರತಿಭಟನೆ ತೋರಿದ ಸಿರಿಮನೆ ಮತ್ತು ಶಿವಾನಂದ್ ಇವರು ಈ ಬ್ಯಾನರ್ ತೆಗೆಯದೇ ತಾವು ವೇದಿಕೆ ಏರಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಖೇಣಿ ಚೇಲಾಗಳ ಉಪಟಳದಿಂದ ಮೊದಲೇ ರೋಸಿಹೋಗಿದ್ದ ಅಲ್ಲಿನ ಸಂಘಟಕರಲ್ಲೊಬ್ಬರು ನೆರೆದಿದ್ದ ಜನಸ್ತೋಮದೆದುರೇ ವೇದಿಕೆಯೇರಿ ಆ ಅನಿಷ್ಟವನ್ನು ಕಿತ್ತೆಸೆದೇಬಿಟ್ಟರು. ನಂತರ ಕಾರ್ಯಕ್ರಮ ಸಾಂಗವಾಗಿ ಮುಂದುವರೆಯಿತು.

ಇಂಥಾ ಪ್ರಬುದ್ಧತೆ ಮತ್ತು ಬದ್ಧತೆ ಇಂದಿನ ಚಳವಳಿಗಾರರಲ್ಲಿ ಕಾಣಸಿಗುವುದು ಅಪರೂಪ. ಹುಬ್ಬಳ್ಳಿಯ ಹೋರಾಟಗಾರರಿಗೆ ನಿಮ್ಮೆಲ್ಲರ ಪರವಾಗಿ ಒಂದು ದೊಡ್ಡ ಸಲಾಂ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಓದುಗರ ಗಮನಕ್ಕೆ

ಮಂಡ್ಯ ಜಿಲ್ಲೆಯಿಂದ ಈ ಹಿಂದೆ ಲಕ್ಷ್ಮಣ ಚೀರನಹಳ್ಳಿ ಎಂಬುವವರು ನಮ್ಮ ಪತ್ರಿಕೆಗೆ ವರದಿಗಾರರಾಗಿದ್ದರಷ್ಟೆ. ಈಗ ನಮ್ಮ ಸಂಸ್ಥೆಯೊಂದಿಗೆ ಅವರಿಗೆ ಯಾವುದೇ ಸಂಬಂಧವಿರುವುದಿಲ್ಲ. ಕಳೆದ ಮೂರು ವರ್ಷಗಳಿಂದಲೂ ಮಂಡ್ಯ ನಾಗೇಶ್ ಅವರು ಪತ್ರಿಕೆಯ ವರದಿಗಾರರಾಗಿರುವುದನ್ನು ಸಹೃದಯಿ ಓದುಗರು, ಪತ್ರಿಕೆಯ ಏಜೆಂಟರುಗಳು ಗಮನಿಸಬೇಕೆಂದು ಮನವಿ.

– ಪ್ರಕಾಶಕರು

03 ⏮

ಧ.ದೇ.ಜ

ಧರ್ಮಕ್ಕು ದಲಿತರಿಗು
ಆಗದ ಸಂಬಂಧ
ದಲಿತರ ಸಾವಿಗೆಲ್ಲ
ಧರ್ಮ ತಾನೆ ಕಾರಣ

ದೇವರು ದಲಿತರು
ಶತಮಾನದ ಶತ್ರುಗಳು
ದಲಿತರ ನೋವಿಗೆಲ್ಲ
ದೇವರು ತಾನೆ ಕಾರಣ

ಜಗದ ನಾಶಕ್ಕೆಲ್ಲ
ಜಗದ್ಗುರುಗಳೇ ಕಾರಣ
ಜನರನ್ನು ಕೊಲ್ಲುವ
ಕೊಲೆಗಡಕರು

ಧರ್ಮ...
ದೇವರು....
ಜಗದ್ಗುರು...
ಈ ಲೋಕ ನಾಶದ
ಪಿತಾಮಹರು

ಎಲ್ಲರಂತವನಲ್ಲ

ಗೆಳತಿ....
ಎಲ್ಲರಂತವನಲ್ಲ ನಾನು
ತನ್ನ ಹಣೆಬರಹ ಬರೆದುಕೊಳ್ಳದೆ
ಮಗಳನ್ನೆ ಮಡದಿ ಮಾಡಿಕೊಂಡು
ಯಾರದೋ ಹಣೆಬರಹ ಗೀಚುವ
ನೀಚಬ್ರಹ್ಮನಂತಲ್ಲ ಕಣೆ ನಾನು.

ಗೆಳತಿ....
ಲಕ್ಷ್ಮಿ ಗೌರಿ ಹೆಂಡತಿಯರಿದ್ದರು
ಮೋಹದ ಮತ್ತಿಗೆ
ಸೂಳೆಯನ್ನಿಟ್ಟುಕೊಂಡ
ವಿಷ್ಣು ಶಿವನಂತಲ್ಲ ಕಣೆ ನಾನು.


ಗೆಳತಿ....
ಹೆತ್ತು ಹೊತ್ತು ಹಾಲುಣಿಸಿ ಬೆಳೆಸಿದ
ಹೆತ್ತ ತಾಯಿಯ ಕತ್ತ ಕತ್ತರಿಸಿದ
ಪರಶುರಾಮನಂತಲ್ಲ ಕಣೆ ನಾನು.

ಗೆಳತಿ...
ಯಾವನೋ ಹೇಳಿದ ಮಾತಿಗೆ
ಹೆಂಡತಿ ಮೇಲೆ ನಂಬಿಕೆ ಇಲ್ಲದೆ
ತುಂಬು ಗರ್ಭಿಣಿಯ ಕಾಡಿಗಟ್ಟಿ
ಬೆಂಕಿಯೊಳಗೆ ನೂಕಿದ
ರಾಮನಂತಲ್ಲ ಕಣೆ ನಾನು

ಗೆಳತಿ....
ತನ್ನ ಬೇಸರದ ಬಯಕೆಗೆ
ಪಟ್ಟದ ರಾಣಿಯ ಪಣಕ್ಕಿಟ್ಟು
ಸೋತು ಶಿರಬಾಗಿ
ಆಕೆಯ ಸೀರೆ ಹರಿಯುವುದನ್ನು
ನೋಡುತ್ತಾ
ಸುಮ್ಮನೆ ಕುಂತ
ಷಂಡ ಪಾಂಡವರಂತಲ್ಲ ಕಣೆ ನಾನು.

ಗೆಳತಿ...
ಕಪಟ ನಾಟಕದ ನಯವಂಚಕನಾಗಿ
ಬೆಂಕಿಗೆ ತುಪ್ಪ ಸುರಿಯುತ್ತಾ
ಲಕ್ಷಾಧಿಲಕ್ಷ ಬಡಜೀವಿಗಳ
ರಕ್ತದ ಕೋಡಿ ಹರಿಸಿದ
ಕೃಷ್ಣನಂತಲ್ಲ ಕಣೆ ನಾನು.

ಗೆಳತಿ...
ಯುದ್ಧದ ಮತ್ತಿನಲ್ಲಿ ಮೈಮರೆತು



ಮುದ್ದು ಅಮೃತಮತಿಯ
ಆಸೆಯನ್ನೆಲ್ಲಾ ಸುಟ್ಟು
ಅವಳನ್ನೆ ಅಪರಾಧಿ ಮಾಡಿದ
ಮೋಸದ ಯಶೋಧರನಂತಲ್ಲ ಕಣೆ ನಾನು.

ಗೆಳತಿ ಅವರಂತಲ್ಲ ಕಣೆ ನಾನು
ಏಕೆಂದರೆ ನಾನು ಮನುಷ್ಯ.

ನಾನು ಬರೆಯುತ್ತೇನೆ

ನಾನು ಬರೆಯುತ್ತೇನೆ
ಪ್ರಕೃತಿ ಪ್ರೀತಿ ಪ್ರೇಮಗಳನ್ನಲ್ಲ
ಸಡಗರ ಸಂಭ್ರಮವನ್ನಲ್ಲ

ನಾನು ಬರೆಯುತ್ತೇನೆ
ಮತಿಗಳ ಇತಿಹಾಸವನ್ನಲ್ಲ
ಅಂತೆಕಂತೆಗಳ ಪುರಾಣವಲ್ಲ
ಭ್ರಮೆಯೇ ತುಂಬಿದ ಭಗವದ್ಗೀತೆಯಲ್ಲ


ನಾನು ಬರೆಯುತ್ತೇನೆ
ಶತಮಾನದ ಹಸಿವಿಗೆ ತಮ್ಮನ್ನೆ
ಮಾರಿಕೊಂಡು
ಕಣ್ಣೀರಿನಲ್ಲೆ ಮುಖ ತೊಳೆದುಕೊಂಡು
ಬೀದಿಯಲ್ಲಿ ಮಲಗಿ ಬದುಕುವ
ನನ್ನ ಜನರ ಕಥೆಯನ್ನ

ನಾನು ಬರೆಯುತ್ತೇನೆ
ಭಾರತದ ಬಾಪುಟವ ಬಾಯೊಳಗೆ ತುರುಕಿ
ಅತ್ಯಾಚಾರ ಮಾಡಿದವರ
ನನ್ನವ್ವಂದಿರ ಬೆತ್ತಲೆ ಸೇವೆಯನ್ನು
ಕಣ್ತುಂಬಿಸುತ್ತಾ
ಭಾರತವ್ವಳ ಸೀರೆ ಬಿಚ್ಚುವ
ಸಂಸ್ಕೃತಿ ರಕ್ಷಕರ ಬಂಡಾಟವನ್ನು

ನಾನು ಬರೆಯುತ್ತೇನೆ
ಬಸುರಿಯಾದ ಹುಚ್ಚಿಯ
ಹಸಿದ ಒಡಲನ್ನು
ತಂದೆ ತಾಯಿ ತಿಳಿಯದ
ಕಸದ ಕಂದಮ್ಮಗಳ
ಕಣ್ಣೀರನ್ನು

ನಾನು ಬರೆಯುತ್ತೇನೆ
ನನ್ನದೆಯಾದ
ನನ್ನ ಜನರ ಇತಿಹಾಸವನ್ನು
ನಾನು ಬರೆಯುತ್ತೇನೆ

■ ಹುಚ್ಚಂಗಿ ಪ್ರಸಾದ್



ಸೋಸಲೆ ಮಠದ ಕ್ವಾಟ್ಲೆ ಸ್ವಾಮಿ

1824ರಲ್ಲಿ ಮುಮ್ಮಡಿ ಕೃಷ್ಣ
ಒಡೆಯರ ಆಸರೆಯ ಮೇ
ಕರ್ನಾಟಕಕ್ಕೆ ವಲಸೆ ಬ
. ವಿದ್ಯಾವಲ್ಲಭರಿಗೆ ಮೈಸೂರು
ಟಿ. ನರಸಿಪುರದ ತ್ರಿ
ಸಂಗಮದ ಸೋಸಲೆ ಗ್ರಾಮ
ಉಂಬಳಿಯಾಗಿ ನೀಡಿದ್ದರಿಂ
ಕಾಲಕ್ರಮೇಣ ಅದೇ ಸೋ
ವ್ಯಾಸರಾಜ ಮಠವಾಯಿತು. ಆಗಿ
ಭಾಷಾವಾರು ಪ್ರಾಂತಗಳಾ
ಈಗಿನಂತೆ ರಾಜ್ಯಗಳಾ
ಇಲ್ಲದ್ದರಿಂದ ತಮಿಳುನಾಡು, ಆ
ಮತ್ತು ಕರ್ನಾಟಕಗಳಲ್ಲಿ ವ್ಯಾಸ
ಮಠದ ಸರಿಸುಮಾರು ಐವತ್ತ
ಶಾಖೆಗಳು ತಲೆ ಎತ್ತಿದ್ದ
ಆದರಲ್ಲೂ ಬೆಂಗಳೂ
ನಗರದುದ್ದಕ್ಕೂ ಚಿಕ್ಕಪೇ
ವಿ.ವಿ.ಪುರಂ, ಬಸವನಗು
ಮಹಾಲಕ್ಷ್ಮಿ ಬಡಾವಣೆ ಮ
ಸುಬ್ರಹ್ಮಣ್ಯಪುರ ಸೇರಿದಂತೆ ಐ
. ಶಾಖೆಗಳಾದ

ಮಠ ನಂಬಿದ ತಪ್ಪಿಗೆ ಪೀಠದ ಪಾಪದ ಮೂಟೆ ಹೊರಬೇಕಾದ ಕರ್ಮ ರಾಮಚಂದ್ರಾಪುರದ ರಾಘವೇಶ್ವರನ ಹವ್ಯಕ ಸಂತತಿಯದ್ದಾದರೆ, ಪಾಪವನ್ನೇ ಮಾಡದೆ ಪ್ರಾರಬ್ಧ ಕರ್ಮಕ್ಕೆ ತಲೆಕೊಡಬೇಕಾದ ಗ್ರಾಚಾರ ಸೋಸಲೆ ವ್ಯಾಸರಾಜ ಮಠದ ಮಾಧ್ವ ಮಡಿವಂತರದ್ದು!

ಕರ್ಮಠ ಕರ್ಮವೆಂದರೆ ಇದೇನಾ? ಪೀಠದ ಪಾಪಕ್ಕೆ ಭಕ್ತರು ದಂಡ ಕಟ್ಟಲೇಬೇಕಾ ಅಥವಾ ಮೌಢ್ಯದ ಮರೆಯಲ್ಲಿನ ಮೋಸದ ಕಿಡಿ ಯಾವತ್ತಿದ್ದರೂ ಬೆಂಕಿಯಾಗಿ ಸುಟ್ಟೇ ತೀರುತ್ತಾ ಗೊತ್ತಿಲ್ಲ, ಅಂತೂ ಕರ್ನಾಟಕದ ಮತ್ತೊಬ್ಬ ಸ್ವಾಮಿ ಜೈಲು ಪಾಲಾಗಿದ್ದಾನೆ. ಬಿಡದಿಯ ಖದೀಮ ನಿತ್ಯಾನಂದ, ನಂಬಿದ ಭಕ್ತನ ಮಡದಿಯ ಸೆರಗಿಗೇ ಕೈಯಿಟ್ಟ ಅಚಲಾಶ್ರಮದ ದಯಾನಂದ ಸ್ವಾಮಿ, ಹೆಣ್ಣು ಮಗುವೊಂದನ್ನು ಬೆಂಕಿಗಾಹುತಿ ಮಾಡಹೊರಟ ಅಥಣಿ ಜುಂಝುರವಾಡದ ಅಪ್ಪಯ್ಯ ಸ್ವಾಮಿ, ಬಂದ ಭಕ್ತನನ್ನೇ ಸಲಿಂಗಿ ಚೇಷ್ಟೆಗೀಡುಮಾಡಿದ ಕನಕಪುರ ಕಳ್‌ಬಾಳು ಮಠದ ಪುಣ್ಯ ಸ್ವರೂಪಿ ಶಿವಾಚಾರ್ಯ ಇತ್ಯಾದಿ ಕ್ರಿಮಿನಲ್ ಸ್ವಾಮಿಗಳ ಸಾಲಿಗೆ ತಾನೇನು ಕಮ್ಮಿ ಎಂಬಂತೆ ಜೈಲು ಪಾಲಾಗಿದ್ದಾನೆ ಸೋಸಲೆ ವ್ಯಾಸರಾಜ ಮಠದ ಸೋಕಾಲ್ಡ್ ಜಗದ್ಗುರು ಶ್ರೀಶ್ರೀಶ್ರೀ ವಿದ್ಯಾ ಮನೋಹರ ತೀರ್ಥ ಮಹಾಸ್ವಾಮೀಜಿ!



ನೋಡಲು ಹಡಾಸು ತೆಲುಗು ಸಿನಿಮಾವೊಂದರ ವಿಲ್ಲನ್‌ನಂತೆ ದುಷ್ಟ ಕಳೆ, ತಿಂದು ಕೊಬ್ಬಿದ ಹಂದಿಯಂತೆ, ಪೊಗರು ಕಾಯ, ಅಡ್ಡಂಬಡ್ಡ ಎಲ್ಲೆಂದರಲ್ಲಿ ಹೊಡಕೊಂಡ ವಿಭೂತಿ ಪಟ್ಟೆ, ಕೊರಳಿಗೆ ತರಹೇವಾರಿ ಮಣಿ ಪೋಣಿಸಿಕೊಂಡ ಜಪಮಾಲೆ ಮತ್ತು ಬಾಕ್ಸರ್ ಮೈಕ್‌ಟೈಸನ್ ಥರವೇ ಕಣ್ಣಿಗೊಂದು ಸ್ಟೈಲಿಶ್ ಕನ್ನಡಕ. ಮತ್ತೊಂದು ಆ್ಯಂಗಲ್‌ನಿಂದ ತಮಿಳು ಸಿನಿಮಾದ ರೇಪಿಸ್ಟ್‌ನಂತೆಯೂ ಕಾಣಬಹುದಾದ ಶ್ರೀಶ್ರೀಶ್ರೀ ವಿದ್ಯಾ ಮನೋಹರ ತೀರ್ಥಸ್ವಾಮೀಜಿ ಸದ್ಯ ಮೈಸೂರು ಪಕ್ಕದ ನಂಜನಗೂಡು ಜೈಲಲ್ಲಿ ಕಂಬಿ ಎಣಿಸುತ್ತಲೂ ಇರಬಹುದು ಮುದ್ದೆ ಮುರಿಯುತ್ತಲೂ ಇರಬಹುದು!

ಈ ವಿದ್ಯಾ ಮನೋಹರತೀರ್ಥ ಸ್ವಾಮೀಜಿ ಮಾಡಿದ ಘನಕಾರ್ಯಗಳು ಒಂದಾ ಎರಡಾ? ತನ್ನದೇ ಸಾಮ್ರಾಜ್ಯದಂತಿರುವ ಸೋಸಲೆ ವ್ಯಾಸರಾಜಮಠದ ಚಿನ್ನಾಭರಣಗಳನ್ನೆಲ್ಲ ಕಂಡಾಪಟ್ಟೆ ರೇಟಿಗೆ ಮಾರಿ ಹಾಕಿದ. ಹಿಂದಿನ ಸ್ವಾಮೀಜಿಗಳು ಪೈಸೆಗೆ ಪೈಸೆ ಕೂಡಿಟ್ಟು ಮಾಡಿದ ಆಸ್ತಿಯನ್ನೆಲ್ಲ ತನ್ನ ಚಿಲ್ಲರೆ ಶೋಕಿಗೆ ಮಾರಿಕೊಂಡಿದ್ದಾನೆ.

ಮಠದ ಆಸರೆಯಲ್ಲಿದ್ದ ಹೆಣ್ಣು ಮಕ್ಕಳನ್ನೂ ಪೀಡಿಸಿ
ಸ್ವಾಮಿಯಾಗಿದ್ದುಕೊಂಡೇ ಮಠದ ಒಂದೊಂದೇ ಪು
ಆಸ್ತಿಪಾಸ್ತಿಗಳನ್ನೆಲ್ಲ ರಿಯಲ್ ಎಸ್ಟೇಟ್ ಘಟಿಂಗ
ಮಾರಲಾರಂಭಿಸಿದ್ದಾನೆ. ಜೊತೆಗೆ ಲೇವಾದ
ಬಡ್ಡಿದಂಧೆಯನ್ನೂ ಶುರುವಿಟ್ಟಿದ್ದಾನೆ. ಒಂದೇ ಸೋ
ಮೂರ್ನಾಲ್ಕು ಮಂದಿಗೆ ಮಾರಿ ವಂಚಿಸುವುದು,
ಖಾತೆಯಲ್ಲಿ ದುಡ್ಡೇ ಇಲ್ಲದೆ ಸಿಕ್ಕಾಪಟ್ಟೆ ಚೆಕ್ಕು
ನೀಡುವುದು, ಹಾಗೆ ನೀಡಿದ ಚೆಕ್ಕುಗಳೆಲ್ಲ ಬೌನ್ಸ್ ಹೊ
ವಂಚನೆ ಕೇಸಲ್ಲಿ ಪೊಲೀಸರಿಂದ ಪದೇ
ಅರೆಸ್ಟಾಗುವುದು, ಜೈಲು, ಕೋರ್ಟು, ಲಾಕಪ್ಪು, ಪೊ
ಸ್ಟೇಷನ್ನು ಯಾವುದೂ ಈತನಿಗೆ ಹೊಸದೇನಲ್ಲ.

ಮುಮ್ಮಡಿ ಕೃಷ್ಣರಾಜರ ಕೃಪೆ

ಅಷ್ಟಕ್ಕೂ, ಈಗ ಈತ ಜೈಲು ಪಾಲಾಗಿರು
ಮೇಲ್ನಂಡ ತನ್ನ ಹಳೇ ಚಾಳಿಗಳ ಕಾರಣಕ್ಕಾಗಲಿ
ಸಕಲ ಕಲ್ಯಾಣಗುಣಗಳ ಮಹಿಮೆಯಿಂದಾಗಲಿ ಅಲ್ಲ,
ಮಠದ ಬೆಳ್ಳಿರಥವನ್ನು ಕದ್ದು ಮಾರಿಕೊಂಡ ಅಪರಾ
ತನ್ನ ಹೆತ್ತ ತಾಯಿಯ ಸಮೇತ ಜೈಲುಪಾಲಾಗಿ
ವ್ಯಾಸರಾಜ ಮಠದ ಮಾಧ್ವ ಜಗದ್ಗುರು
ಮನೋಹರತೀರ್ಥ!

ಮಠಕ್ಕೆ ತಾನೇ ಪರಮಾಧಿಕಾರಿಯಾದ್ದರಿಂದ
ಯಾರಿಗೆ ಬೇಕಾದರೂ ಮಾರುವ, ದಾನ ಮಾ
ಗುತ್ತಿಗೆಗೆ ಹಾಕುವ ಎಲ್ಲಾ ಅಧಿಕಾರಗಳೂ ಸ್ವಾಮಿಗ
ಈ ರೀತಿ ಕಳ್ಳತನದ ಆರೋಪ ಹೊತ್ತು ತಾನು
ಸಮೇತ ಜೈಲು ಪಾಲಾಗಿದ್ದಲ್ಲದೆ ತನ್ನ-ಖಾಸಾ ತಂ
ಕಳ್ಳತನದ ಆರೋಪ ಹೊತ್ತು ನಿರೀಕ್ಷಣಾ ಜಾ






ಅಪ್ಪ ರಥ ಕದ್ದ, ಮಗ ತಾಯಿ ಜೊತೆ ಜೈಲುಬಿದ್ದ!


2013ರ ವರೆಗೂ ನಿಗೂಢವಾಗಿದ್ದ ಬೆಳ್ಳಿರಥ ಕದ್ದ ಪ್ರಸಂಗವನ್ನು ಮೊದಮೊದಲು ಸರ್ಕಾರವಾಗಲಿ ಪೊಲೀಸರಾಗಲಿ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಅದು 1935ರಲ್ಲಿ ಪೀಠಾಧಿಪತಿಯಾಗಿದ್ದ ವಿದ್ಯಾವಾರಿಜ ತೀರ್ಥರು ಉತ್ಸವಮೂರ್ತಿಯ ಮೆರವಣಿಗೆಗೆಂದು ಮಾಡಿಸಿದ್ದ ರಥ. 1960ರಲ್ಲಿ ಪೀಠಾಧಿಕಾರಿಯಾಗಿದ್ದ ವಿದ್ಯಾಪ್ರಸನ್ನ ತೀರ್ಥರು ಇದಕ್ಕೆ ಬೆಳ್ಳಿ ಹೊದಿಕೆ ಮಾಡಿಸಿದ್ದರು. ಆರಡಿ ಎತ್ತರದ ರಥಕ್ಕೆ 25 ರಿಂದ 30 ಕೆಜಿಯಷ್ಟು ಬೆಳ್ಳಿ ಹತ್ತು ಕೆಜಿಯಷ್ಟು ತಾಮ್ರ ಬಳಸಿ ನಿರ್ಮಿಸಿದ್ದ ರಥಕ್ಕೆ ಈಗಿನ ದರದ ಪ್ರಕಾರ ಕಮ್ಮಿಯೆಂದರೂ 10 ಲಕ್ಷ ರೂ.ಗಳು!

2012ರ ಡಿಸೆಂಬರ್ ಹೊತ್ತಿಗೆ ಸೋಸಲೆ ಮಠದಲ್ಲಿದ್ದ ರಥವನ್ನು ತಂದೆ ಉದ್ವಾಚಾರ್ ತನ್ನ ಕಾರಿಗೆ ಹಾಕಿಕೊಂಡು ಮೈಸೂರಿಗೆ ತಂದಿದ್ದ. ಕೃಷ್ಣಮೂರ್ತಿಪುರಂನ ಶಾಖಾಮಠದ ಆವರಣದಲ್ಲಿದ್ದ ತನ್ನ ಮನೆಯಲ್ಲಿ ಅದನ್ನು ಬಚ್ಚಿಟ್ಟು ಚಿನಿವಾರನೊಬ್ಬನನ್ನು ಕರೆಸಿದ್ದೇ ಬೆಳ್ಳಿಯ ಸಿಂಗಾರವನ್ನೆಲ್ಲ ಕಿತ್ತು ಅದನ್ನು ಗಟ್ಟಿಗಳನ್ನಾಗಿ ಕರಗಿಸಿದ್ದ. ಮರದ ಪಟ್ಟಿಗಳಿಂದ ನಿರ್ಮಿಸಿದ್ದ ರಥದ ಮುಂಗಟ್ಟುಗಳನ್ನೆಲ್ಲ ನಿಷ್ಪ್ರಯೋಜಕ ಎಂಬಂತೆ ತನ್ನ ಮನೆಯಲ್ಲೇ ಸುಟ್ಟು ಹಾಕಿದ್ದ. ತಾಮ್ರವನ್ನೂ ಕರಗಿಸಿ ಪಟ್ಟಿ ಮಾಡಿಟ್ಟುಕೊಂಡಿದ್ದ. ಕರಗಿಸಿದ ಬೆಳ್ಳಿಗಟ್ಟಿಗಳನ್ನು ಮೈಸೂರಿನ ಚಿನ್ನಾಭರಣ ವ್ಯಾಪಾರಿಯೊಬ್ಬನಿಗೆ ಮಾರಿ ಮಿಕ್ಕವನ್ನು ತನ್ನ ಮನೆಯಲ್ಲೇ ಜೋಡಿಸಿದ್ದ.

ಇದು ಮೊದಲು ಗೊತ್ತಾಗಿದ್ದು ಮಠದ ಭಕ್ತ ಬೆಂಗಳೂರಿನ ನರೇಂದ್ರರಿಗೆ. ಆ ಕಾಲದಿಂದಲೂ ಅನ್ಯಾಯ ಅಕ್ರಮದ ವಿರುದ್ಧ ಹೋರಾಡಿಕೊಂಡೇ ಬಂದಿದ್ದ ನರೇಂದ್ರ 2013ರ ಜೂನ್‌ನಲ್ಲಿ ಬೆಳ್ಳಿರಥ ಕಳುವಾಗಿದೆಯೆಂದು ಟಿ. ನರಸೀಪುರ ಪೊಲೀಸರಿಗೆ ದೂರು ಕೊಟ್ಟರು. ಮೊದಮೊದಲು ಇದನ್ನು ತೀರ ಲಘುವಾಗಿ ಪರಿಗಣಿಸಿದ ಟಿ. ನರಸೀಪುರ ಪೊಲೀಸರು ವರ್ಷವಾದರೂ ತನಿಖೆ ಮುಗಿಸಲೇ ಇಲ್ಲ. ಸಮಸ್ಯೆಯಿದ್ದದ್ದೇ ಸ್ವಾಮಿಯ ಬಂಧನದಲ್ಲಿ. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಮೈಸೂರು ಗ್ರಾಮೀಣ ಎಸ್ಪಿ ಅಭಿನವ್ ಖರೆ ನಂಜನಗೂಡು ಟೌನ್ ಪೊಲೀಸರಿಗೆ ವಿಚಾರಣೆಯ ಹೊಣೆ ವಹಿಸಿದ್ದು 2014ರಲ್ಲಿ. ನಂಜನಗೂಡು ವಿಭಾಗದ ಅಡಿಷನಲ್ ಎಸ್ಪಿ ದಿವ್ಯಾ ಸಾರಾ ಥಾಮಸ್ ಇಡೀ ತನಿಖೆಯನ್ನು ಸವಾಲಾಗಿ ಸ್ವೀಕರಿಸಿ ಸೋಸಲೆ ಮಠದ ಒಬ್ಬೊಬ್ಬರೇ ಕೆಲಸಗಾರರನ್ನು ಹೊತ್ತೊಯ್ದು ಬಾಯಿ ಬಿಡಿಸುತ್ತಿದ್ದಂತೆ ಸ್ವಾಮೀಜಿಯ ತಂದೆ ಉದ್ವಾಚಾರ್ ಏಕಾಏಕಿ ಕೋರ್ಟ್ ಮೊರೆ ಹೊಕ್ಕ ನಿರೀಕ್ಷಣಾ ಜಾಮೀನು ಪಡೆದುಬಿಟ್ಟ.

ಅಲ್ಲಿಗೆ ಉದ್ವಾಚಾರಿಯೇ ಅಸಲಿ ಅಪರಾಧಿಯೆಂಬ ಬಗ್ಗೆ ಯಾರಲ್ಲೂ ಅನುಮಾನಗಳಿರಲಿಲ್ಲ. ಇನ್ನೆಲ್ಲಿ ಸ್ವಾಮಿ ವಿದ್ಯಾ ಮನೋಹರ ತೀರ್ಥನೇ ನಿರೀಕ್ಷಣಾ ಜಾಮೀನು ಪಡೆಯುತ್ತಾನೋ ಎಂದು ಲೆಕ್ಕ ಹಾಕಿದ ನಂಜನಗೂಡು ಪೊಲೀಸ್ ಇನ್ಸ್‌ಪೆಕ್ಟರ್ ಕಶ್ಯಪ್ ಅಕ್ಟೋಬರ್ 24ರ ಬೆಳ್ಳಂಬೆಳಗ್ಗೆಯೇ ಉದ್ವಾಚಾರ್‌ನ ಮನೆಗೆ ನುಗ್ಗಿದ್ದೇ ವಿದ್ಯಾಮನೋಹರ ತೀರ್ಥ ಆತನ ತಾಯಿ ಶ್ರೀಮತಿ ಮತ್ತು ಚೇಲಾ ಪ್ರಮೋದನನ್ನು ಬಂಧಿಸಿ ಲಾಕಪ್ಪಿಗೆ ಹಾಕಿದ್ದರು. ಎರಡು ದಿನಗಳ ಕಾಲ ಲಾಕಪ್ಪು, ಆ ನಂತರ ನಂಜನಗೂಡು ಸಬ್‌ಜೈಲು. ತಾಯಿಗೆ ಮೈಸೂರು ಜೈಲಿನ ಯೋಗ. ಪೊಲೀಸರು ಬಂಧಿಸಿ ವ್ಯಾನಿಗೆ ಎತ್ತಾಕಿಕೊಂಡು ಜೈಲಿಗೆ ಸಾಗಿಸುತ್ತಿರುವ ದೃಶ್ಯದ ಫೋಟೋಗಳು ಎಲ್ಲಾ ಪತ್ರಿಕೆಗಳಲ್ಲೂ ರಾರಾಜಿಸುತ್ತಿದ್ದರೆ ಖದೀಮ ಸ್ವಾಮೀಜಿ ಪಕ್ಕಾ ಕೇಡಿಯಂತೆ ಕಣ್‌ಕಣ್ ಬಿಡುತ್ತಿದ್ದ. ●





ಅಲ್ಲಿಗೆ ತನ್ನ ಮೊಮ್ಮಗನನ್ನೇ ತನ್ನ ಉತ್ತರಾಧಿಕಾರಿ ಮಾಡಿದ ವಿದ್ಯಾವಾಚಸ್ಪತಿಗಳ ವಿರುದ್ಧ ಮಾಧ್ವರಲ್ಲೇ ಆಕ್ರೋಶ ಭುಗಿಲೆದ್ದಿತ್ತು. ವ್ಯಾಪಕ ಪ್ರತಿಭಟನೆಗಳಾದವು. ಆದ್ಯಾವುದನ್ನೂ ಲೆಕ್ಕಿಸದೇ ತನ್ನ ಮೊಮ್ಮಗನನ್ನೇ ಉತ್ತರಾಧಿಕಾರಿಯನ್ನಾಗಿ ಮಾಡಿ ಕೌಟುಂಬಿಕ ಸಾಮ್ರಾಜ್ಯವೊಂದಕ್ಕೆ ಅಡಿಪಾಯವಿಟ್ಟ ತಾತ ವಿದ್ಯಾವಾಚಸ್ಪತಿ ಅಲಿಯಾಸ್ ಜಯತೀರ್ಥಾಚಾರ್ 2007ರಲ್ಲಿ ತನ್ನ ಇಹಲೋಕ ಯಾತ್ರೆ ಮುಗಿಸಿ ನಿಧನರಾದಾಗ ಪಟ್ಟಕ್ಕೇರಿದವನೇ ಶರತ್ ಯಾನೆ ವಿದ್ಯಾಮನೋಹರ ತೀರ್ಥ. ಆಗಿನ್ನೂ ಈತನಿಗೆ 23ರ ಹರೆಯ. ಕುದಿಯುವ ಪ್ರಾಯ. ಮೈತುಂಬಾ ಶೋಕಿ. ಸನ್ಯಾಸ, ಬ್ರಹ್ಮಚರ್ಯ, ನೇಮ ಹೋಮಾದಿಗಳ ಗಂಧಗಾಳಿ ಗೊತ್ತಿಲ್ಲದ ಅಸಲು ಧರ್ಮಕರ್ಮಗಳ ಹಂಗೇ ಇಲ್ಲದ ಪಡ್ಡೆಹುಡುಗ ಶರತ್ ತನ್ನ ತಂದೆ ಉದ್ವಾಚಾರಿಯನ್ನೇ ಮಠದ ಗದ್ದುಗೆಯ ಹಿಂದಿಟ್ಟುಕೊಂಡ. ಅಂದರೆ ಮಗನ ಕಾರ್ಯಭಾರ ತಂದೆಯೇ ಸೂತ್ರಧಾರ.

ಕೊಳ್ಳೇ ಹೋದ ಮೇಲೆ

ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಎಂಬಂತೆ ಅಪ್ಪ ಮಗನ ಅಂಥಾ ದರ್ಬಾರ್ ಯಾವ ಪರಿ ಹಾವಳಿಯಾಯಿತೆಂದರೆ ಮಠದ ಒಂದೊಂದೇ ಸೊತ್ತನ್ನು ಸದ್ದಿಲ್ಲದೆ ಸಿಕ್ಕೋರಿಗೆ ಮಾರಲಾರಂಭಿಸಿದ್ದರು. ತಮಿಳುನಾಡಿನ ಶಾಖಾಮಠಕ್ಕೆ ಸೇರಿದ್ದ ಚಂದ್ರಿಕಾ ಮಂಟಪ ಮತ್ತು ಉತ್ತರ ಬೀದಿಯ 18 ಚದುರ ಅಡಿಗಳ ಸೊತ್ತನ್ನು ಡಿಎಂಕೆ ನಾಯಕರಾದ ರಾಜ ಪೆರುಮಾಳ್ ಮತ್ತು ಜಿಕೆವಿ ರಾಜು ಎಂಬುವವರಿಗೆ 70 ಲಕ್ಷ ರೂ. ಗುತ್ತಿಗೆಗೆ ಕೊಟ್ಟರು. ತಿರುಪತಿಯ ಗೋವಿಂದ ರಾಜ ಪಟ್ಟಣದ ಶಾಖಾಮಠದ ಸೊತ್ತನ್ನು ಮೊದಲು 15 ಲಕ್ಷಕ್ಕೇ ಯಾರಿಗೋ ಭೋಗ್ಯಕ್ಕೆ ಕೊಟ್ಟು ನಂತರ ಅದೇ ಸೊತ್ತನ್ನು ಇನ್ನೂ ಇಬ್ಬರಿಂದ ರೊಕ್ಕ ಪೀಕಿ ಲೀಸ್ ಅಗ್ರಿಮೆಂಟ್ ಮಾಡಿಕೊಟ್ಟಿದ್ದರು. ಅಪ್ಪ ಮಗ ಮಾಡಿದ ಅನಾಹುತಕ್ಕೆ ಗುತ್ತಿಗೆದಾರರು ಹೊಡೆದಾಡಿಕೊಂಡರು. ತಿರುಮಲದ ಮಠದ ಕಟ್ಟಡವನ್ನು ಭಕ್ತಾದಿಗಳಿಗೆ ಮೀಸಲಿಡುವುದನ್ನು ಬಿಟ್ಟು ಮಾರ್ವಾಡಿಗಳಿಬ್ಬರಿಗೆ 35 ಲಕ್ಷಕ್ಕೆ ಲೀಸ್‌ಗೆ ಕೊಟ್ಟ ಫಲವಾಗಿ ಮಠದ ಸೊತ್ತಾಗಿದ್ದ ಅದು ಲಾಡ್ಜ್ ಆಗಿ ಬದಲಾಯಿತು.

ಮೈಸೂರು ಜಯಲಕ್ಷ್ಮಿಪುರಂನಲ್ಲಿದ್ದ ಮಠದ ಕಲ್ಯಾಣ ಮಂಟಪವನ್ನು 70 ಲಕ್ಷಕ್ಕೆ ಲೀಸ್‌ಗೆ ಹಾಕಲಾಯಿತಾದರೂ ಆ ದುಡ್ಡು ಸೇರಿದ್ದು ತಂದೆ ಉದ್ವಾಚಾರಿಯ ಖಾಸಗಿ ಬ್ಯಾಂಕ್ ಖಾತೆಯ ಲೆಕ್ಕಕ್ಕೆ. ಇದು ಅಪ್ಪಮಗನ ಹಿಡಿತಕ್ಕೊಳಪಟ್ಟ ಮಠದ ಸೊತ್ತುಗಳೆಲ್ಲ ಒಂದೊಂದಾಗಿ ಕಂಡೋರ ಪಾಲಾದ ರೀತಿಗೆ ಕೆಲ ಉದಾಹರಣೆಗಳಷ್ಟೆ. ಇನ್ನು ಹೀಗೇ ಬಿಟ್ಟರೆ ಅಪ್ಪಮಗ ಸೇರಿ ಇಡೀ ಮಠವನ್ನೇ ಗುಡಿಸಿ ಗುಂಡಾಂತರ ಮಾಡಿಯಾರೆಂಬ ಭೀತಿಗೆ ಬಿದ್ದ ಭಕ್ತಾದಿಗಳೆಲ್ಲ ಸರ್ಕಾರಕ್ಕೆ ಮನವಿಗಳ ಮೇಲೆ ಮನವಿಯಿತ್ತರು. ಈ ಪೈಕಿ ಸುಪ್ರೀಂಕೋರ್ಟ್ ವಕೀಲ ಬಿಆರ್‌ಜಿಕೆ ಆಚಾರ್ ಹೈಕೋರ್ಟ್ ಮೆಟ್ಟಿಲೇರಿದ ಫಲವಾಗಿ ಇಡೀ ಮಠದ ಅನಾಚಾರದ ಕುರಿತಂತೆ ತನಿಖೆ ಮಾಡುವಂತೆ ಹೈಕೋರ್ಟು ಆದೇಶ ನೀಡಿತು.



ತಿರುಪತಿಯ ಗೋವಿಂದ ರಾಜ ಪಟ್ಟಣದ ಶಾಖಾಮಠ

ಈ ಪ್ರಕಾರವೇ ಐವರ ತನಿಖಾ ಸಮಿತಿಯೊಂದನ್ನು ರಚಿಸಿದ ಸರ್ಕಾರಕ್ಕೆ ಎಂಥಾ ಅಚ್ಚರಿ ಕಾದಿತ್ತೆಂದರೆ ಅಪ್ಪಮಗ ಸೇರಿಕೊಂಡು ಮಠದ ಬಹುತೇಕ ಸೊತ್ತುಗಳಿಗೆಲ್ಲ ಗತಿ ಕಾಣಿಸಿಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಯಡ್ಡಿ ನೇತೃತ್ವದ ಬಿಜೆಪಿ ಸರ್ಕಾರ 2012ರ ಮೇ 26ರಂದು ಐಎಎಸ್ ಅಧಿಕಾರಿ ಜೈರಾಜ್‌ರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಇಡೀ ಮಠದ ಸೊತ್ತನ್ನೇ ಸರ್ಕಾರದ ನಿಯಂತ್ರಣಕ್ಕೊಳಪಡಿಸಿತು. ಸ್ವಾಮಿ ವೇಷಧಾರಿಯಾಗಿದ್ದ ವಿದ್ಯಾಮನೋಹರ ತೀರ್ಥ ಏನಿದ್ದರೂ ಪೂಜೆ ಪುನಸ್ಕಾರಕ್ಕಷ್ಟೇ ಸೀಮಿತ. ಮಿಕ್ಕಂತೆ ಇಡೀ ಮಠದ ಆಡಳಿತವೆಲ್ಲ ಆಡಳಿತಾಧಿಕಾರಿಯದ್ದೆ. ಎರಡೋ ಮೂರೋ ಸಾವಿರ ಸಂಬಳ ಪಡೆಯುತ್ತಿದ್ದ ಶಾಖಾ ಮಠದ ಕರ್ಮಚಾರಿಗಳಿಗೆಲ್ಲ ಎಂಟೋ ಹತ್ತೋ ಸಾವಿರ ಸಂಬಳ ಬರುವಂತಾಯ್ತು.

ಆಡಳಿತಾಧಿಕಾರಿಯ ನೇಮಕಕ್ಕೂ ಮುನ್ನ ಮಠದ ಸೊತ್ತನ್ನೆಲ್ಲ ಒಂದೊಂದಾಗಿ ಗುತ್ತಿಗೆಗೋ ಪರಭಾರೆಗೋ ಹಾಕಿ ಕೋಟಿ ಲೆಕ್ಕದಲ್ಲಿ ಕಮಾಯಿಸುತ್ತಿದ್ದ ಅಪ್ಪಮಗ ಈಗ ಅಕ್ಷರಶಃ ಹಡಾಲೆದ್ದು ಹೋದರು. ಮೊದಲು ಚಿನ್ನದ ತಟ್ಟೆ ಬೆಳ್ಳಿ ಪೂಜಾ ಸಾಮಗ್ರಿಗಳನ್ನೆಲ್ಲ ಸಿಕ್ಕ ಸಿಕ್ಕ ರೇಟಿಗೆ ಮಾರಲಾರಂಭಿಸಿದರು. ಯಾರ್‍ಯಾರಿಂದಲೋ ಸಾಲ ಪಡೆದು ಅವರಿಗೆ ಮಠದ ಹೆಸರಲ್ಲಿ ಚೆಕ್ಕು ಕೊಟ್ಟಿದ್ದು ಒಂದರ ಮೇಲೊಂದಾಗಿ ಬೌನ್ಸ್ ಹೊಡೆದವು. ಈ ಬಗ್ಗೆಯೂ ಪೊಲೀಸ್ ಕೇಸುಗಳಾದವು. ಮಠದ ಸೊತ್ತಿನ ಹೆಸರಲ್ಲಿ ಕೋಟಿ ಕೋಟಿ ಬಾಚುತ್ತಿದ್ದ ಅಪ್ಪಮಗ ಇಂಥಾ ಹತಾಶ ಸ್ಥಿತಿಯಲ್ಲೇ ಖತರ್‌ನಾಕ್ ಕೆಲಸವೊಂದಕ್ಕೆ ಕೈಯಿಟ್ಟರು.


ಅದು ಟಿ. ನರಸೀಪುರದ ಕಾವೇರಿ ಸಂಗಮದ ಸೋಸಲೆ ಶಾಖಾ ಮಠದಲ್ಲಿದ್ದ ಹಳೆಯ ಬೆಳ್ಳಿರಥಕ್ಕೇ ಗತಿ ಕಾಣಿಸುವುದು!

ಬೆಂಗಳೂರು ಮತ್ತು ಮೈಸೂರು ನಗರದ ಶಾಖಾ ಮಠಗಳ ಮೇಲೇ ಕಣ್ಣಿಟ್ಟಿದ್ದ ಮಠದ ಭಕ್ತಾದಿಗಳಿಗೆ ಸೋಸಲೆ ಮಠದಲ್ಲಿದ್ದ ಬೆಳ್ಳಿರಥದ ಬಗ್ಗೆ ಹೆಚ್ಚು ಗಮನವಿರಲಿಲ್ಲ. ಜೈರಾಜ್ ಆಡಳಿತಾಧಿಕಾರಿಯಾಗುತ್ತಿದ್ದಂತೆ ಸದ್ದಿಲ್ಲದೇ ಅದನ್ನು ಮೈಸೂರಿಗೆ ಸಾಗಿಸಿದ್ದ ತಂದೆ ಉದ್ವಾಚಾರ್ ತನ್ನ ಮನೆಯಲ್ಲೇ ರಥದ ಬೆಳ್ಳಿ ಅಲಂಕಾರವನ್ನೆಲ್ಲ ಕಿತ್ತು ಬೆಳ್ಳಿಗಟ್ಟಿಗಳನ್ನಾಗಿ ಕರಗಿಸಿದ್ದ. ಕೆಲ ಬೆಳ್ಳಿಗಟ್ಟಿಗಳನ್ನು ಮಾರಿಯೂ ಇದ್ದ. ಇದಕ್ಕೆ ಮಗನೇ ಪಾಲುದಾರನಾದರೆ ತಾಯಿಯೂ ಸಹ ಅಪರಾಧಿಯಾಗಿ ಕೈಜೋಡಿಸಿದ್ದಳು. ಉಪ್ಪು ತಿಂದ ಮೇಲೆ ನೀರು ಕುಡಿಯಲೇ ಬೇಕು (ಬಾಕ್ಸ್ ನೋಡಿ). ತಾನೇ ಪೀಠಾಧಿಪತಿಯಾಗಿ ತನ್ನದೇ ಮಠದ ಬೆಳ್ಳಿರಥವನ್ನು ಕದ್ದು ಜೈಲು ಪಾಲಾದ ವಿದ್ಯಾಮನೋಹರ ತೀರ್ಥನದ್ದು ಯಾವ ಸೀಮೆಯ ವಿದ್ಯೆಯೋ, ಯಾವ ಕರ್ಮದ ಮನೋಹರವೋ ಎಂಥ ಪಾಪದ ತೀರ್ಥವೋ ದೇವರಷ್ಟೇ ಬಲ್ಲ.

ಮಠದ ಭಕ್ತಾದಿಗಳನ್ನು ಶೋಷಿಸಿದ ಸ್ವಾಮಿಗಳುಂಟು. ನಂಬಿದ ಭಕ್ತೆಯರನ್ನು ಪೀಡಿಸಿದ ಪೀಠಾಧಿಪತಿಗಳುಂಟು. ವಾಮ ಕಾಮಕ್ಕೆ ಬಿದ್ದು ಒದೆ ತಿಂದ ಖಾವಿಗಳುಂಟು. ಆದರೆ ತನ್ನದೇ ಮಠದ ಬೆಳ್ಳಿರಥ ಕದ್ದು ಜೈಲು ಪಾಲಾದ ಕೀರ್ತಿಗೆ ಪಾತ್ರನಾದ ಏಕೈಕ ಜಗದ್ಗುರು ವಿದ್ಯಾಮನೋಹರ ತೀರ್ಥ ಮಾತ್ರ!

ಮಾರೂರೂ ಬಟ್ಟೆಯನಿಗೆ ಖಾವಿಯಾದರೇನು ದೇವರಾದರೇನು ದೇವಸ್ಥಾನವಾದರೇನು? ಸ್ವಾಮಿಯಾದರೂ ಅಷ್ಟೇ ಕಾಮಿಯಾದರೂ ಅಷ್ಟೇ....!

■ ರಾ. ಸೋಮನಾಥ್



...ತೆ ತಲೆ ಮರೆಸಿಕೊಳ್ಳಬೇಕಾದ ಕರ್ಮಕ್ಕೆ ...ಗಿರಲಿಲ್ಲ.

...ಮವಾಗಿದ್ದೇ ನಿಷ್ಠೂರಿ ಐಎಎಸ್ ಅಧಿಕಾರಿ ...ರ್ಕಾರ ಸೋಸಲೆ ಮಠದ ಆಡಳಿತಾಧಿಕಾರಿ ...ದ ನಂತರ. ಸೋಸಲೆ ವ್ಯಾಸರಾಜ ಮಠದ ...ರುವ ನೂರಾರು ವರ್ಷಗಳ ಇತಿಹಾಸ, ...ಸ್ಥಾಪಕ ಮಧ್ವಾಚಾರ್ಯರು ಹುಟ್ಟುಹಾಕಿದ ...ಗಳ ಪೈಕಿ ಒಂದಾದ ವ್ಯಾಸರಾಜ ಮಠಕ್ಕೆ ...ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ...ರಾಜಾಶ್ರಯ ಕಲ್ಪಿಸಿದ್ದು, ತಮಿಳುನಾಡಿನ ...ನಲ್ಲಿದ್ದ ವ್ಯಾಸರಾಜ ಮಠದ ಆವತ್ತಿನ ಸ್ವಾಮಿ ...ತೀರ್ಥರನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ...ತಂದು ರಾಜಗುರುಗಳ ಸ್ಥಾನಮಾನ ನೀಡಿದ್ದು, ...ಅಗಣಿತ ಸಾಮ್ರಾಜ್ಯವಾಗಿ ವಿಸ್ತರಿಸಿ ತನ್ನ ...ಭಾರಕ್ಕೆ ತಾನೇ ಜೋತು ಬಿದ್ದು ವಿನಾಶದ ...ದ್ದು; ಇತ್ಯಾದಿಗಳೆಲ್ಲದರ ಸ್ಪಷ್ಟ ಕುರುಹಾಗಿ ...ದ್ಯಾಮನೋಹರ ತೀರ್ಥ.

... ಮುಮ್ಮಡಿ ಕೃಷ್ಣರಾಜ ಒಡೆಯರ ಆಸರೆಯ ...ರ್ನಾಟಕಕ್ಕೆ ವಲಸೆ ಬಂದ ವಿದ್ಯಾವಲ್ಲಭರಿಗೆ ...ಲ್ಲಿ ಟಿ. ನರಸಿಪುರದ ತ್ರಿವೇಣಿ ಸಂಗಮದ ...ಮವನ್ನು ಉಂಬಳಿಯಾಗಿ ನೀಡಿದ್ದರಿಂದಾಗಿ ...ದೇ ಸೋಸಲೆ ವ್ಯಾಸರಾಜ ಮಠವಾಯಿತು. ...ಷಾವಾರು ಪ್ರಾಂತಗಳಾಗಲಿ, ಈಗಿನಂತೆ ...ಇಲ್ಲದ್ದರಿಂದ ತಮಿಳುನಾಡು, ಆಂಧ್ರ ಮತ್ತು ...ಲ್ಲಿ ವ್ಯಾಸರಾಜ ಮಠದ ಸರಿಸುಮಾರು ...ಶಾಖೆಗಳು ತಲೆ ಎತ್ತಿದ್ದವು. ಅದರಲ್ಲೂ ... ನಗರದುದ್ದಕ್ಕೂ, ಚಿಕ್ಕಪೇಟೆ, ವಿ.ವಿ.ಪುರಂ, ... ಮಹಾಲಕ್ಷ್ಮಿ ಬಡಾವಣೆ ಮತ್ತು ಸುಬ್ರಹ್ಮಣ್ಯ ...ತೆ ಐದು ಶಾಖೆಗಳಾದವು.


...ಮ್ಮಗನೇ ಉತ್ತರಾಧಿಕಾರಿ!

...ಲ್ಲಾ ಶಾಖೆಗಳ ಒಟ್ಟು ಸೊತ್ತು, ಅವುಗಳ ...ಗಳು, ಚಿನ್ನಾಭರಣ, ಶಾಖಾಮಠಗಳ ...ಟ್ಟು ಅಂಗಡಿ, ಕಲ್ಯಾಣಮಂಟಪಗಳು, ಅವುಗಳ ...ಕೆ ಹುಂಡಿಗಳ ಉತ್ಪತ್ತಿ ಎಲ್ಲವೂ ಸೇರಿತೆಂದರೆ ...ರು ಕೋಟಿಯ ಸಾಮ್ರಾಜ್ಯ. ಮಾಧ್ವ ಪರಂಪರೆ ...ವ್ರಾಜಕ ಪದ್ಧತಿಯಂತೆ ನೀತಿ ನೇಮವಾಗೇ ...ದ ವ್ಯಾಸರಾಜ ಮಠಕ್ಕೆ 1997ರಲ್ಲಿ ...ಯಾದ ವಿದ್ಯಾವಾಚಸ್ಪತಿ ಸ್ವಾಮಿಯೇ ಈಗ ...ವ ವಿದ್ಯಾಮನೋಹರ ತೀರ್ಥನ ಖಾಸಾ ತಾತ!

...ಪ್ಪತ್ತನೇ ವಯಸ್ಸಿಗೆ ವ್ಯಾಸರಾಜ ಮಠದ ...ಯಾದ ವಿದ್ಯಾವಾಚಸ್ಪತಿ ಸ್ವಾಮಿಗೆ ಅದು ...ಕರ್ಮದಂತೆ ಒದಗಿಬಂದ ಅದೃಷ್ಟವಾಗಿತ್ತು. ...ಗಲೇ ಹತ್ತು ಮಂದಿ ಮಕ್ಕಳನ್ನು ಹೆತ್ತು ...ತುದುವೆ ಮುಗಿಸಿ ಮೊಮ್ಮಕ್ಕಳನ್ನು ...ಡಿದ್ದ ಜಯತೀರ್ಥಾಚಾರ್ ಉರ್ಫ್ ... ಸ್ವಾಮಿಗೆ ಅದೇನು ವಿದ್ಯೆಯೋ ಯಾವ ...ಸ್ಪತಿಯೋ ಗೊತ್ತಿಲ್ಲ, ಪೀಠಾಧಿಪತಿಯಾಗಿದ್ದೇ ... ಮುಕ್ತಿಗೆ ಬದಲಾಗಿ ತನ್ನ ಸಾಂಸಾರಿಕ ... ಯುಕ್ತಿಯಾದವು. ಶಾಖಾಮಠಗಳಿಗೆಲ್ಲ ..., ಸಂಬಂಧಿಗಳನ್ನೇ ಮ್ಯಾನೇಜರ್‌ಗಳಾಗಿ ... ಇಡೀ ಮಠದ ಸೊತ್ತೆಲ್ಲ ತನ್ನ ಕೌಟುಂಬಿಕ ...ಸಾರೀಕರಣಗೊಳಿಸಿಬಿಟ್ಟರು. ತನ್ನ ಮಗ ... ಇಡೀ ಸಂಸ್ಥಾನದ ಆಡಳಿತಾಧಿಕಾರಿ ... ಹೊರಗಿನ ಯಾರೊಬ್ಬರಿಗೂ ಮಠ ...ದಂಬ ದುರಾಶೆ ವಿದ್ಯಾವಾಚಸ್ಪತಿಗಳದ್ದು.

... ಸಂತಾನಮೋಹದ ಪರಮಾವಧಿಯೆಂಬಂತೆ ... ಘಟನಾದ ಸಂಭವಿಸಿದ್ದು 2005ರಲ್ಲಿ. ಮಠದ ... ಸಂಪ್ರದಾಯದ ರೀತಿಯಂತೆ ಸ್ವಾಮಿಯಾದವನು ... ವ್ಯಾಮೋಹದಿಂದ ದೂರವಿರಬೇಕು. ... ಸಂಬಂಧಿಕರ್‍ಯಾರನ್ನೂ ಉತ್ತರಾಧಿಕಾರಿ ... ಧ್ಯೇಯಕ್ಕೆ ಕೊಳ್ಳಿಯಿಟ್ಟಂತೆ ತನ್ನ ಹಿರಿಮಗ ... ಮಗ ಶರತ್‌ನನ್ನೇ ... ...ಯೆಂದು ಘೋಷಿಸಿಬಿಟ್ಟರು!

ಒಳ್ಳೆಯ ದಿನಗಳೆಂದರೆ ದಲಿತ ಶಿಶುಗಳ ಹತ್ಯೆಯ ದಿನಗ



ಕಳೆದ ಕೆಲವು ದಿನಗಳಿಂದ ದೇಶದಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ಘಟನೆಗಳನ್ನು ಆಕಸ್ಮಿಕ ಎನ್ನಲು ಸಾಧ್ಯವಿಲ್ಲ. ದನದ ಮಾಂಸ ಇಟ್ಟುಕೊಂಡಿದ್ದಾರೆ ಎಂಬ ಗುಮಾನಿಯ ಕಾರಣಕ್ಕೆ ಉತ್ತರಪ್ರದೇಶದ ಗ್ರೇಟರ್ ನೋಯ್ಡಾ ಜಿಲ್ಲೆಯಲ್ಲಿನ ದಾದ್ರಿ ಗ್ರಾಮದ ಮಹಮ್ಮದ್ ಇಖ್ಲಾಕರ ಹತ್ಯೆ, ಅದೇ ಮಾದರಿಯಲ್ಲಿ ದನಗಳನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಹರ್ಯಾಣದಲ್ಲಿ ನೂಮಾನ್ ಎಂಬುವವರ ಹತ್ಯೆ, ಇನ್ನು ಬೀಫ್ ಪಾರ್ಟಿ ನಡೆಸುತ್ತಿದ್ದಾರೆ ಎಂಬ ಆರೋಪದ ಮೇಲೆ ಜಮ್ಮು-ಕಾಶ್ಮೀರದಲ್ಲಿ ಪಕ್ಷೇತರ ಶಾಸಕ ಶೇಖ್ ಅಬ್ದುಲ್ ರಷೀದ್ ಮೇಲೆ ಹಲ್ಲೆ, ದೇವಸ್ಥಾನ ಪ್ರವೇಶಿಸಿದನು ಎಂಬ ಕಾರಣಕ್ಕೆ ದಲಿತನೋರ್ವನ ಸಜೀವ ದಹನ, ಪಾಕಿಸ್ತಾನಿ ಮಾಜಿ ವಿದೇಶಾಂಗ ಸಚಿವ ಖುರ್ಷಿದ್ ಕಸೂರಿಯವರ ಪುಸ್ತಕ ಬಿಡುಗಡೆಯ ವೇಳೆ ಸುಧೀಂದ್ರ ಕುಲಕರ್ಣಿಯವರಿಗೆ ಮಸಿ ಬಳಿದ ಪ್ರಕರಣ, ಪಾಕ್ ಗಾಯಕ ಗುಲಾಂ ಅಲಿ ಸಂಗೀತ ಕಛೇರಿಗೆ ವಿರೋಧ, ಪಾಕ್ ಜತೆ ಕ್ರಿಕೆಟ್ ಸಂಬಂಧಕ್ಕೆ ಮಸಿ, ಬಹಿರಂಗಗೊಂಡ ಮೋಹನ್ ಭಾಗವತರ ಮೀಸಲಾತಿ ವಿರೋಧಿ ಧೋರಣೆ ಮತ್ತು ಈಗಿನ ಹರ್ಯಾಣದಲ್ಲಿನ ದಲಿತ ಶಿಶುಗಳ ಸಜೀವ ದಹನ ಪ್ರಕರಣ...

ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಹೇಳುತ್ತಾಹೋದರೆ ಮನಸ್ಸು ಎಲ್ಲಿ ಮುರುಟಿಹೋಗುತ್ತದೆಯೋ ಎಂಬ ಆತಂಕ ಅಥವಾ ಈ ಎಲ್ಲ ಘಟನೆಗಳ ಪಟ್ಟಿ ನೋಡಿ ಸಾವಿನ ವ್ಯಾಪಾರಿ ವಂಶಸ್ಥರು ತಮ್ಮ ಉಪಟಳ ಇನ್ನಷ್ಟು ಹೆಚ್ಚುಮಾಡುವರು ಎಂಬ ಭಯ. ಖಂಡಿತ, ದೇಶ ಇಂದು ಅಸಹಿಷ್ಣುತೆಯಿಂದ ಬೇಯುತ್ತಿದೆ. ಅಸಹನೆ ತಾಂಡವವಾಡುತ್ತಿದೆ. ಮುಖ್ಯವಾಗಿ ಅದರ ಬಲಿಪಶುಗಳು ಮುಸ್ಲಿಮರು ಮತ್ತು ದಲಿತರು ಎಂಬುದಿಲ್ಲಿ ಗಮನಿಸಬೇಕಾದ ಅಂಶ. ನಿಜ, 10 ವರ್ಷಗಳ ಹಿಂದೆ ಗುಜರಾತಿನ ಗೋಧ್ರಾದಲ್ಲಿ ಟ್ರೈನೊಂದು ಹೊತ್ತಿ ಉರಿದು ಕರಸೇವಕರು ಬಲಿಯಾದಾಗ, ಪ್ರತಿಹಿಂಸೆಯಾಗಿ ಸಹಸ್ರಾರು ಮುಸ್ಲಿಮರ ಹತ್ಯೆ ನಡೆದಾಗ, ನಕಲಿ ಎನ್‌ಕೌಂಟರ್ ಮೂಲಕ ಸೋಹ್ರಾಬುದ್ದೀನ್ ಶೇಖ್ ಹತ್ಯೆಯಾದಾಗ, ಅಲ್ಲಿಯ ಆಗಿನ ಗೃಹ ಸಚಿವ ಅಮಿತ್ ಶಾ (ಹಾಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ) ಜೈಲುಪಾಲಾದಾಗ ದೇಶದ ಜನತೆಗೆ ಅವ್ಯಾವುದೂ ಮುಖ್ಯ ಸುದ್ದಿ ಎನಿಸಲೇ ಇಲ್ಲ. ಕಾರಣ ಗುಜರಾತ್ ಲಾಗಾಯ್ತಿನಿಂದಲೂ ಅಸಹನೆ, ಅಸಮಾನತೆ ಪ್ರತಿಪಾದಿಸುವ ನಾಡು. 80ರ ದಶಕದಲ್ಲಿ ಅಲ್ಲಿ ನಡೆದಿರುವ ವಿಚ್ಛಿದ್ರಕಾರಿ ಮೀಸಲಾತಿ ವಿರೋಧಿ ಗಲಭೆ, ದಲಿತರ ನರಮೇಧ, ಅದರ ಗೋಧ್ರಾ ಸಂಬಂಧಿ ಘಟನೆಗಳನ್ನು ಸಹಜವೆಂಬಂತೆ ಪರಿಗಣಿಸಲು ಪ್ರೇರೇಪಣೆಯಾದದ್ದಂತೂ ನಿಜ. ಆದರೆ 'ಅದೇ ಮಾದರಿ' ದೆಹಲಿಯತ್ತ ಅದೂ 'ಒಳ್ಳೆಯ ದಿನಗಳ' ಭರವಸೆಯೊಂದಿಗೆ ಪಯಣ ಬೆಳೆಸಿತೆಂದರೆ ಬಹುಶಃ ಆ 'ಒಳ್ಳೆಯ ದಿನಗಳು' ಈ ಪರಿ ಕರಾಳರೂಪದಲ್ಲಿರುತ್ತದೆಂದು ಯಾರೂ ಊಹಿಸಿರಲಿಕ್ಕಿಲ್ಲ. ಆದರೆ ಅದು ನಡೆದುಹೋಗಿದೆ. ಕುರುಡು ಕೋಮುವಾದ ಕಾಲಿಗೆ ಬಿದ್ದವರ 'ಅಪರಾಧಿಗಳೆಂಬಂತೆ' ತುಳಿಯುತ್ತಾ ಸಾಗಿದೆ.

ಅಪರಾಧಿಗಳು, ಯಾಕೆಂದರೆ ಉತ್ತರಪ್ರದೇಶದ ದಾದ್ರಿಯ ಬಡ ಮುಸ್ಲಿಂ ಕುಟುಂಬಕ್ಕೆ ತಾನು ಫ್ರಿಜ್‌ನಲ್ಲಿ ಮಾಂಸ ಇಟ್ಟುಕೊಳ್ಳುವುದು 'ಅಪರಾಧ' ಎಂದು ಗೊತ್ತಿರಲಿಲ್ಲ! ಸಜೀವ ದಹನಕ್ಕೊಳಗಾದ ದಲಿತನಿಗೆ ತಾನು ದೇವಸ್ಥಾನ ಪ್ರವೇಶಿಸುವುದು 'ಅಪರಾಧ' ಎಂದು ಗೊತ್ತಿರಲಿಲ್ಲ! ಹಾಗೆಯೇ ಗಾಢ ನಿದ್ರೆಯಲ್ಲಿ ಮಲಗಿದ್ದಾಗ ಬೆಂಕಿ ಹಚ್ಚಿ ಸಾಯಿಸಲ್ಪಟ್ಟ ಹರ್ಯಾಣದ ಫರೀದಾಬಾದ್ ಜಿಲ್ಲೆಯ ಸೋನ್‌ಫೆಡ್ ಗ್ರಾಮದ ಹಸುಕಂದಗಳಾದ ವೈಭವ್ ಮತ್ತು ದಿವ್ಯ ಇಬ್ಬರಿಗೂ ತಾವು ಹುಟ್ಟಿದ್ದು ದಲಿತ ಕುಟುಂಬದಲ್ಲಿ ಮತ್ತು ಅದು 'ಅಪರಾಧ' ಎಂಬುವ್ಯಾವುದೂ ಗೊತ್ತಿರಲಿಕ್ಕಿಲ್ಲ. ಒಟ್ಟಾರೆ ಮೋದಿಯ ನಾಡಲ್ಲಿ ಯಾವುದು ಅಪರಾಧ, ಯಾವುದು ನಿರಪರಾಧ ಎಂಬುದಕ್ಕೆ ಹೊಸ ನೀತಿಸಂಹಿತೆಯನ್ನೇ ಹೊರಡಿಸಬೇಕಿದೆ.

ಅಲ್ಲೊಬ್ಬ ಹೇಳುತ್ತಾನೆ 'ದನ ತಿನ್ನುವ ಮುಸಲ್ಮಾನರು ಪಾಕಿಸ್ತಾನಕ್ಕೆ ಹೋಗಿ' ಎಂದು. ಹಾಗಿದ್ದರೆ ದನ ತಿನ್ನುವ ದಲಿತರೆಲ್ಲಿಗೆ ಹೋಗಬೇಕು? ಅಸಹ

ಎನ್ನುವುದು ಇದನ್ನೇ. ಅಂದಹಾಗೆ ಈ

ಬಿಜೆಪಿಯ ಅಧ್ಯಕ್ಷ ಅಮಿತ್ ಶಾ ಸಂಬ

ಹೊಣೆಗೆ ಕಟ್ಟಿದ್ದಾರೆ. ಆದರೆ ವಾಸ್ತವ? ಈ

ಹಿಂದಿರುವ 'ಸಾಮಾನ್ಯ' ಕೈಗಳು, ಮ

ಚಿಂತನೆಗಳು? ಎಲ್ಲವೂ ಒಂದೇ ಮೂಲ

ಕಲಬುರ್ಗಿಯವರ ಹತ್ಯೆಯನ್ನು ಇಲ್ಲಿ ಉ

ಪ್ರಾರಂಭದಲ್ಲಿ ಎಲ್ಲರೂ ಬಲಪಂಥೀಯ

ಬೊಟ್ಟುಮಾಡಿದಾಗ ಆಕ್ಷೇಪ ಎತ್ತಿದ ಹಿಂ

ಸಂಸ್ಥೆ' ಎಂದು ಸ್ಪಷ್ಟ ಸುದ್ದಿ ಹೊರಬಿ

ಸ್ತಬ್ಧರಾದರು. ಒಟ್ಟಾರೆ ಒಂದರನಂತ

ಮರುಕಳಿಸುತ್ತಲೇ ಇವೆ ಪ್ರಕರಣಗಳು

ರಾಷ್ಟ್ರಕ್ಕೆ 'ಮಸಿ ಬಳಿಯಲು'.

ಈ ನಡುವೆ ಮಾತುಮಾತಿಗೂ

ಹೇಳುವ ಪ್ರಧಾನಿ ನರೇಂದ್ರ ಮೋದಿಯ

ಅಸಹನೆಯ ಘಟನೆಗಳ ಬಗ್ಗೆ ಸೊಲ್ಲೆತ್ತುತ್ತ

ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು

ನಂತರ ಪ್ರಧಾನಿ 'ಹಿಂದೂ -ಮುಸ್ಲಿಂ

ಭಾಷಣ ಮಾಡಿದರು! ಇನ್ನು ಬಿಹಾರದ

ಹಿನ್ನಡೆಯಾಗುತ್ತದೆ ಎಂದಾಕ್ಷಣ ಮೀಸಲಾ

ಎನ್ನುತ್ತಾ ದೂರದ ಮುಂಬೈನಲ್ಲಿ ಅಂಬ

ಶಿಲಾನ್ಯಾಸ ನೆರವೇರಿಸಿದರು! ವಾಸ್ತವವೆಂದ

ಬದುಕಿಂದು ಅಸ್ತವ್ಯಸ್ತವಾಗಿದೆ. ದಿನಕ್ಕೊ

ಬೆಲೆ ಏರಿ ಜನ ಯಾತನೆ ಪಡುತ್ತಿದ್ದಾ

ಮೂಲವಾದ ದನದ ಮಾಂಸ ತಿನ್ನಲ

ಆಡಳಿತದ ಮಂದಿ, ಹೋಗಲಿ ಸಸ್ಯಾ

ಪ್ರೋಟೀನ್ ಪಡೆಯೋಣವೆಂದರೆ ಪ್ರೋ

ಬಹುಮುಖ್ಯ ಕಾಳು ತೊಗರಿಬೇಳೆಯ ಬ

ಹಾಗೆಯೇ ಕಪ್ಪುಹಣ ತಂದು ಮೋದಿ ಲ

ಕಾದಿದ್ದ ಮಂದಿ ಲಕ್ಷವಿರಲಿ ದಿನನಿತ್ಯ


ಸ್ಮಾರಕದ ಜೊತೆಗೆ ಸಮಗ್ರ ಬದುಕು ಮುಖ್ಯವಾಗಬೇ

ಕೇಂದ್ರ ಸರ್ಕಾರ ಇತ್ತೀಚೆಗೆ ಪಂಚತೀರ್ಥ ಯೋಜನೆಗೆ ಗುದ್ದಲಿ ಪೂಜೆ ಮಾಡಿತು. ತೀರ್ಥ, ಪ್ರಸಾದ, ಹೋಮ, ಹವನ ಮುಂತಾದವುಗಳಿಗೆ ವಿರುದ್ಧವಾಗಿ ನಡೆದ ಧೀರೋದಾತ್ತ ವ್ಯಕ್ತಿಯ ಹೆಸರಿನಲ್ಲಿ ಪಂಚತೀರ್ಥ ಯೋಜನೆ ರೂಪುಗೊಂಡಿದೆ. ಮಹಾರಾಷ್ಟ್ರದ ದಾದರ್‌ನಲ್ಲಿನ ಚೈತ್ರಭೂಮಿಯ ಕೂಗಳತೆ ದೂರದಲ್ಲಿ ಮಹಾಮಾನವ ತಾವಾದಿ ಅಂಬೇಡ್ಕರ್ ಅವರ ಸ್ಮಾರಕ ನಿರ್ಮಿಸಲು ಈ ಗುದ್ದಲಿ ಪೂಜೆ ಪ್ರಧಾನಮಂತ್ರಿ ಅವರಿಂದ ನೆರವೇರಿತು. ಇದರೊಂದಿಗೆ ಲಂಡನ್‌ನಲ್ಲಿ ಅಂಬೇಡ್ಕರ್ ವಾಸವಿದ್ದ ಮನೆ, ಮುಂಬೈನ ಮನೆ, ದೆಹಲಿಯ ಮನೆ, ದಾದರ್‌ನಲ್ಲಿನ ಚೈತ್ರಭೂಮಿಯ ಪುನರುಜ್ಜೀವನ... ಈ ಎಲ್ಲ ಅಂಶಗಳು ಸೇರಿ ಪಂಚತೀರ್ಥಗಳಾಗಿವೆ. ಕೆಲವು ದಲಿತರು, ದಲಿತಪರ ಹೋರಾಟಗಾರರು ಮತ್ತು ಐಡೆಂಟಿಟಿ ರಾಜಕಾರಣದಲ್ಲಿ ನಂಬಿಕೆ ಇರುವವರಿಗೆ ಇದು ಮಹತ್ವದ ವಿಷಯವಾಗಿ ಗೋಚರಿಸಿದೆ. ಮೀಸಲಾತಿಯ ವಿರುದ್ಧ ಮಾತನಾಡಿದರೆ ಸಾಕು ಗುರುಗುಟ್ಟುತ್ತಿದ್ದ ಕೆಲವು ಮಂದಿ ಕೇಂದ್ರ ಸರ್ಕಾರದ ಈ ನಡೆಯಿಂದ ಬಾಯಿ ಹೊಲಿದುಕೊಂಡು ಮೂಕ ಸಂತೋಷ ಅನುಭವಿಸುತ್ತಿದ್ದಾರೆ.

ಆದರೆ, ಪ್ರಶ್ನೆ ಇರುವುದು ಈ ಮೂಕ ಸಂತೋಷಕ್ಕೆ ಇದು ಸಕಾಲವೇ? 1990ರ ದಶಕದಲ್ಲಿ ಅಂಬೇಡ್ಕರ್ ಅವರಿಗೆ ಮರಣೋತ್ತರ ಭಾರತರತ್ನ ಘೋಷಿಸಲಾಯ್ತು, ಅಂದಿನ ಕೇಂದ್ರ ಸರ್ಕಾರ ಅಂಬೇಡ್ಕರ್ ಜನ್ಮ ದಿನವನ್ನು ರಜಾ ದಿನವನ್ನಾಗಿಯೂ ಘೋಷಿಸಿತು. ಇದನ್ನು ಸ್ವಾಭಿಮಾನದ ಸಂಕೇತಕ್ಕೆ ಹೋಲಿಸಿ ಯಾವ ಎಗ್ಗಿಲ್ಲದೆ ಪ್ರಚಾರವನ್ನೂ ಗಿಟ್ಟಿಸಲಾಯ್ತು, ಈ ಅಬ್ಬರದಲ್ಲಿ ಖಾಸಗೀಕರಣ, ಜಾಗತೀಕರಣ, ಉದಾರೀಕರಣಗಳನ್ನು ದೇಶದೊಳಕ್ಕೆ ತಣ್ಣಗೆ ನುಸುಳಿಬಿಡಲಾಯ್ತು, ಇದರ ವಿರುದ್ಧ ಪ್ರಬಲವಾಗಿ ವಿರೋಧಿಸಬೇಕಿದ್ದ ದಮನಿತ ಸಮುದಾಯಗಳು ಭಾರತರತ್ನದ ಅಮಲಿನಲ್ಲಿ ತೇಲಿಹೋದವು. ಅಂಬೇಡ್ಕರ್ ಅವರಿಗೆ ನೀಡಿದ ಭಾರತರತ್ನವನ್ನು ಸ್ವಾಗತಿಸುತ್ತಾ ಈ ತ್ರಿಕರಣಗಳ ಬಗ್ಗೆ ರಾಜಿರಹಿತ ಹೋರಾಟ ಕಟ್ಟಬೇಕಿತ್ತು, ಆದರೆ ಇದು ಆಗಲಿಲ್ಲ, ಇಂದೂ ಕೂಡ ಇತಿಹಾಸ ಮರುಕಳಿಸುತ್ತಿರುವಂತೆ ಮತ್ತದೇ ಜಾಡು ಮುಂದುವರಿಯುತ್ತಿರುವಂತೆ ಕಾಣುತ್ತದೆ.

'ನಮಗೆ ಪ್ರತಿಮೆ ಬೇಡ ಅನ್ನ ಬೇಕು', 'ಪಂಚತೀರ್ಥ ಬೇಡ ಕುಡಿಯಲು ಯೋಗ್ಯ ನೀರು ಬೇಕು', ಅಥವಾ 'ಪ್ರತಿಮೆ ಜೊತೆಗೆ ಅನ್ನಕೊಡಿ' ಎಂದು ಕೂಗುವ ಯಾವ ದನಿಗಳೂ ಇಲ್ಲಿ ಕಾಣದಾಗಿವೆ. ಕಾರಣ ಅಭಿಮಾನದ ನೆಲೆಯಲ್ಲಿ ಒಳಗಣ್ಣು ಕಳೆದುಕೊಂಡು ಕುರುಡಾಗಿವೆ. ದೇಶದಲ್ಲಿ ಕೇವಲ 2014ರ ಒಂದು ವರ್ಷದಲ್ಲೇ 36 ದಲಿತರು ಕೊಲೆಯಾಗಿದ್ದಾರೆ ಮತ್ತು 91 ದಲಿತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ನಡೆದಿದೆ. ಇದು ಆಳುವ ವರ್ಗದ ವೈಫಲ್ಯವನ್ನು ಚಾಚೂತಪ್ಪದೆ ಮನಗಾಣಿಸಿದೆ. ಇದಕ್ಕೆ ತೀವ್ರತರವಾದ ಪ್ರತಿಭಟನೆ ಎದುರಾಗಬೇಕಿತ್ತು, ಇಂತಹ ಪ್ರತಿಭಟನೆಯನ್ನು ಹತ್ತಿಕ್ಕಲು ಆಳುವ ಸರ್ಕಾರಗಳು ಶಂಕುಸ್ಥಾಪನೆಯಂತ ಮೂಗಿಗೆ ತುಪ್ಪ ಸವರುವ ಕೆಲಸವನ್ನು ಮೊದಲಿನಿಂದಲೂ ಮಾಡುತ್ತಾ ಬರುತ್ತಿವೆ. ಇಂದೂ ಕೂಡ ಅದನ್ನೇ ಮಾಡುತ್ತಿವೆ. ಇದಕ್ಕೆ ಕೇಂದ್ರ ಸರ್ಕಾರದ ಹಿಂದಿನ ನಡೆಯೂ ಸಾಕ್ಷಿ ಎನ್ನುವಂತೆ ಕಾಣುತ್ತಿದೆ.

ಯಾವ ಸರ್ಕಾರಗಳು ದಲಿತರ ಹಿತಾಸಕ್ತಿಯ ಹೆಸರಿನಲ್ಲಿ ಬಂದಿಲ್ಲ, ಅಧಿಕಾರಕ್ಕೆ ಬಂದ ಸರ್ಕಾರಗಳಿಗೆ ಕನಿಷ್ಠ ದಲಿತ ಪರ ಕಾಳಜಿಯಾದರೂ ಇರಬೇಕಿತ್ತು. ವರ್ಷವೊಂದರಲ್ಲೇ ದಲಿತರ ಮೇಲೆ 1950 ದೌರ್ಜನ್ಯಗಳು ನಡೆಯುತ್ತವೆ ಎಂದರೆ ಈ ದೇಶ ದಲಿತರ ಪಾಲಿಗೆ ಎಂತಹ ವರದಾನವನ್ನು ದಯಪಾಲಿಸುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಿದೆ. ದಲಿತರ ಕಲ್ಯಾಣಕ್ಕೆ ಮೀಸಲಾದ ಹಣ ಇನ್ನಿತರ ಅಭಿವೃದ್ಧಿಗೆ ಬಳಕೆಯಾಗಿರುವುದೂ ಅತ್ಯಂತ ವಿಷಾದನೀಯ. ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡುವ ಇದೇ ಸರ್ಕಾರಗಳು ಅಂತರ್ಜಾತಿ ವಿವಾಹವಾದವರಿಗೆ ಸೂಕ್ತ ರಕ್ಷಣೆಯನ್ನೇನಾದರೂ ನೀಡಿವೆಯೆ? ಎಂದರೆ ಅದೂ ಇಲ್ಲ, ಮರ್ಯಾದಾ ಹತ್ಯೆ ಎನ್ನುವುದು ಮನೆಮಾತಾಗುವ ಮಟ್ಟಿಗೆ ಇಂದು ದೇಶದ ಮೂಲೆ ಮೂಲೆಗಳಿಗೂ ಹಬ್ಬುತ್ತಿದೆ. ಇಂತಹ ಸಂದರ್ಭದಲ್ಲಿ ದಲಿತರ ಬದುಕು ಇನ್ನಷ್ಟು ಶೋಚನೀಯ ಸ್ಥಿತಿಗೆ ತಲು



90ರ ಆಸುಪಾಸಿನ ವೃದ್ಧನನ್ನು ದೇವಸ್ಥಾನ ಮುಟ್ಟಿ

ಬೆಂಕಿ ಹಚ್ಚಿ ಸುಡುತ್ತಾರೆಂದರೆ, ಕಂಪ್ಲೇಂಟ್ ಕೊಡಲು ಹೋ

ಎದ್ದು ಹೊಲ ಮೇಯ್ದಂತೆ ಪೊಲೀಸರೇ ದಲಿತರನ್ನು ಚಿತ್ತಲಿ

ಸಣ್ಣ ಸಣ್ಣ ಕಾರಣಗಳಿಗಾಗಿ ದಲಿತರು ಬಹಿಷ್ಕಾರಕ್ಕೆ ಒ

ಪೆಟ್ರೋಲ್ ಇರುವುದು ವಾಹನ ಓಡಿಸಲಿಕ್ಕಷ್ಟೇ ಅ

ಸುಡಲಿಕ್ಕಾಗುತ್ತದೆ ಎಂದು ನಂಬಿರುವ ಈ ದೇಶದಲ್ಲಿ ದಲಿ

ಅಮಾನವೀಯ ನೆಲೆಯಲ್ಲಿದೆ ಎಂಬುದನ್ನು ತಿಳಿಯಬ

ಹತ್ತು ವರ್ಷದಲ್ಲಿ 4 ಲಕ್ಷದ 75 ಸಾವಿರ ಪ್ರಕರಣಗಳು ಪೊ

ನೋಂದಾಯಿತಗೊಂಡಿವೆ. ಇತ್ಯರ್ಥವಾಗಿರುವ ಶೇ.99 ಕ

ವಿರುದ್ಧವಾದ ತೀರ್ಪು ಬಂದಿದೆ. ಹೀಗಿರುವಾಗ ದಲಿತ

ಮಹಿಳೆಯರ ರಕ್ಷಣೆಯೇ ಸರ್ಕಾರದ ಮೊದಲ ಆದ್ಯತೆಯ

ಸರ್ಕಾರಗಳು ಇದಕ್ಕಿಂತ ಬೇರೆಲ್ಲದಕ್ಕೂ ದಲಿತರ ಹೆಸ

ನೀಡುತ್ತವೆ.

ದೇಶದಲ್ಲಿ ದಲಿತರ ದುಸ್ಥಿತಿ ಹೀಗೆ ಮುಂದುವರಿಯು

ವರ್ಗ ಪ್ರತಿಮೆಗಳ ಸ್ಥಾಪನೆಗೆ ಮುಂದಾಗುವುದು ಎಷ

ಹೊಗಳಿಕೆಯ ಕಣ್ಣಿಂದ ನೋಡುತ್ತಾ ನಿಂತಿರುವ ದಲಿ

ಸಂಘಟನೆಗಳ ನಡೆ ಎಷ್ಟು ಸಮಂಜಸ. ದಲಿತರಿಗೆ ಮೀ

ಹಣ ಹರಿದುಹೋಗುತ್ತಿದೆ. ಇದರ ಬಗ್ಗೆ ತಕರಾರು ಎತ್ತಬೇಕಿ

ಇಂತಹ ಘಟನೆಗಳು ತಣ್ಣಗಾಗಿಸುತ್ತವೆ. 'ಪರಿಶಿಷ್ಟರಿಗೆ ಮೀಸ

ಅನುದಾನವನ್ನು ಅನ್ಯ ಸಾರ್ವಜನಿಕ ಉದ್ದೇಶಕ್ಕೆ ವರ್ಗಾವ

ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡ

ಕಾಯ್ದೆಯ ಸೆಕ್ಷನ್ 7ಡಿ ಅವಕಾಶ ಕಲ್ಪಿಸುತ್ತದೆ.' ಈ

ಸಾಲಿನಲ್ಲಿ ಪರಿಶಿಷ್ಟರಿಗೆ ಮೀಸಲಿಟ್ಟಿದ್ದ 15,834 ಕ

ಉಪಯೋಜನೆಯಲ್ಲಿನ ಪ್ರಕರಣ 7ಡಿ ನೆಪವೊಡ್ಡಿ ಇತರ

ಬಳಸಿಕೊಳ್ಳಲಾಗಿದೆ. ಹಿಂದೆ ಕಾಮನ್‌ವೆಲ್ತ್ ಕ್ರೀಡಾಕ

ಅಭಿವೃದ್ಧಿಗಾಗಿ ಮೀಸಲಾಗಿದ್ದ 600 ಕೋಟಿಗಳನ್ನು ಬ

ಒಂದು ಕಡೆ ಸರ್ಕಾರಗಳು ಇಂತಹ ಕೆಲಸಗಳನ್ನೂ ಮಾಡ

ಕಡೆ ಇವುಗಳನ್ನು ಜನತೆಯ ಗಮನಕ್ಕೆ ಬರದ ಹಾಗೆ ತಂತ್ರಗ

ಸಾಗುತ್ತದೆ. ಪ್ರಸ್ತುತ ಪಂಚತೀರ್ಥ ಯೋಜನೆಯ ಉದ್ದೇಶ

ಎಂಬುದು ಬಲವಾದ ನಂಬಿಕೆ.

ಇಷ್ಟಾಗಿಯೂ ಪ್ರತಿಮೆ ಬೇಡವೇ ಎಂದರೆ ಬೇಕು.

ದಮನಿತರ ಸ್ವಾಭಿಮಾನದ ಸಂಕೇತವೂ ಹೌದು. ಆದರೆ ದಲಿ

ತಪ್ಪಿಸದ ಸರ್ಕಾರಕ್ಕೆ ಪ್ರತಿಮೆ ನಿರ್ಮಿಸುವ ಹಕ್ಕೆಲ್ಲಿದೆ

ಮಾಡದಿದ್ದರೆ ಹೇಗೆ? ಪ್ರತಿಮೆ ಮತ್ತು ಅಂಬೇಡ್ಕರ್ ಅವ

ಕಟ್ಟಡಗಳ ಪುನರುಜ್ಜೀವನ ಮಾಡಬೇಕು. ಏಕೆಂದರೆ ದ

ಐಡೆಂಟಿಟಿಯೇ ಅವುಗಳು. ಆದರೆ ಯಾರು ಮೂರ್ತಿಭಂ

...ವಾಗಿದೆ. ಇನ್ನು ರೈತರ ಆತ್ಮಹತ್ಯೆಯ ಕತೆ ...ಣತೀರದು. ಈ ನಡುವೆ ಯದ್ವಾತದ್ವಾ ಏರುವ ... ಡೀಸೆಲ್ ಬೆಲೆಗಳು? ಹದಗೆಟ್ಟಿರುವ ...ಸ್ಥೆ? ಯಾಕೆಂದರೆ ಪೊಲೀಸ್ ವ್ಯವಸ್ಥೆ? ಕೇಂದ್ರದ ...ತ್ವಾದಲ್ಲಿರುವ ರಾಜಧಾನಿ ದೆಹಲಿಯಲ್ಲಿ ಮಕ್ಕಳ ... ಅತ್ಯಾಚಾರ ನಡೆಯುತ್ತಿದೆ. ಇನ್ನು ಮಧ್ಯಪ್ರದೇಶ ...ಕೋರ್ಸುಗಳ ಪರೀಕ್ಷಾ (ವ್ಯಾಪಂ) ಹಗರಣ? ...ಘಟನೆ ಸಂಬಂಧ 40 ಮಂದಿ ಅನುಮಾನಾಸ ...ಪಪ್ಪಿದ್ದಾರೆ ಎಂದರೆ ಹಗರಣದ ಗಂಭೀರತೆ ... ಎಂಥವರಿಗೂ ಅರ್ಥವಾಗುತ್ತದೆ. ಅಂದಹಾಗೆ ...ಳೆದ ಹತ್ತು ವರ್ಷಗಳಿಂದ ಬಿಜೆಪಿ ಆಡಳಿತ ...ಮುಖ ರಾಜ್ಯ ಎಂಬುದಿಲ್ಲಿ ಗಮನಾರ್ಹ.

...ದು ದಿಕ್ಕೆಟ್ಟು ನಿಂತಿದೆ. 'ಒಳ್ಳೆಯ ದಿನಗಳು' ... ಪರವಾಗಿಲ್ಲ 'ಕೆಟ್ಟದಿನಗಳೇಕೆ?' ಎಂದು ... ಪ್ರಶ್ನಿಸುವಂತಾಗಿದೆ. ಗುಜರಾತ್ ಮಾದರಿ ...ಂದು ದೇಶದ ಜನ ತಮ್ಮನ್ನು ತಾವೇ ...ಕನ ಮಾಡಿಕೊಳ್ಳುವಂತಾಗಿದೆ. ಹ್ಞಾಂ, ...ಮಾದರಿ ಆದೆಷ್ಟು ಮೇರೆ ಮೀರಿದ್ದೆಂದರೆ, ...ಟೇಲ್ ಎಂಬ ಪಾಟೀದಾರ್ ಸಮುದಾಯದ ... ಹೋರಾಟಗಾರ ತನ್ನ ಸಮುದಾಯದ ...ಖರರಿಗೆ ಕರೆಕೊಡುವುದೇನೆಂದರೆ 'ರಾಜ್ಯ ... ಹತ್ಯೆ ಮಾಡಿ' ಎಂದು!

...ಬೆಯಲ್ಲಿ ಈಗೀಗ ಸ್ಪಷ್ಟವಾಗಿ ಅರ್ಥವಾಗುತ್ತಿದೆ ...ನಗಳು' ದೌರ್ಜನ್ಯಕೋರರಿಗೆ, ದಬ್ಬಾಳಿಕೆ ...ಗೆ, ಅಸಮಾನತೆ ಎಸಗುವವರಿಗೆ, ಸಹಿಷ್ಣುತೆ ...ಗೆ. 'ಕೆಟ್ಟ ದಿನಗಳು' ದೌರ್ಜನ್ಯದಿಂದ ... ದಬ್ಬಾಳಿಕೆ ಅನುಭವಿಸುತ್ತಿರುವವರಿಗೆ, ...ಡುವವರಿಗೆ, ಸಹಿಷ್ಣುತೆ ಬೇಕೆನ್ನುವವರಿಗೆ. ...ವ ಅರ್ಥ ತಾರತಮ್ಯದ ಆಡಳಿತ. ಸದ್ಯ ...ಂತಹ ತಾರತಮ್ಯದ ಕಪಿಮುಷ್ಟಿಯಲ್ಲಿದೆಯಲ್ಲ ...ದುರಂತ.

■ ರಘೋತ್ತಮ ಹೊ.ಬ

...ಡುವುದರ ಹಿಂದಿರುವ ಧೋರಣೆಯಾದರೂ ...ವುದನ್ನು ಪ್ರಶ್ನೆ ಮಾಡದಿದ್ದರೆ ಹೇಗೆ? ...ಮಿತವಾಗುವುದು ಎಷ್ಟು ಸರಿ? ಇವೆಲ್ಲವುಗಳ ... 'ಪ್ರತಿಮೆಗಿಂತ ಉದ್ಯೋಗ ನೀಡಿ', 'ಅನ್ನಕ್ಕೆ ...ತಿಕೊಡಿ' ಎನ್ನುವುದನ್ನು ಗಟ್ಟಿಯಾಗಿ ...ಕಿದೆಯಲ್ಲವೇ!

...ದ ದುರಂತವೆಂದರೆ ಇದುವರೆಗಿನ ಯಾವ ... ಪೂರ್ಣ ಪ್ರಮಾಣದಲ್ಲಿ ಬ್ಯಾಕ್‌ಲಾಗ್ ...ಭರ್ತಿ ಮಾಡುವ ದಿಟ್ಟತನ ಪ್ರದರ್ಶಿಸಿಲ್ಲ, ...ಗಟ್ಟಲೆ, ರಾಜ್ಯದಲ್ಲಿ ಸಾವಿರಾರು ಬ್ಯಾಕ್‌ಲಾಗ್ ...ಲಿ ಇವೆ. ಇದಕ್ಕೆ ಮುನ್ನುಡಿ ಬರೆಯಬೇಕಿದ್ದ ...ಕೈಕಟ್ಟಿ ಕೂತಿವೆ. ಸರ್ಕಾರ ಮೀಸಲಾತಿಯ ...ಂದುಕೊಳ್ಳುತ್ತಲೇ ಖಾಸಗಿಯವರನ್ನು ಕಾವು ...ಸುತ್ತಿವೆ. ಇದಕ್ಕೆ ನಿದರ್ಶನವೆಂಬಂತೆ ಒಂದು ... ಉದ್ದಿಮೆಗಳು ನಿರಂತರವಾಗಿ ಕುಸಿದಿವೆ. ... ಉದ್ದಿಮೆಯಲ್ಲಿ 10 ಲಕ್ಷಕ್ಕೂ ಅಧಿಕ ...ಯಾಗಿವೆ. ಅಘೋಷಿತ ಮೀಸಲಾತಿಯನ್ನು ... ದಲಿತರನ್ನು ಹೊರಗಿಡುತ್ತಾ ಬರುತ್ತಿರುವ ...ರದ ಕೃಪಾಪೋಷಿತ ವಲಯಗಳು. ವಸ್ತುಸ್ಥಿತಿ ...ನಿಷ್ಪಕ್ಷ ಸ್ಮಾರಕದ ಶಂಕುಸ್ಥಾಪನೆಯ ಜೊತೆಗೆ ...ಸೃಷ್ಟಿಸಿ ಎಂದು ಕೇಳದಿದ್ದರೆ ಹೇಗೆ?

...ಈ ದೇಶದ ಅವ್ಯವಸ್ಥೆಗೆ ಹಿಡಿದ ಕನ್ನಡಿ. ...ರ್ಥಿಕ ಸಂಶೋಧನೆ ರಾಷ್ಟ್ರೀಯ ಮಂಡಲಿ' ...ರಿಕಾದ ಮೇರಿಲ್ಯಾಂಡ್ ವಿಶ್ವವಿದ್ಯಾಲಯ ... ನಾಲ್ಕು ಭಾರತೀಯರಲ್ಲಿ ಒಬ್ಬರು ಅಸ್ಪೃಶ್ಯತೆ ... ಎಂದು ವರದಿ ನೀಡಿದೆ. ಇಂತಹ ಅಸ್ಪೃಶ್ಯತೆ ...ಚ್ಚೆಹೆಜ್ಜೆಗೂ ಕಿತ್ತು ತಿನ್ನುತ್ತಿದೆ. ಇದರಿಂದ ... ಸಂವಿಧಾನದ 17ನೇ ವಿಧಿ ಅಸ್ಪೃಶ್ಯತೆಯನ್ನು ... ಇದನ್ನು ಚಾಚೂತಪ್ಪದೆ ಕಾನೂನು ...ಮೂಲಕ ಕಾಪಾಡಬೇಕಿದ್ದ ಸರ್ಕಾರಗಳು ...ಗೂ ಸಂಬಂಧವಿಲ್ಲ ಎನ್ನುವಂತೆ ಇವೆ. ...ತ್ರ ಬಂದು ಅರವತ್ತು ವರ್ಷ ಕಳೆದರೂ ...ಚರಣೆ ನಿಂತಿಲ್ಲ, ಇದರ ವಿರುದ್ಧ ಏಳಬೇಕಿದ್ದ ...ಗಳು ಸರ್ಕಾರಗಳು ಸವರುವ ಮೂಗಿನ ...ಪನ್ನು ಕೊಂಡಾಡುತ್ತಾ ಕಾಲನೂಕುತ್ತಿವೆ. ...ದೀ ದಿನದಿಂದ ದಿನಕ್ಕೆ ದಲಿತರ ಸಾವು ...ನ್ನು ಉಗ್ರರೂಪದಲ್ಲಿ ಕಾಣಿಸಿಕೊಳ್ಳುತ್ತಾ ...ಗ ಹೇಳಿ! ಪ್ರತಿಮೆ ಮತ್ತು ಅದರ ಸುತ್ತಲಿನ ... ಜೊತೆಗೆ ದಲಿತರ ಸಮಗ್ರ ಬದುಕಿನ ...ಕೆ ಹಣವು ಮುಂದಡಿ ಇಡಬೇಕಲ್ಲವೇ!

■ ಡಾ.ಹೆಚ್.ವಿ.ಉಮಾಶಂಕರ್

ಸತ್ತವಳು ಕೋರ್ಟಿಗೆ ಬಂದಿದ್ದಳು!

ಜಗದ್ಗುರುಗಳು ಹಾಗಿದ್ದರು ಹೀಗಿದ್ದರು, ಅಷ್ಟು ಅಂದವಾಗಿದ್ದರು ಇಷ್ಟು ಚಂದವಾಗಿದ್ದರು ಎಂದೆಲ್ಲ ವರ್ಣಿಸಿ ಅಕ್ಷರಗಳನ್ನು ಪೋಲು ಮಾಡುವುದಕ್ಕಿಂತ ಅವರು ಭಾರತೀಯ ಸಿನಿಮಾಗಳ ಹೀರೋ ಆಗಲು ಅನುರೂಪವಾದ ರೂಪ ರಾಶಿ ಹೊಂದಿದ್ದರು ಎಂದರೆ ವಾಚಕರ ಪ್ರಜ್ಞಾವಲಯಕ್ಕೆ ಶ್ರೀಯವರ ಬಾಹ್ಯರೂಪ ಮಸುಕುಮಸುಕಾಗಿ ಬರಬಹುದು. ಹಾಗೆ ರೂಪುಗೊಂಡ ಮಸುಕು ವ್ಯಕ್ತಿಯ ಹಣೆಗೆ ಢಾಳಾಗಿ ಕಾಣುವಂತೆ ಮೂರುಪಟ್ಟವಿಭೂತಿ ಬಳಿದರೆ ಜಗದ್ಗುರುಗಳ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಯಾಕೆಂದರೆ ನಿಶ್ಶಸ್ತ್ರೀಕರಣಗೊಂಡ ದುರ್ಗಾ ಮಾತೆಯನ್ನು ಹೇಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲವೋ ಹಾಗೆ ವಿಭೂತಿರಹಿತ ಪೂಜ್ಯರನ್ನು ಊಹಿಸಿಕೊಳ್ಳುವುದು ಅಸಾಧ್ಯವಾಗಿತ್ತು. ತಾಯಿಯ ಗರ್ಭದಿಂದ ಹೊರಬರುವಾಗಲೇ ವಿಭೂತಿಭೂಷಣ ರಾಗಿದ್ದರೇನೋ ಎಂಬ ಭ್ರಮೆ ತರಿಸುವಂತಿತ್ತು ಅವರ ವಿಭೂತಿಯ ನಂಟು. ವಿಭೂತಿಯಿಂದಲಂಕೃತರಾದ ಪೂಜ್ಯರ ಹಣೆಯಿಂದ ಹೊರಹೊಮ್ಮುವ ದಿವ್ಯಪ್ರಭೆಯಿಂದ ಮಂತ್ರಮುಗ್ಧರಾದೆವು ಎಂದು ಕೆಲವರು ಹೇಳುತ್ತಿದ್ದರು. ಗುರು ಮಠದ ಪ್ರಭಾವದಿಂದಯೋ, ದಿವ್ಯಪ್ರಭೆಯ ಪ್ರಚಾರ ದಿಂದಲೋ ಅಥವ ಈ ಎರಡೂ ಕಾರಣಗಳಿಂದಾಗಿಯೋ ದಿನೇದಿನೇ ಗುರುಮಠದ ಭಕ್ತರ ಸಂಖ್ಯೆ ಏರುತ್ತಾ ಹೋಯಿತು ಎನ್ನುವುದಂತೂ ಸತ್ಯ.

ಸಾಮಾನ್ಯವಾಗಿ ಜಗದ್ಗುರುಗಳು ಎಂದರೆ ಸರ್ವಸಂಗ ಪರಿತ್ಯಾಗಿಗಳು ಎಂಬ ನಂಬಿಕೆ ಇದೆ. ಆಧ್ಯಾತ್ಮಿಕತೆಯೇ ಮೈವೆತ್ತಂತ ಪೂಜ್ಯರೂ ಹಾಗೆಯೇ ಇದ್ದರು. ಆದರೆ ದರ್ಶನಕ್ಕೆ ಬಂದ ಭಕ್ತರು ಕಾಣಿಕೆ ಕೊಡುತ್ತಿದ್ದರು. ಕಾಣಿಕೆ ಎಂದರೆ ಲಕ್ಷ್ಮಿ. ಅವಳು ತಾನಾಗಿಯೇ ಬರುವಾಗ ದೂರೀಕರಿಸುವುದು ಧರ್ಮ ಅಲ್ಲ ಎಂಬ ಧಾರ್ಮಿಕ ನಂಬಿಕೆ ಪರಮ ಪೂಜ್ಯರದ್ದು. ಹಾಗಾಗಿ ಭಕ್ತರ ಕಾಣಿಕೆಯನ್ನು ಅನಿವಾರ್ಯವಾಗಿ ಸ್ವೀಕರಿಸಿ ಅವರಲ್ಲಿ ಧನ್ಯತಾಭಾವ ಮೂಡಿಸುತ್ತಿದ್ದರು. ಹೀಗೆ ಸಂಗ್ರಹಿಸಿದ ಹಣದ ಸದ್ವಿನಿಯೋಗ ಮಾಡುತ್ತಿದ್ದರು. ಕಷ್ಟದಲ್ಲಿರುವವರಿಗೆ ನೆರವು ನೀಡುತ್ತಿದ್ದರು. ನೆರವು ಸಿಗದ ಅಸೂಯಾಪರರೂ ಇರುತ್ತಾರಲ್ಲ. ಅಂತಹವರಲ್ಲಿ ಕೆಲವರು ಬಹುಪಾಲು ಫಲಾನುಭವಿಗಳು ಜಗದ್ಗುರುಗಳ ಪೂರ್ವಾಶ್ರಮದ ಸಂಬಂಧಿಕರೇ ಆಗಿದ್ದಾರೆ ಎಂಬ ಗುಲ್ಲು ಎಬ್ಬಿಸಿದರು. ನಿಷ್ಠಾವಂತ ಭಕ್ತಗಣ ಈ ಕುರಿತು ಚಿಂತಿಸಿತು. ಪೂಜ್ಯ ಶ್ರೀಗಳ ಬಳಿಗೆ ನೆರವು ಯಾಚಿಸಿ ಹಲವಾರು ಮಂದಿ ಬರುತ್ತಾರೆ. ಅವರ ಪೂರ್ವಾಪರಗಳ ವಿಷಯ ಅವರಿಗೆ ಅರಿವಿರುವುದಿಲ್ಲ. ಏನೋ ಕಷ್ಟ ಎಂದು ಬಂದವರಿಗೆ ಸಹಾಯ ಮಾಡಿರುತ್ತಾರೆ. ಅವರು ಪೂರ್ವಾ ಶ್ರಮದ ಸಂಬಂಧಿಯೇ ಇರಬಹುದು. ಆದರೂ ಅವರೂ ಭಕ್ತರೇ ತಾನೆ. ಭಕ್ತರಿಗೆ ಸಹಾಯ ನೀಡಬೇಕಾದ್ದು ಗುರುಗಳ ಧರ್ಮ. ಧರ್ಮದ ಪರಿಪಾಲನೆ ಮಾಡಿದ್ದಾರೆ ಪೂಜ್ಯರು ಅಷ್ಟೆ ಎಂದೆಲ್ಲ ಚಿಂತನಮಂಥನ ನಡೆಸಿದ ಭಕ್ತಗಣ ಮಠಾಧೀಶರ ನಡವಳಿಕೆಗಳಲ್ಲಿ ಯಾವುದೇ ಅಪರಾಧ ಇಲ್ಲ ಎಂದು ಅಭಿಪ್ರಾಯಪಟ್ಟಿತು. ಅಸೂಯಾಪರರಿಗೆ ಈ ಚಿಂತನೆ ಹಿಡಿಸಲಿಲ್ಲ, ಅವರಿಗೆ ಇದರಲ್ಲಿ ಭಾರೀ ಮೋಸ ವಂಚನೆಯೇ ಕಾಣಿಸಿತ್ತು.

ಇವರಲ್ಲಿ ಒಬ್ಬ ವಿಷಯದ ಆಳಕ್ಕೆ ಇಳಿದ. ಮೂಲ ಶೋಧಿಸಲು ಮೊದಲಾದ. ಆಳಕ್ಕೆ ಇಳಿದಂತೆ ಅಲ್ಲಿ ವಿಸ್ಮಯ ಪ್ರಪಂಚವೇ ತೆರೆದುಕೊಳ್ಳಲು ಆರಂಭಿಸಿತು. ಹಣ ದುರ್ಬಳಕೆ ಮಾತ್ರ ಅಲ್ಲ, ಜಗದ್ಗುರುಗಳ ಜಗತ್ತು ಪುರುಷ ಭಕ್ತರ ಜಗತ್ತಿಗೆ ಸೀಮಿತ ಆಗಿರದೆ ಸ್ತ್ರೀ ಜಗತ್ತನ್ನು ಅತಿಯಾಗಿ ಆಕ್ರಮಿಸಿರುವುದು ಗೋಚರಿಸತೊಡಗಿತು. ತಾನು ಕಂಡ ಸತ್ಯಗಳನ್ನು ಒಂದೊಂದಾಗಿ ಬಹಿರಂಗ ಪಡಿಸತೊಡಗಿದ.

ಜಗದ್ಗುರುಗಳು ಧೃತಿಗೆಡಲಿಲ್ಲ, ಅವರಿಗೆ ಭಕ್ತರ ಮೇಲೆ ಅಪಾರ ನಂಬಿಕೆ. ಅವರಿಗೆ 'ಇದೆಲ್ಲ ಸುಳ್ಳಿನ ಕಂತೆ. ಅವನು ನಮ್ಮ ಬಳಿಗೆ ಬಂದು ಹಣದ ಬೇಡಿಕೆ ಇಟ್ಟಿದ್ದ, ನಾನು ನಮ್ಮಲ್ಲಿರುವ ಹಣ ನಮ್ಮದಲ್ಲ, ಭಕ್ತರದ್ದು, ಅವರ ಅನುಮತಿ ಇಲ್ಲದೆ ಕೊಡಲು ಸಾಧ್ಯವಿಲ್ಲ ಎಂದೆವು. ಆದರಿಂದ ವಿಚಲಿತನಾದ ಅವನು ಕೆಲವು ಸುಳ್ಳು ಸಾಕ್ಷಿ ಪುರಾವೆಗಳನ್ನು ತೋರಿಸಿ ಇವನ್ನೆಲ್ಲ ಬಹಿರಂಗಪಡಿಸುತ್ತೇನೆ ಎಂದು ಬೆದರಿಕೆ ಹಾಕಿದ. ಯಾವುದೇ ಅಪರಾಧ ಎಸಗದ ನಾವು ಈ ಬೆದರಿಕೆಗೆ ಅಂಜಲಿಲ್ಲ. ಏನಾದರೂ ಮಾಡಿಕೊ ಎಂದೆವು. ಅವನು ಹಣ ಸಿಗದ್ದಕ್ಕೆ ಈ ರೀತಿ ಅಪಪ್ರಚಾರ ಮಾಡುತ್ತಿದ್ದಾನೆ' ಎಂದೆಲ್ಲ ಸ್ಪಷ್ಟಪಡಿಸಿದರು.

ಭಕ್ತ ಗಣ ಪರಮ ಪೂಜ್ಯರ ಮಾತು ನಂಬಿತು. ಸಾತ್ವಿಕತೆಯೇ ಮೈವೆತ್ತಂತಿರುವ ಗುರುಗಳ ಮೇಲೆ ಮಾಡಿರುವ, ಮಾಡುತ್ತಿರುವ ಆರೋಪಗಳು ನಂಬಲು ಅಸಾಧ್ಯವಾದವು ಎಂದೇ ಭಾವಿಸಿತು. ಆತನ ನೀಚಬುದ್ಧಿಯ ನಾಲಿಗೆಗೆ ಶಾಪ ಹಾಕಿತು.

ಶಾಪ ಫಲ ನೀಡಲಿಲ್ಲ, ಕೆಲವು ಆರೋಪಗಳಿಗೆ ಆಧಾರಗಳು ಹೊರ ಬರಲಾರಂಭಿಸಿದವು. ಜಗದ್ಗುರುಗಳು ಇವೆಲ್ಲ ಸುಳ್ಳು ಮಾಹಿತಿಗಳು ಎಂದರಾದರೂ ಅಳುಕು ಇಣಿಕಲು ಪ್ರಾರಂಭಿಸಿತು. ಆದರ ಕುರಿತೇ ಚಿಂತಿಸಿದರು. ನಮ್ಮ ಹೆಸರು ಎಲ್ಲಿಯೂ ಹೊರಬರಬಾರದು. ಆತನಿಗೆ ಬುದ್ಧಿ ಬರಬೇಕು. ಹೇಗೆ? ಮಠದ ಭಕ್ತನಿಗೂ ಅವನಿಗೂ ಒಂದು ನಿವೇಶನದ ವಿಷಯದಲ್ಲಿ ವ್ಯಾಜ್ಯ ನ್ಯಾಯಾಲಯ ದಲ್ಲಿದೆ. ತನ್ನನ್ನು ಕೊಲೆ ಮಾಡಲು ಬಂದಿದ್ದ ಎಂದು ಭಕ್ತನಿಂದ ಪೊಲೀಸರಿಗೆ ದೂರು ಕೊಡಿಸುವುದು. ಪೊಲೀಸು ವ್ಯವಸ್ಥೆ ಮಠದ ವಿರುದ್ಧ ಹೋಗುವ ಧೈರ್ಯ ತಾಳಲಾರದು. ನಾಲ್ಕು ದಿವಸ ಒಳಗೆ ಹೋಗಿದ್ದು ಬಂದರೆ ತಹಬಂದಿಗೆ ಬರುತ್ತಾನೆ ಎಂದು ಯೋಚಿಸಿದರು. ತಮ್ಮ ಆಪ್ತರಲ್ಲಿ ಇದರ ಸಮಾಲೋಚನೆ ನಡೆಸಿದರು. ಇದು ಸರ್ವಸಮ್ಮತಿಯಿಂದ ಅನುಮೋದನೆಗೊಳ್ಳುವ ಹಂತದಲ್ಲಿ ಓರ್ವ ವ್ಯಕ್ತಿ ಅನುಮಾನ ಸೂಚಿಸಿದ. ಪರಮಪೂಜ್ಯರ ಮೇಲೆ ವೃಥಾ ಆರೋಪ ಮಾಡುತ್ತಿರುವ ವ್ಯಕ್ತಿಯನ್ನು ನಾನು ಚೆನ್ನಾಗಿ ಬಲ್ಲೆ, ಆತ ಜಗಮೊಂಡ. ಜೈಲಿಗೆ ಹೋಗಿ ಬಂದರೆ ಅವನು ಸುಧಾರಿಸುವುದು ಹಾಗಿರಲಿ, ಟೀಕೆಗಳು ಇನ್ನೂ ತೀಕ್ಷ್ಣವಾಗಿರುತ್ತವೆ ಎಂಬುದು ಅವನ ಅನುಮಾನವಾಗಿತ್ತು. ಇದಕ್ಕೇನು ಪರಿಹಾರ ಎಂದು ಆಪ್ತ ಸಮಾಲೋಚನಕಾರರು ಅವನನ್ನೇ ಕೇಳಲಾಗಿ ಅವನ ಹೆಂಡತಿಯನ್ನು ನಾನು ಬಲ್ಲೆ, ಆಕೆ ಮಾನಮರ್ಯಾದೆಗೆ ಅಂಜುವ ಹೆಂಗಸು. ಕೋರ್ಟು, ಪೊಲೀಸು ಎಂದರೆ ನಡುಗೇ ಹೋಗುತ್ತಾಳೆ. ಅವನ ಜೊತೆಗೆ ಅವಳನ್ನು ಸೇರಿಸಬೇಕು. ಗಂಡಹೆಂಡತಿ ಕೊಲೆ ಮಾಡಲು ಬಂದಿದ್ದರೆಂದು ಕೇಸು ದಾಖಲಿಸಿದರೆ ಗಂಡನನ್ನು ಹೆಂಡತಿ ನಿಯಂತ್ರಿಸುತ್ತಾಳೆ ಎಂಬುದಾಗಿ ಭಿನ್ನವಿಸಿದನು.

ಸರ್ವಾನುಮತದಿಂದ ಯೋಜನೆ ಒಪ್ಪಿಗೆಯಾಯಿತು. ಅದನ್ನು ಜಾರಿಗೊಳಿಸುವುದಷ್ಟೇ ಉಳಿದದ್ದು. ಪೊಲೀಸರು ಗುರುಮಠದ ಅಧೀನರು ಎಂಬುದು ಮನೆ ಮಾತಾಗಿತ್ತು ನಿಜ. ಆದರೆ ವಿಷಯವೇ ಹಾಗಿತ್ತು, 'ಸರಿಯಾಗಿ ನೋಡಿಕೊಳ್ಳ'ದಿದ್ದರೆ ಪರಿಣಾಮ ತಿರುಗುಬಾಣ ಆಗುವ ಸಂಭವ ಇತ್ತು. ಇಂತಹದ್ದರಲ್ಲಿ ಪೊಲೀಸರ ಪ್ರಾವೀಣ್ಯತೆ ಯಾರಿಗೂ ಕಡಿಮೆ ಇಲ್ಲ, ಮಠಾಧೀಶರು ಇದಕ್ಕೆಲ್ಲ ವ್ಯವಸ್ಥೆ ಮಾಡಿದರು. ಅದರ ವಾಸನೆ ಮೂಗಿಗೆ ಬಡಿಯುತ್ತಿದ್ದಂತೆಯೇ ಭಕ್ತರ ಹುಮ್ಮಸ್ಸು ಹೆಚ್ಚಿತು. ಜೇನು ಬಿಚ್ಚಲು ಕೈಹಾಕಿದರು. ಕೈ ನೆಕ್ಕಲು ಸಿಕ್ಕಿತಲ್ಲಾ ಎಂಬ ತೃಪ್ತಿ ಅವರಿಗೆ.

ಪೊಲೀಸಿನವರೂ ಮುತುವರ್ಜಿ ವಹಿಸಿದರು. ಪ್ರಥಮ ಮಾಹಿತಿ ವರದಿ ದಾಖಲಿಸಿದರು. ಮಠದ ಕೃಪೆ ಆಗಿತ್ತಲ್ಲ, ಸ್ಟೇಷನ್ನಿನಲ್ಲೇ ಕುಳಿತು ಆರೋಪ ಪಟ್ಟಿ ಸಿದ್ಧ ಮಾಡಿದರು. ಆರೋಪಿಗಳು ಧರಿಸಿದ್ದ ಬಟ್ಟೆ, ಅವುಗಳ ಬಣ್ಣ, ಕಾಲಿಗೆ ಹಾಕಿದ್ದ ಚಪ್ಪಲಿ, ಘಟನೆ ನಡೆದ ವೇಳೆ, ಸ್ಥಳ ಎಲ್ಲವನ್ನೂ ವಿಷದವಾಗಿ ಬರೆದಿದ್ದರು. ಕಾನೂನುಬದ್ಧವಾಗಿ ಏನೇನು ಮಾಡಬೇಕೋ ಅದನ್ನೆಲ್ಲ ಮಾಡಿದ್ದರು.

ಕೆಳ ನ್ಯಾಯಾಲಯಕ್ಕೆ ಕೇಸು ಬಂತು.



ಆರೋಪಿ ಹಾಜರಾದ. ಹೆಂಡತಿ ನಾಪತ್ತೆ.

'ಎಲ್ಲಯ್ಯ ನಿನ್ನ ಹೆಂಡತಿ' ಕೇಳಿದರು ನ್ಯಾಯಾಧೀಶರು.

'ಬಂದಿಲ್ಲ ಸ್ವಾಮಿ' ಅಂದ ಅವ ನಿರ್ಲಿಪ್ತನಾಗಿ.

ನ್ಯಾಯಾಧೀಶರಿಗೆ ರೇಗಿತು. ಹಲ್ಲು ಕಡಿಯುತ್ತಾ ಕೇಸು ಮುಂದೂಡಿದರು.

ಕೇಸಿನ ದಿವಸ ಮತ್ತೆ ಅದೇ ಹಾಡು. ಅದೇ ರಾಗ.

'ಎಲ್ಲಯ್ಯ ಹೆಂಡತಿ' ನ್ಯಾಯಾಧೀಶರ ಪ್ರಶ್ನೆ.

'ಬಂದಿಲ್ಲ ಸ್ವಾಮಿ.'

ಅದು ನ್ಯಾಯಾಧೀಶರಿಗೆ ಗೊತ್ತಿಲ್ಲವೆ? ತಲೆಹರಟೆ ಉತ್ತರ ಅನ್ನಿಸಿತು ನ್ಯಾಯಾಧೀಶರಿಗೆ. 'ಇವನು ಇಲ್ಲೇ ಇರಲಿ. ಆ ಹೆಂಗಸನ್ನು ಎಳೆದು ತನ್ನಿ' ಅಂತ ಆಜ್ಞೆ ಮಾಡಿದರು.

ಪೊಲೀಸಿನವರು ಹೋದರು. ಬಂದರು.

ಆರೋಪಿ ಹೆಂಗಸು ಇರಲಿಲ್ಲ!

'ಎಲ್ಲಿ ಆರೋಪಿ' ನ್ಯಾಯಾಧೀಶರ ಪ್ರಶ್ನೆ.

'ಮನೆಗೆ ಬೀಗ ಹಾಕಿತ್ತು ಸ್ವಾಮಿ.'

ಹೆಂಡತಿ ಒಳಗೆ ಬಿಟ್ಟು ಮನೆಗೆ ಬೀಗ ಹಾಕಿರಬೇಕು ಇವನು ಎಂಬ ಅನುಮಾನ ಬಂದಿತು ನ್ಯಾಯಾಧೀಶರಿಗೆ.

'ಮನೆಗೆ ಬೀಗ ಹಾಕಿದ್ಯಾ?'

'ಹೌದು ಸ್ವಾಮಿ.'

'ಯಾಕೆ ಹಾಕಿದ್ದೆ ಬಾಗಿಲನ್ನ?'

'ಸೇಫ್ಟಿಗೆ ಸ್ವಾಮಿ.'

'ಹೆಂಡತಿ ಸೇಫ್ಟಿಗಾ?'

ಕೋರ್ಟ್ ಹಾಲಿನಲ್ಲಿ ನಗು.

'ಆದರ ಅವಶ್ಯಕತೆ ಅವಳಿಗಿಲ್ಲ ಸ್ವಾಮಿ.'

'ಏನಯ್ಯಾ ಹಾಗಂದರೆ?'

'ಅವಳು ಸತ್ತು ವರ್ಷದ ಮೇಲಾಯಿತು ಸ್ವಾಮಿ!'

'!!!'

■ ಎಚ್ಚೆಲ್ಕೆ

ಜಗವೆಂಬ ಜೈಲಿನಲಿ...

ಬೆಳಿಗ್ಗೆಯೇ ಸೂರ್ಯ ಕಾಣುವ ಮುಂಚೆ ಮೇಲೇಳುವ ಗಂಟಪ್ಪ ತನ್ನ ಹರಕು ಮುರುಕು ಮನೆಯಿಂದ ಹೊರಬರುವಷ್ಟರಲ್ಲಿ ಅವನ ಮುಂದೆ ರಾಮು ಬಂದು ನಿಲ್ಲಬೇಕು. ರಾಮು ಕೂಡ ಅಷ್ಟೆ, ತನ್ನ ಒಡೆಯ ಕಣ್ಣುಜ್ಜಿಕೊಳ್ಳುತ್ತಿರುವಾಗಲೇ ಓಡಿಹೋಗಿ ಮೈಮೇಲೆ ಬೀಳುತ್ತಿದ್ದ. ಇವರಿಬ್ಬರ ಬಾಂಧವ್ಯ ನೋಡಿ ಗಂಟಪ್ಪನ ಹೆಂಡತಿ ಲಕ್ಕವ್ವನಿಗೆ ಒಮ್ಮೊಮ್ಮೆ ನಗು ಒಮ್ಮೊಮ್ಮೆ ಕೋಪ. ಉಣುವಾಗಲೂ ಅವರಿಬ್ಬರ ಮಕ್ಕಳಾಟ ನೋಡಿ ನೋಡಿ ಬೇಸತ್ತಿದ್ದ ಆಕೆ ಒಮ್ಮೆ ಗಂಡ ಉಣ್ಣುವ ಮುನ್ನ ರಾಮುವನ್ನು ಮನೆಯಿಂದ ಹೊರಹಾಕಿ ಬಾಗಿಲು ಮುಚ್ಚಿದ್ದಳು. ಆ ದಿನ ರಾಮುವಿನ ಚೀರಾಟ ಗೋಳಾಟ ಕೇಳಲಾರದೆ ಅರ್ಧ ತಟ್ಟೆಗೆ ಕೈ ತೊಳೆದು ಗಂಟಪ್ಪ ಹೊರಟೇಬಿಟ್ಟಿದ್ದ. ಅವಾಗಿನಿಂದ ಅವರಿಬ್ಬರನ್ನು ಬೇರೆ ಮಾಡಿದ್ದೇ ಇಲ್ಲ, ಇಬ್ಬರದೂ ಅಕ್ಕಪಕ್ಕವೇ ಊಟ.

ಅಂದಹಾಗೆ ರಾಮು ಎಂದು ಕರೆಸಿಕೊಳ್ಳುವ ಆ ನಾಯಿ ಗಂಟಪ್ಪನಿಗೆ ಪರಿಚಯವಾದ ಸನ್ನಿವೇಶ ಬಹಳ ಕುತೂಹಲವಾಗಿದೆ. ಚಳಿಗಾಲ ಬಂತೆಂದರೆ ಊರಹೊರಗಿನ ಕಾಡಿಗೆ ತೆರಳಿ ನಾಡಬಾಂಬಿಗೆ ಮಾಂಸ ಸುತ್ತಿಟ್ಟು ಬರುವುದು ಸರ್ವೇಸಾಮಾನ್ಯ. ಅಡವಿ ಹಂದಿಯ ಮಾಂಸ ತಿಂದವನೇ ಜಾಣ. ಅದನ್ನು ಬೇಟೆಯಾಡಿ ತರುವ ಕೆಲಸ ಸಾಮಾನ್ಯವೇ? ಕೆಲವರಿಗೆ ಅದು ತೀರ ಸುಲಭ. ಅಂತಹ ಗುಂಪಿನಲ್ಲೊಬ್ಬ ಗಂಟಪ್ಪ. ಕೆಲವು ವರ್ಷಗಳ ಹಿಂದೆ ಹೀಗೆ ಬಾಂಬಿಟ್ಟು ಅದು ಸಿಡಿದ ಸದ್ದು ಕೇಳಿ ಕಾಡಿಗೆ ಹೊರಟ ಗುಂಪಿಗೆ ಆಶ್ಚರ್ಯ ಕಾದಿತ್ತು, ಬಾಂಬು ಸಿಡಿದಿತ್ತು ಆದರೆ ಹಂದಿ ಬಿದ್ದಿರಲಿಲ್ಲ, ತಮ್ಮೊಡನೆ ಇದ್ದ ನಾಯಿಗಳು ತಮ್ಮ ಕುತ್ತಿಗೆಯ ಸುತ್ತ ಬಿಗಿದಿದ್ದ ಚೂಪು ಮೊಳೆಗಳ ಸರದ ಧೈರ್ಯದಿಂದ ಮೂಸಿಕೊಂಡು ಪೊದೆಯ ಬಳಿ ಬೊಗಳಲಾರಂಭಿಸಿದವು. ಪೊದೆ ಅಲ್ಲಾಡಿತು. ಗಾಯಗೊಂಡ ಮಿಕದ ಸುಳಿವು ಸಿಕ್ಕಿ ಗಂಟಪ್ಪನ ಗುಂಪು "ಹಿಡಿರ್ಲಾ" ಎಂದೊಡನೆ ಪೊದೆಯೊಳಗೆ ನೆಗೆದ ನಾಲ್ಕು ಚಿರತೆಯಂತಹ ನಾಯಿಗಳನ್ನು ಗುದ್ದಿಕೊಂಡು ಹೊರಬಂದ ಅಡವಿ ಹಂದಿ ಇನ್ನೇನು ಗಂಟಪ್ಪನ ತರುಡು ಬೀಜವನ್ನು ಚಿಟ್ನಿ ಮಾಡುವಷ್ಟರಲ್ಲಿ ಚಂಗನೆ ಮಿಂಚಿನಂತೆ ಬಂದ ಒಂದು ನಾಯಿ ಹಂದಿಯ ಕುತ್ತಿಗೆಗೆ ಬಾಯಿ ಹಾಕಿ ಕೆಡವಿತ್ತು. ಅದು ನೆಲಕ್ಕೆ ಬಿದ್ದೊಡನೆ ಗುಂಪು ತಮ್ಮ ಆಯುಧಗಳಿಂದ ಹಂದಿಯ ಹೊಟ್ಟೆ ತೊಡೆಗಳನ್ನು ಸೀಳಿತ್ತು. ಆ ಹಂದಿ ಘರ್ಜಿಸುತ್ತಲೇ ಪ್ರಾಣ ಬಿಟ್ಟಿತ್ತು. ಆದರೆ ನಾಯಿ ಮಿಕದ ಕುತ್ತಿಗೆಯನ್ನು ಬಿಟ್ಟಿರಲೇ ಇಲ್ಲ. ಅಷ್ಟರಲ್ಲಿ ತನ್ನ ಪ್ರಾಣ ಕಾಪಾಡಿದ ನಾಯಿಯ ತಲೆ ಸವರಿದ ಗಂಟಪ್ಪನಿಗೆ ಮತ್ತು ಗುಂಪಿಗೆ ಅತ್ಯಾಶ್ಚರ್ಯ ಕಾದಿತ್ತು: ನಾಯಿಯ ಕುತ್ತಿಗೆಯಲ್ಲಿ ಮೊಳೆಗಳ ಸರವೇ ಇರಲಿಲ್ಲ! ಇತರ ನಾಯಿಗಳ ಕಡೆ ನೋಡಿದರು. ಅವುಗಳು ನೆಲದಲ್ಲಿ ಬಿದ್ದು ಕುಂಯ್‌ಗುಡುತ್ತಿದ್ದವು. ಇದೆಲ್ಲಿಂದ ಬಂದ ನಾಯಿ ಎಂದು ಎಲ್ಲರೂ ತಲೆಕೆಡಿಸಿಕೊಂಡಾಗ ತಾನು ಒಂದೆರಡು ಬಾರಿ ಎಂಜಲನ್ನ ಹಾಕಿದ್ದ ಬೀದಿ ನಾಯಿಯೆಂದು ತಿಳಿದು ಅಂದಿನಿಂದ ಗಂಟಪ್ಪನೇ ಸಾಕಿಕೊಂಡಿದ್ದ.

ಅಂದು ಗಂಟಪ್ಪ ಕಣ್ಣುಜ್ಜಿಕೊಂಡು ಹೊರಬಂದರೂ ರಾಮು ಮುಂದೆ ಬಂದು ನಿಲ್ಲಲೇ ಇಲ್ಲ. ಗಂಟಪ್ಪ ಮುಂದೆ ಬಂದು ದಾರಿ ಹಿಡಿದು ಕೇರಿಯ ಜನರೆಲ್ಲರನ್ನು ವಿಚಾರಿಸುತ್ತಾ ನಡೆದ. "ರಾಮಣ್ಣ ನಮ್ ರಾಮು ನೋಡಿದ್ಯಾ? ಕೆಂಗಣ್ಣ ನಮ್ ರಾಮೂನ ಕಂಡ್ಯಾ?" ಎಂದು ದಾರಿ ಹಿಡಿದು ಹೊರಟ ಗಂಟಪ್ಪನಿಗೆ ಕೇರಿ ಬಿಟ್ಟು ಬಹಳ ದೂರದಲ್ಲಿ ತನ್ನ ಧಣಿ ಬೋರೇಗೌಡನ ತೋಟದ ಪಂಪ್ ಸೆಟ್ ಮನೆಯ ಬಳಿ ರಾಮು ನಿಂತಿರುವಂತೆ ಕಂಡಿತು. ನಂತರ ಸ್ವಲ್ಪ ಹೊತ್ತಿನಲ್ಲೇ ಮಾಯವಾಯಿತು. ಕಾತರದಿಂದ ಅಲ್ಲಿಗೆ ಹೊರಟ ಗಂಟಪ್ಪ ದೂರದಿಂದಲೇ "ರಾಮೂ ರಾಮೂ" ಎಂದು ಕೂಗುತ್ತಾ ಹೊರಟ. ಕೆಲ ಹೊತ್ತಿನಲ್ಲಿಯೇ ರಾಮು ಪಂಪ್‌ಸೆಟ್ ಮನೆಯ ಹಿಂದಿನಿಂದ ಬಾಲ ಅಲ್ಲಾಡಿಸಿಕೊಂಡು ಕುಂಯ್‌ಗುಡುತ್ತ ಹೊರಬಂದ. ಕೋಪದಿಂದಲೇ ಗಂಟಪ್ಪ "ಎಲ್ಲೋಗಿದ್ಲ ಈಟೊತ್ತು? ಒಂದ್ ಸಟಗು ನನ್ನ ಬುಟ್ಟಿರದೋನು ಇಲ್ಲಿಗಂಟ ಬಂದಿದ್ದಿ ಅಂದ್ರೆ ಏನೋ ಸಮಾಚಾರ ಐತೆ" ಎನ್ನುತ್ತಾ ಮನೆ ದಾರಿ ಕಡೆ ತಿರುಗಿ ಒಂದೆರಡು ಹೆಜ್ಜೆ ಹಾಕಿದ. ಆದರೆ ರಾಮು ಅವನ ಹಿಂದೆ ಬರದೆ ಕುಂಯ್‌ಗುಡುತ್ತಾ ಅಲ್ಲೇ ಕುಳಿತದ್ದನ್ನು ಕಂಡು ಸಂಶಯ ಬಂದು 'ಎಲಾ ಇವನ' ಎಂದು ಪಂಪ್‌ಸೆಟ್ ಮನೆಯ ಸುತ್ತಾ ಒಂದು ಸುತ್ತು ಬರಲು ಹೊರಟಾಗ ಅಲ್ಲೇ ಬಾವಿಯ ಹತ್ತಿರ ಗೌಡರ ಮನೆಯ ಹೆಣ್ಣು ನಾಯಿ ರಜನಿ ಮೈಮೇಲೆಲ್ಲ ಕೂದಲು ಬಿಟ್ಟುಕೊಂಡು ನಾಲಿಗೆ ಹೊರಹಾಕಿ ಕುಳಿತಿರುವುದನ್ನು ಕಂಡು ಬೆಚ್ಚಿದ. ಗಾಬರಿಗೊಂಡ ಗಂಟಪ್ಪ ಬೆವರುತ್ತಾ, ಬೆವರನ್ನು ಚೌಕದಿಂದ ಒರೆಸಿಕೊಳ್ಳುತ್ತಾ ರಾಮುವನ್ನು ಉದ್ದೇಶಿಸಿ ಮೆಲುದನಿಯಲ್ಲಿ "ಅಯ್ಯೋ ಬಡ್ಕೊತ್ತದೆ, ಇದು ಗೌಡ್ರ ರಜನಿ ಅಲ್ವೇನ್ಲಾ? ಮುಟ್ಠಾಳ ನನ್ನ ಮಗನೇ, ಗೌಡ್ರುಗೆ ಗೊತ್ತಾದ್ರೆ ಬುಟ್ಟಾರೇನ್ಲಾ? ಕೊಂದೇ ಹಾಕ್ತಾರೆ ಮಗನೆ ನಿನ್ನ, ಸುಮ್ಕೆ ನಡೀ ನಂಜೊತೆ" ಎಂದು ಗಂಟಪ್ಪ ಮನೆ ಕಡೆ ದಾರಿ ಹಿಡಿದ. ಆದರೆ ಅಲ್ಲೇ ಕುಳಿತಿದ್ದ ರಾಮು ಒಡೆಯನ ಕಡೆ ಮತ್ತು ರಜನಿಯ ಕಡೆ ಪದೇ ಪದೇ ತಿರುಗಿ ನೋಡಿ ಸ್ವಲ್ಪ ಹೊತ್ತಾದ ಬಳಿಕ ಬೇರೆ ದಾರಿ ಇಲ್ಲದೆ, ಮುತ್ತು ಕೊಡೋಳು ಬಂದಾಗ ತುತ್ತು ಕೊಟ್ಟವರ ಮರೆಯದೆ ಎದ್ದು ಒಡೆಯನ ಹಿಂದೆ ಹೊರಟ. ಬೇಡವೆಂದರೂ ಬರುವ ಚಳಿಗಾಲಕ್ಕೆ ಶಾಪವಿಕ್ಕುತ್ತಾ ರಜನಿ ರಾಮುವನ್ನು ನೋಡುತ್ತಲೇ ಕುಳಿತಿದ್ದಳು. "ನಿಂಗೆ ಮುದ್ದು ಜಾಸ್ತಿ ಆಯ್ತು ಕಣ್ಲಾ, ಮನೆ ನಾಯಿ ತರ ನೋಡ್ಕಳ್ದಿ ಮನೆ ಮಗಂತರ ನೋಡ್ಕಂಡಿದಿವಲ್ಲ ಅದುಕ್ಕೆ ನಿಂಗೆ ತಿಕ ಅಟ್ಟಕ್ಕೆ ಹೋಗದೆ. ನನ್ ಬುಟ್ಟು ಒಂದ್ ಮಾರ್ ದೂರ ಒಗದೇ ಇರೋನು ಇವತ್ ಇಷ್ಟ್ ದೂರ ಬಂದಿದ್ದೀ ಅಂದ್ರೆ ಏಟ್ ದಿನದಿಂದ ನಡೆದಿರ್ಬೇಕು ನಿನ್ನೀ ಹಲ್ಕಾ ಕೆಲ್ಸ" ಎನ್ನುತ್ತಾ ಮನೆ ತಲುಪುವವರೆಗೆ ರಾಮುವಿಗೆ ಬೈಯುತ್ತಲೇ ಬಂದ ಗಂಟಪ್ಪ.



ಕೇರಿ ಜನಕ್ಕೆಲ್ಲ ಆಶ್ಚರ್ಯ! ಎಂದೂ ತನ್ನ ನಾಯಿಗೆ ತುಟಕ್‌ಪಿಟಕ್ ಎನ್ನದ, ಅದಕ್ಕಾಗಿ ಕೇರಿಯವರೊಡನೆ ಕೈ ಮಿಲಾಯಿಸಲು ಹೇಸದ ಗಂಟಪ್ಪನನ್ನು ಇಂದು ಈ ರೀತಿ ನೋಡಿ ದಾರಿ ಉದ್ದಕ್ಕು ಪ್ರಶ್ನೆ ಮೇಲೆ ಪ್ರಶ್ನೆ ಕೇಳಿ ಆತನಿಂದ "ನಾಯಿ ಮುಂಡೇತ್ತವು, ನಮ್ ಪ್ರಾಣ ತಿಂತವೆ" ಎಂಬ ಉತ್ತರ ಕೇಳಿ ಬೇಸ್ತು ಬಿದ್ದು ಸುಮ್ಮನಾದರು. ಸಂಗ್ಯಾ ಮತ್ತು ಬಾಳ್ಯನಂತಿದ್ದ ಇವರಿಬ್ಬರಿಗೆ ಏನಾಗಿದೆ ಎಂಬುದೇ ಕೇರಿಯಲ್ಲಿನ ಹೊಸ ಪತ್ತೇದಾರಿ ಸುದ್ದಿಯಾಯಿತು.

ಗುಡಿಸಲ ಮುಂದೆ ಒಲೆಯ ಬೂದಿಯಿಂದ ಪಾತ್ರೆ ತೊಳೆಯುತ್ತಿದ್ದ ಲಕ್ಕಮ್ಮ "ಅಸಿಸಿ ಅದೇನ್ ಹಂಗೆ ಒಬ್ಬೊಬ್ನೆ ಬೈಕಂಡ್ ಬತ್ತಾ ಇದ್ದೀಯೆ? ಬೆಳಗೆ ಬೆಳ್ಗೇನೇ ಜಗಳ ತಕಂಡ್ ಬಂದೇನಪ್ಪ ಪುಣ್ಯಾತ್ಮ" ಎಂದಳು. ಅದಕ್ಕೆ ರೇಗುತ್ತಲೇ ಗಂಟಪ್ಪ "ಹೂಂ ಕಣಮ್ಮಿ ನಿಂಗದೇ ಗ್ಯಾನ. ನಾನೇನಾರ ಜೋರಾಗಿ ಮಾತಾಡುದ್ರೆ ನಿಂಗೆ ಜಗಳ ಅನಸ್ತದೆ ಬುಡು" ಎಂದು ಅವಳನ್ನು ಮನೆಯೊಳಗಡೆ ಕರೆದುಕೊಂಡು ಹೋದವನು ಗುಟ್ಟಾಗಿ ನಡೆದದ್ದೆಲ್ಲವನ್ನೂ ಹೇಳಿದ. ಅದನ್ನು ಕೇಳಿ ನಕ್ಕ ಲಕ್ಕಮ್ಮ "ಥೂ ನಿನ್ನ ಮುಖಕ್ಕಿಷ್ಟು ಬೆಂಕಿ ಹಾಕ. ರಾತ್ರಿ ಚಳಿ ಅಂತ ಉಸಿರಾಡದಂಗೆ ಗಟ್ಟಿಯಾಗಿ ಅಮಿಕಂಡು ಹಿಂಸೆ ಕೊಡ್ತಿ, ಪಾಪ ಅದಕ್ಕೆ ಮಾತ್ರ ಬ್ಯಾಡ ಅಂತೀಯ? ನಿಂಗಾದ್ರೆ ಒಂದ್ ನ್ಯಾಯ ಅದುನಿಗಾದ್ರೆ ಒಂದ್ ನ್ಯಾಯ್ವೇನು?" ಎಂದು ಹೊರಬಂದು ಪಾತ್ರೆ ತೊಳೆಯಲು ಕುಂತಳು. ಅದಕ್ಕೆ ನಯವಾಗೇ ಉತ್ತರಿಸಿದ ಗಂಟಪ್ಪ "ಅಮ್ಮಿ ನಿಂಗೆ ತಮಾಷೆ ಯಾವಾಗ, ಗಂಭೀರ ಯಾವಾಗ ಅನ್ನಾದು ತಿಳಿಯಾಕಿಲ್ಲ ನೋಡು. ಒಸಿ ಮೆತ್ತಗೆ ಮಾತಾಡು" ಎಂದು ಹೇಳಿ ಆ ಕಡೆ ಈ ಕಡೆ ಕಣ್ಣಾಡಿಸಿದ. ಲಕ್ಕವ್ವನ ಬಾಯಿ ನಿಲ್ಲಲಿಲ್ಲ, ಓಡಿ ಹೋಗಿ ಅವಳ ಬಾಯಿ ಮುಚ್ಚಿ "ಸ್ವಲ್ಪೊತ್ತು ಅಮಿಕಂಡು ಕುಂತ್ಕೊ" ಎಂದು ಒಳನಡೆದ. ಅವನ ಮನದಲ್ಲಿ ಕಳೆದ ಸಂಕ್ರಾಂತಿ ಹಬ್ಬದಂದು ಗೌಡ ತಿಳಿಸಿದ್ದ ಸುದ್ದಿಯೇ ಕೊರೆಯುತ್ತಿತ್ತು.

ಗಂಟಪ್ಪ ಬೋರೆಗೌಡನ ಕೊಟಗೆಯ ಕೆಲಸದಾಳು. ಅಂದು ಎಂದಿನಂತೆ ಕೆಲಸ ಮುಗಿಸಿ ತೋಟದ ಕಡೆ ಹೋದ. ಗೌಡರು ಬಂದಿರುವುದು ತಿಳಿದು ಬೆನ್ನು ತಾನಾಗಿಯೇ ಬಾಗಿತು, ಕೈಗಳು ಮಡಚಿಕೊಂಡವು, ಕಾಲುಗಳು ಮೆಲ್ಲನೆ ಒಡಲಾರಂಭಿಸಿದವು. ಜಿಂಕೆಯನ್ನು ಕಂಡ ಹೆಬ್ಬುಲಿಯಂತೆ. ಆದರೆ ಅದು ಬೇಟೆಯಾಡಲು, ಇದು ಬೇಟೆಯಾಡಿಸಿಕೊಳ್ಳಲೂ ಅಷ್ಟೇ ವ್ಯತ್ಯಾಸ. ಅಷ್ಟೊತ್ತಿಗಾ ಗಲೇ ಬೇರೆ ಆಳುಗಳು ತೋಟದಲ್ಲಿ ಬಿದ್ದಿದ್ದ ತೆಂಗಿನಗರಿಗಳನ್ನು ಆರಿಸಿ ಒಂದು ಕಡೆ ಹಾಕುತ್ತಿದ್ದರು. ಚೇರಿನ ಮೇಲೆ ಕುಳಿತುಕೊಂಡಿದ್ದ ಬೋರೆಗೌಡನ ಮೀಸೆ ನೆಲ ನೋಡುತ್ತಿದ್ದದ್ದನ್ನು, ಕೈಯಲ್ಲಿ ಪೇಪರ್ ಇದ್ದದ್ದನ್ನು ಗಮನಿಸಿದ ಗಂಟಪ್ಪ ಇಂದು ಪ್ಯಾಟೆಗೆ ಪ್ರಯಾಣವಿದೆ ಎಂದು ಮನಸಿನಲ್ಲೇ ಎಣಿಸಿದನು. ಗಂಟಪ್ಪನನ್ನು ಗಮನಿಸಿದ ಗೌಡ ಅವನನ್ನು ಕರೆದಾಗ ಬೆನ್ನು, ಕೈ, ಕಾಲುಗಳು ಗರಿಷ್ಠ ನಿಷ್ಠೆಯನ್ನು ಪಡೆದುಕೊಂಡವು. "ಇದೇನ್ಲಾ ಗಂಟೆ ಚಳಿ ಅಂತ ಮನಿಕ್ಕಂಡಿದ್ದಾ?" ಎಂದು ಗೌಡ ಕೇಳಿದ. ಬರುಬರುತ್ತಲೇ ತಲೆಕೆರೆದುಕೊಂಡು ಬಂದ ಗಂಟಪ್ಪ ಗೌಡನಿಂದ ಒಂದೆರಡು ಮಾರು ದೂರದಲ್ಲಿ ನಿಂತು ಈ ಪ್ರಶ್ನೆಯನ್ನು ಮೊದಲೇ ಊಹಿಸಿ ಉತ್ತರ ಹುಡುಕಿಕೊಂಡವನಂತೆ "ಹಂಗೇನಿಲ್ಲ ಬುದ್ಧಿ, ಕೊಟಗೆಗೆ ಹೋಗಿ ಇಲ್ಲಿ ಬಂದೆ" ಎಂದ. "ಹೊತ್ತುಂಟೆ ಕೊಟಗೆಗೆ ಒಗ್ಬೇಕು ಕಣ್ಲಾ, ಮನೆ ಹೆಣ್ಮಕ್ಳು ಕಣ್ಣು ಬುಡೋಪ್ಪ್ರಲ್ಲಿ ನಿನ್ನ ಕೆಲಸ ಮುಗ್ದಿರಬೇಕು. ಮೈ ಮುಟ್ಟಲ್ಲಾಂತ ಕೊಬ್ಬೇನ್ಲ ಗಂಟೆ" ಎಂದ ಬೋರೇಗೌಡನ ಮಾತಿಗೆ ಹಲ್ಲುಗಿಂಜಿದ ಗಂಟಪ್ಪ "ಹಂಗೇನಿಲ್ಲ ಬುದ್ಧಿ, ನನ್ನೆದ್ದಿ ಮೈ ಹುಷಾರಿತ್ತಿಲ್ಲ, ಅಂಗ್ಡಿಗೋಗಿ ಮಾತ್ರೆ ಕೊಟ್ಟು ಬರೋಪ್ಪ್ರಲ್ಲಿ ತಡವಾಯ್ತು. ಇನ್ಮೊಂದ್ಕಿತಾ ಹಂಗೆ ಮಾಡಕ್ಕಿಲ್ಲೇಳಿ" ಎಂದು ಪಕ್ಕದಲ್ಲೆ ಬಿದ್ದಿದ್ದ ತೆಂಗಿನ ಗರಿಯನ್ನು ಎಳೆದುಕೊಂಡು ಹೊರಟ. ಅಷ್ಟರಲ್ಲಿ ಗಂಟಪ್ಪನನ್ನು ಕರೆದ ಗೌಡ ತನ್ನ ಎಡಗಾಲನ್ನು ಬಲಗಾಲ ಮೇಲಿಡುತ್ತ "ನಿನ್ನೆ ರಾತ್ರಿ ಕೋರೆ ಮುಳ್ಳು ತುಳಿದು ಅದು ಒಳಗೇ ಮುರುಕಂಡಿರಂಗೈತೆ. ಒಸಿ ತೆಗಿಲಾ ಗಂಟೆ" ಎಂದ. ಈ ಅನಿರೀಕ್ಷಿತ ವೈದ್ಯಗಿರಿಗೆ ಉಬ್ಬಿಹೋದ ಗಂಟಪ್ಪ ಗೌಡರ ಬಳಿ ಬಂದು ಕೆಳಗೆ ಕುಳಿತವನೇ ಪಾದವನ್ನು ತನ್ನ ಚೌಕದಿಂದ ಚನ್ನಾಗಿ ಒರೆಸಿ ಗೌಡರು ಬೆರಳಿರಿಸಿದ್ದ ಜಾಗದಲ್ಲಿ ತನ್ನ ಎಂಜಲು ಸವರಿ ಮುಳ್ಳನ್ನು ಶೋಧಿಸಲು ಯತ್ನಿಸಿದ. ಹೊಲೆಮಾದಿಗರ ಕೇರಿಯವರಲ್ಲಿ ಬೋರೆಗೌಡನನ್ನು ಮುಟ್ಟಿಸಿಕೊಳ್ಳಲು ಎಲ್ಲರೂ ಹೆದರುತಿದ್ದರು. ಆದರೆ ಇಂದು ಗೌಡನೇ ಅಪ್ಪಣೆ ನೀಡಿದ್ದ. ಇದು ಗಂಟಪ್ಪನನ್ನು ಸಹಜವಾಗಿ ಉಬ್ಬುವಂತೆ ಮಾಡಿತ್ತು.

"ಹ್ಞಾಂ ಅಲ್ಲೇ ಇರಾದು ನೋಡ್ಲಾ" ಜುಂ ಎಂದವನಂತೆ ಗೌಡ ತನ್ನ ಕಾಲನ್ನು ಅಲುಗಾಡಿಸಿದ.

"ಆಯ್ತು ಬುದ್ಧೀ" ಎಂದ ಗಂಟಪ್ಪ ತನ್ನ ಉಡುದಾರದಲ್ಲಿದ್ದ ಬಟ್ಟೆ ಪಿನ್ನುಗಳ ಗುಂಪಿನಿಂದ ಒಂದನ್ನು ತೆಗೆದು ಅದು ಚೂಪಾಗಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ಮುಳ್ಳಿನ ಸುತ್ತಲಿನ ಪಾದದ ಚರ್ಮವನ್ನು ಸಡಿಲವಾಗಿಸಿದ. ಚರ್ಮವನ್ನು ಎರಡು ಬೆರಳಿಂದ ಹಿಡಿದ ಗಂಟಪ್ಪ ಮುಳ್ಳನ್ನು ಹೊರತೆಗೆದು ತಕ್ಷಣ ರಕ್ತ ಬಂದ ಕಡೆ ತನ್ನ ಉಗುಳನ್ನು ಸವರಿ ಎಕ್ಕದ ಎಲೆಯ ಹಾಲನ್ನು ತಂದು ಹಾಕಿದ. ಚಿಕಿತ್ಸೆ ಒಂದು ಹಂತಕ್ಕೆ ಮುಗಿಯಿತು. ತನ್ನ ಪಾದವನ್ನು ತಾನೇ ನೋಡಿಕೊಂಡ ಗೌಡ ನಿಂತು ನಡೆದಾಡಿ "ಈಗ ನೋಯ್ತಿಲ್ಲ ಕಣ್ಲಾ, ಮುಳ್ಳು ತೆಗೆದಿದ್ದ ಶಭಾಷ್" ಎಂದ. ಚೌಕವನ್ನು ಸೊಂಟಕ್ಕೆ ... ಗಂಟಪ್ಪ ಮತ್ತೆ ತೆಂಗಿನ ಗರಿ ಆರಿಸಲು ಹೊರ... ಗದರಿದ ಗೌಡ "ಲೋ ಗಂಟೆ. ಕೊಟಗೆಗೋ... ತರೋಗ್ಲಾ, ಕಾಲ್ಮುಟ್ಟಿ ಹಂಗೆ ಹೋಯ್ತಾಯಲ್ಲೋ ..." ಎಂದದಕ್ಕೆ, ಓಡಿ ಹೋಗಿ ತೋಟದಲ್ಲಿಯೇ ... ಗ್ಯಾಸಿಗೆಂದು ಇಟ್ಟಿದ್ದ ಗಂಜಲವನ್ನು ತಂದು ಗೌ... ಸುರುವಿ ನಮಸ್ಕಾರ ಮಾಡಿಕೊಂಡ. ಮೆಲ್ಲಗೆ ... ಬೋರೇಗೌಡ ಚೇರಿನ ಮೇಲೆ ಕುಳಿತು ಕೈಯಲ್ಲಿ ... ಹಿಡಿದು "ಇಲ್ನೋಡ್ಲಾ ಗಂಟೆ. ದಲಿತರು ಗಂ... ಸಾಕುವಂತಿಲ್ಲ" ಎಂಬ ಸುದ್ದಿಯನ್ನು ಹೇಳಿದ... ಗಂಟಪ್ಪನಿಗೆ ಒಂದೂ ಅರ್ಥವಾಗಲಿಲ್ಲ.

"ದಲಿತರು ಅಂದ್ರೆ ಯಾರಂತ ಗೊತ್ತೇನ್ಲಾ..."

"ಇಲ್ಲ ಬುದ್ಧಿ, ಅದೆಲ್ಲ ನಮ್ಗೆ ತಿಳಿತದಾ?..."

"ದಲಿತರು ಅಂದ್ರೆ ನೀವೆ ಕಣ್ಲಾ, ಹೊಲೆ ಮ..."

"ಸರಿ ಬುದ್ಧಿ."

"ನೀವು ತುಮ್ಕೂರಲ್ಲಿ ಗಂಡು ನಾಯಿಗಳ... ಗೊತ್ತಾ? ಹಂಗಂತ ಅಲ್ಲಿನ ಪಂಚಾಯ್ತಿ ಮ... ತೀರ್ಮಾನ ಕೊಟ್ಟವ್ರೆ. ಆದ್ರೆ ಇಲ್ಲಿ ನೋಡು ನಿನ್ನ ಕಾಲು ಮುಟ್ಟುಸ್ಕೊತ್ತೀವಿ. ಪುಣ್ಯ ಮಾಡಿದ್ದಿ ಬ..."

"ಅದ್ಯಾಕಂಗೆ ಬುದ್ಧಿ?"

"ಲೋ.. ನೀವು ಗಂಡು ನಾಯಿ ಸಾಕಿ ಅದು ಕುಲಸ್ತರ ಮನೆ ಹೆಣ್ಣು ನಾಯೀನ ಮಾಡುದ್ರೆ ಆಗಕ್ಕಿಲ್ವೇನ್ಲಾ?"

"ಹೂ ಬುದ್ಧಿ ಆಯ್ತದೆ."

"ಅದುಕ್ಕೆ ನೀವು ಗಂಡು ನಾಯಿನ್ನ ಸಾಕಂಗಿಲ್ಲ ಮಾಡವ್ರೆ."

"ಸರಿ ಬುದ್ಧಿ" ಎಂದು ಗಂಟಪ್ಪ ತೆಂಗಿನ ಗರಿ... ಹೊರಟಿದ್ದ.

ಲಕ್ಕಮ್ಮ ಅವನ ಮುಂದೆ ಎರಡು ಇದ್ದಿಲು... ತುಂಬ ನೀರು ತಂದು ಕುಕ್ಕಿದಳು. "ಅದೇನು ಮು... ಹಂಗೆ ಮುಖಾ ಮಾಡ್ಕಂಡಿದ್ದಿ. ಅದೇನಂತ ... ಗಕ್ಕಿಲವಾ" ಎಂದಳು. ಗಂಟಪ್ಪ ಪೇಪರಿನಲ್ಲಿ ಗೌ... ಹೇಳಿದ್ದನ್ನು ಅವಳಿಗೂ ಹೇಳಿದ. ಮೂತಿ ... ಮಾತಿಗಿಳಿದ ಲಕ್ಕಮ್ಮ "ಸರಿ ಹೋಯ್ತು ಬುಡು ... ಇದ್ದ ಕಟ್ಟು ಪಾಡು ಈಗ ನಾಯಿಗಳಿಗೂ ... ಅದುಕ್ಕೆ ರಾಮುಗೆ ಬೈಕಂಡು ಬಂದೆ ಅನ್ನು... ಬರೋರ್ಗೇ ಅದು ತಿಳಿಯಾಕಿಲ್ಲ ಅಂದ ಮ್ಯಾ... ನಮ್ ರಾಮುಗೆ ತಿಳಿಯಾದೆಂಗೆ. ಸಿಕ್ಕ ಸಿಕ್ಕ ಹೆಣ್ಣ... ಹಿಡಿವಾಗ ನಿಮ್ಮ ಗೌಡಂಗೆ ಇದು ಗೊತ್ತಿಯಾ..." ಎಂದು ಮುಂಗೈಯಿಂದ ಹಣೆ ಒರೆಸಿಕೊಂಡ... ಕೈಯಲ್ಲಿನ ತೆಂಗಿನ ನಾರಿಗೆ ಬೂದಿ ಹಚ್ಚಿ ಪಾತ್ರೆ ... ಸುರುವಿಟ್ಟಳು.

"ಹೋಗಿ ಹೋಗಿ ನಿಂಗೆ ಹೇಳ್ತೀನಲ್ಲ" ಎಂದ... ಗುಡಿಸಲ ಒಳ ಹೋಗಿ ರಾಮುವನ್ನು ಕಟ್ಟಿಹಾಕ... ಹುಡುಕಲಾರಂಭಿಸಿದ. ಹೊರಗೆ ಕುಳಿತಿದ್ದ ರಾ... ಒಡೆಯ ಒಳಗೆ ಹೋದ ತಕ್ಷಣ ತನ್ನನ್ನು ಕಟ್ಟ... ಹಗ್ಗ ಹುಡುಕುತ್ತಿದ್ದಾನೆ ಎಂದು ತಿಳಿದೂ ಅವನ ... ಅಲೆಯುತಿದ್ದ. "ಏಯ್ ಜಾಗ ಬುಡ್ಲಾ!" ಎಂದ...

...ಪ್ಪನ ದನಿಯನ್ನು ಕೇಳಿ ಲಕ್ಕಮ್ಮ
...ತಿದ್ದಳು. ಅಂತೂ ಇಂತೂ ತನ್ನ
...ಎಂದೂ ಕುತ್ತಿಗೆಗೆ ಹಗ್ಗ ಬಿಗಿಸಿಕೊಳ್ಳದ
...ಅಂತರ್ಜಾತಿ ಪ್ರೇಮಾಂಕುರದಿಂದಾಗಿ
...ನ್ನು ಮುಂದೆ ರಾಮುವನ್ನು ಗೌಡರ
...ಮ ಹೋಗಲಾರೆ ಎಂದು ಶಪಥ
...ನ್ನು ಕಂಡು ನಕ್ಕ ಲಕ್ಕಮ್ಮನನ್ನು
...ದ ಗಂಟಪ್ಪ ರಾಮುವನ್ನು ಕಟ್ಟಿ
...ಲಸಕ್ಕೆ ಹೋಗಿ ಬತ್ತೀನಿ ಹೊಟ್ಟೆಗೆ
... ಎಂದು ಗೌಡರ ತೋಟದ ಕಡೆ

...ಪ್ಪಕ್ಕೆ ಲಕ್ಕಮ್ಮನನ್ನು ಮದುವೆಯಾಗಿ
...ತ್ತದೆ. ಇಬ್ಬರಿಗೂ ಹಿಂದುಮುಂದು
...ರೂ ಇಲ್ಲ. ಮದುವೆಯಾದವನೇ
... ಸ್ನೇಹಿತರೊಂದಿಗೆ ಇಲ್ಲಿಗೆ ಬಂದು
...ಸ ಮಾಡುತ್ತಿದ್ದ ಹಲವು ಸ್ನೇಹಿತರು
...ನಂತರ ಬೇರೆ ಊರುಗಳಿಗೆ ಕೆಲಸಕ್ಕೆ
...ಟಪ್ಪ ಮಾತ್ರ ಹೋಗಲಿಲ್ಲ. ಅದರ
... ಕೂಡ ಮಾಡಿರಲಿಲ್ಲ. ಇದ್ದದ್ದರಲ್ಲೆ
...ನ್ನುವುದಕ್ಕಿಂತ ಅದಕ್ಕೆ ಕಟ್ಟುಬಿದ್ದು
...ದ್ದ. ಇವನನ್ನೇ ನೋಡಿ ಹಾಸಿಗೆ
... ಚಾಚು ಎಂಬ ಗಾದೆ
... ಎಂಬ ಅನುಮಾನ ಕೇರಿಯವರಿಗೆ.
...ಹೆಂಡತಿಯನ್ನು ಕೆಲಸಕ್ಕೆ ಕಳಿಸಿದವನಲ್ಲ.
...ಸ ಬಿಟ್ಟು ಆಗಾಗ ಸೌದೆಗೆ
... ಆದರೇನು ಮಾಡುವುದು ಆ
...ಗೌಡನಿಗೇ ಧಾರೆಯೆರೆಯಬೇಕು.
... ಕೊಡುವವನಲ್ಲ. ಕೊಡುವುದರಲ್ಲೇ
... ಗೌಡ ಏನೇ ಕೆಲಸವೇಳಿದರೂ
... ಭಯಭಕ್ತಿಯಿಂದ ಮಾಡುತ್ತಿದ್ದ.
... ಗೌಡರಿಗೆ ಅವರ ಮನೆ ನಾಯಿಯ
... ಎಲ್ಲ ಕೂಲಿಯಾಳುಗಳನ್ನೂ
...ರೆಗೌಡ ಗಂಟಪ್ಪನಿಗೆ ಮಾತ್ರ
...ರಲಿಲ್ಲ. ಆಗಾಗ ಹೆಚ್ಚೆಚ್ಚು ಸೇರು
... ಉಂಟು. ಅದಕ್ಕೆ ತಕ್ಕಂತೆ ಆಗಾಗ
...ಂದ ಮಾಂಸ ಗೌಡನಿಗೆ ಗಂಟಪ್ಪನ
...

...ಣದಂತೆ ಸಂದಿಗುಂದಿಗಳಲ್ಲಿ ತೂರಿ
...ಟಿಗೆಗೆ ಬರುವಷ್ಟರಲ್ಲಿ ದನಗಳು
... ನೋಡುತ್ತಿದ್ದವು. ನಿನ್ನೆಯದನ್ನೆ
...ಗೌಡನ ಹೆಂಡತಿ ಸುಬ್ಬಮ್ಮ ಹಿತ್ತಲ
...ಹೊರುತ್ತಿದ್ದಳು.
... ಅದುಕ್ಕೆ ಮಾತ್ರ ತಗಂಡು
...ಯ್ತು ಕಣವ್ವ". ಎಂದ.
...ಕೇಳುದ್ದ. ಹಾದಿ ಬೀದಿಬೇಲಿ ಮರೆ
...ನು ಅಂತ ನಂಗೇನು ಗೊತ್ತಿಲ್ವ.
... ಕೆ ಬಂದಿಲ್ಲ, ಎದ್ದು ಹೊತ್ತಾರೆ
...ತ್ರಿ. ಅದೇನೋ ಜೀರ್ಣೋದ್ಧಾರ
...ಹೊತ್ತಿಗೆ ನಿನ್ನ ಕೆಲ್ಸ ಮುಗ್ಸು"
...ಚೌಕ ಬಿಚ್ಚಿ ಸೊಂಟಕ್ಕೆ ಬಿಗಿದು
...ತ್ತಾ ಸೆಗಣಿ ಬಾಚಲು ಸುರುವಿಟ್ಟ.
...ದು ಗಂಟಪ್ಪನಿಗೆ ದಾರಿ ಮಾಡಿ
... ಕೊಂಚ ಅಳುಕಿನಿಂದಲೇ ಕೆಲಸ
...ನ್ನು ಒಳಗಿಂದ ಕಾಫಿ ತಂದುಕೊಟ್ಟ
...ಟ್ಟಳು "ಅಲ್ಲಾ ಗಂಟಪ್ಪ, ರಾಮು
... ಹುಷಾರಾಗೌನೆ ತಾನೆ?" ಎಂದು
...ಚಾಚಿದಳು. ಲೋಟ ಮುಟ್ಟದೆ
... ನೋಡಿದ ಗಂಟಪ್ಪನ ದುಗುಡ
...ಬ್ಯಾರಾದ್ರು ಇದ್ರೆ, ನಾನು ಮನೆ
...ಡ್ತೀನಿ ಗಂಟಪ್ಪ, ಅತ್ತೆ ಮೈಕೈ
...ನಸಗವ್ರೆ. ಮಕ್ಕಳೆಲ್ಲ ಅವರಪ್ಪನ
...ಮನೆ ಆಳ್ಗಳು ಮುಂದೆ ಟ್ಯಾಕುಟ್ರು
... ಕುಡಿ" ಎಂದಳು. ಧೈರ್ಯದಿಂದ
...ಕು ಹೀರಲು ಆರಂಭಿಸಿದ.
...ಂತ ಏಳ್ತೆಯಿಲ್ಲ" ಮತ್ತೆ ಪ್ರಶ್ನಿಸಿದಳು
...ಬಂದಿಪ್ಪಿ, ಜಾಸ್ತಿ ಗಲಾಟೆ ಮಾಡಿದ್ದ
... ನಿಮ್ಮನೇಲಿ?" ಅನುಮಾನದಿಂದ
...ಕೋ ಜಾಸ್ತಿ ಆದಿದ್ದೆ" ಗಂಟಪ್ಪನ
...
... ಎಂದೂ ಸುಳ್ಳು ಹೇಳದವನಲ್ಲ,
...

ಆಡಿಕೊಳ್ಳುವುದು, ಎಲ್ಲವನ್ನೂ ತಪ್ಪದೆ ಸುಬ್ಬಮ್ಮನ ಬಳಿಯಲ್ಲಿ ಹೇಳುತ್ತಿದ್ದ. ಸುಬ್ಬಮ್ಮನೂ ಅಲ್ಲಿ ಇಲ್ಲಿ ನಾಟಿ ಔಷಧಿಯನ್ನು ತರಿಸಿಕೊಟ್ಟಿದ್ದಳು. ಆ ದೇವರು ಈ ದೇವರಿಗೆ ಹರಕೆ ಕಟ್ಟಲು ತಿಳಿಸಿದ್ದಳು. ಆದರೂ ಮಕ್ಕಳಾಗದ್ದನ್ನು ಕಂಡು ಪೇಟೆಯ ವೈದ್ಯರ ಬಳಿ ಕಳಿಸಿದ್ದಳು. ಅದರ ವೆಚ್ಚ ಹೆಚ್ಚಾಗಿದ್ದರಿಂದ ಗಂಡನ ಬಳಿ ದುಡ್ಡಿಗಾಗಿ ಪೀಡಿಸಿ ಅವನ ಕೆಂಗಣ್ಣಿಗೆ ಗುರಿಯಾಗಿದ್ದಳು. ಕಪಾಳ ಕೆಂಪಾಗಿದ್ದು ಎಣ್ಣೆ ಹಾರಿ ಎಂದು ಗಂಟಪ್ಪನಿಗೆ ಸುಳ್ಳು ಹೇಳಿದಾಗಲೂ ಗಂಟಪ್ಪ ಸತ್ಯ ಪತ್ತೆ ಹಚ್ಚಿ ಸಮಾಧಾನ ಹೇಳುವ ಬದಲು ಸ್ವತಃ ಕಣ್ಣೀರು ಹಾಕಿದ್ದ. ಸುಬ್ಬಮ್ಮನೇ ಅವನನ್ನು ಸಮಾಧಾನಪಡಿಸುವಂತಾಗಿತ್ತು.

ಒಮ್ಮೆ ಗೌಡರು ಕೇರಿಯ ಸತ್ಯಮ್ಮನೊಂದಿಗೆ ಇರಿಸಿಕೊಂಡಿದ್ದ ಸಂಬಂಧವನ್ನು, ಆಗಾಗ ರಾತ್ರೋ ರಾತ್ರಿ ಬಂದುಹೋಗುವುದನ್ನು, ಸತ್ಯಮ್ಮನೂ ಸಹ 'ಗೌಡ ಮುಟ್ಟುವ ಮೈ ಕಣ್ರಲಾ ಇದು' ಎಂದು ಎದೆ ತಟ್ಟಿ ಹೇಳುವುದನ್ನು ಗಂಟಪ್ಪ ಸುಬ್ಬಮ್ಮನಿಗೆ ತಿಳಿಸಿ ಅಂದು ರಾತ್ರಿ ಗೌಡನಿಗೆ ನಿದ್ದೆ ಬರದಂತೆ ಮಾಡಿದ್ದ. ಸುಬ್ಬಮ್ಮ ರಾತ್ರಿಯಿಡೀ ಗೋಳೋ ಎಂದು ಅತ್ತಿದ್ದಳು. ಸಹಿಸದ ಗೌಡ ಮನಸೋ ಇಚ್ಛೆ ಬಡಿದಿದ್ದ. "ಈ ವಿಷಯ ಏಲ್ಡೋರ್ಯಾರು ಬೊಗ್ಳು" ಎಂದು ಸುಬ್ಬಮ್ಮನನ್ನು ಪೀಡಿಸಿದ್ದ. ವಾರವಾದರೂ ಆ ಹಿಂಸೆ ಮುಂದುವರೆದೆ ಇತ್ತು. ಕೊನೆಗೆ ಗಂಟಪ್ಪನನ್ನು ಉಳಿಸಲು ಪೂಜಾರರ ಹೆಂಡತಿ ಎಂದು ಸುಳ್ಳು ಹೇಳಿದ್ದಳು. ಹೀಗೆ ಅವರಿಬ್ಬರ ಸಂಬಂಧ ಉತ್ತಮ ಸ್ನೇಹದಿಂದ ಕೂಡಿದ್ದು ಎಂದೂ ಸುಳ್ಳು ಹೇಳಿರದ ಗಂಟಪ್ಪ ಇಂದು ಹೇಳಿದ್ದ. ಅದು ಯಾಕೋ ಸರಿ ಕಾಣದೆ "ಅವ್ವಾ, ನಮ್ಮ ಜಾತಿಯೋರು ಗಂಡುನಾಯಿ ಸಾಕಂಗಿಲ್ಲ ಅಂತ ಗೌಡ್ರು ಬಾಳ ಹಿಂದೆ ಏಳಿದ್ರು. ಕುಲಸ್ತರ ಹೆಣ್ಣು ನಾಯ್ಗಳ ಜೊತೆ ಸಾವಾಸ ಮಾಡಿ ಮೈಲಿಗೆ ಮಾಡ್ತವಂತ. ನಿಮ್ಮಟ್ಟಿಲೂ ರಜನಿ ಅವ್ಳೆ ಅದುಕ್ಕೆ ರಾಮೂನ ಇಲ್ಲಿಗೆ ಕರಕಂಡು ಬರೋದು ಬ್ಯಾಡಂತ" ಎಂದು ಹೇಳಿ ಕಡ್ಡಿ ಪೊರಕೆಯಿಂದ ನೆಲ ಗುಡಿಸುತ್ತ ಸದ್ದು ಮಾಡಿದ. ಸುಬ್ಬಮ್ಮ ಜೋರಾಗಿ ನಗುವುದನ್ನು ಕಂಡು ಅವಳನ್ನೇ ನೋಡುತ್ತ ನಿಂತ.

"ಅಲ್ಲ ಗಂಟಪ್ಪ, ನಿಮ್ಮ ಗೌಡರಿಗೆ ಅರ್ಥವಾಗದ್ದು ರಾಮೂಗೆ ಅರ್ಥ ಆಯ್ತದಾ?" ಎಂದು ನಗುತ್ತಲೇ ಒಳನಡೆದಳು. ಲಕ್ಕವ್ವನೂ ಇದೇ ಮಾತಾಡಿದ್ದನ್ನು ನೆನೆದು ಕೆಲಸಕ್ಕೆ ಇಳಿದ.

ಕೆಲಸ ಮುಗಿಸಿಕೊಂಡು ಮನೆ ತಲುಪುವಷ್ಟರಲ್ಲಿ ಹೊತ್ತಾಗಿತ್ತು. ಹೊಟ್ಟೆ ಹಸಿಯುತ್ತಿತ್ತು. ದೂರದಿಂದ ಗಂಟಪ್ಪನನ್ನು ಕಂಡ ತಕ್ಷಣ ಬೊಗಳುತ್ತ ಹಗ್ಗ ಬಿಡಿಸಿಕೊಳ್ಳಲು ಹೆಣಗಾಡುತ್ತಿದ್ದ ರಾಮುವನ್ನು ಕಂಡು ಗಂಡ ಬರುವುದನ್ನು ಖಾತ್ರಿಪಡಿಸಿಕೊಂಡ ಲಕ್ಕಮ್ಮ ಮನೆ ಹೊರಗೆ ನೀರು ತುಂಬಿದ ಚೊಂಬನ್ನು ತಂದಿಟ್ಟು ರಾಮುವಿನ ಹಗ್ಗ ಬಿಚ್ಚಿದೊಡನೆ ಓಡಿಹೋಗಿ ತನ್ನೊಡೆಯನ ಮೇಲೆರಗಿದ. ಅವನನ್ನು ಸಮಾಧಾನಪಡಿಸಿಕೊಂಡು ಬರುವಷ್ಟರಲ್ಲಿ ಗಂಟಪ್ಪನಿಗೆ ಸಾಕು ಸಾಕಾಗಿತ್ತು. ಮನೆ ಬಾಗಿಲ ಬಳಿ ಚೌಕವೆಸೆದು ಮುಖ ತೊಳೆಯಲು ಹೋದವನ ಕಣ್ಣಲ್ಲಿ ನೀರಿದ್ದುದನ್ನು ಕಂಡ ಲಕ್ಕಮ್ಮ ಅವನನ್ನು ಛೇಡಿಸುವ ಮಾತಾಡಲಿಲ್ಲ. ಅವಳು ಸ್ವಚ್ಛವಾಗಿ ಸುಮ್ಮನೆ ಬಂದು ರಾಗಿ ಮುದ್ದೆ ಮೆಣಸಿನ ಕಾಯಿ ಚಟ್ನಿ ಇರಿಸಿದ ತಟ್ಟೆಯ ಮುಂದೆ ಕುಳಿತ ಗಂಟಪ್ಪ.

ಸೂರಿನಲ್ಲಿ ಸಿಕ್ಕಿಸಿದ್ದ ರಾಮುವಿನ ತಟ್ಟೆಯನ್ನು ತೊಳೆದು ಅದರಲ್ಲೂ ಮುದ್ದೆಯನ್ನು ಮುರಿದು ಇಟ್ಟಳು. ಗಂಟಪ್ಪ ತುತ್ತನ್ನು ಬಾಯಿಗೆ ಹಾಕುವುದನ್ನೇ ಕಾಯುತ್ತಿದ್ದ ರಾಮು ತಾನೂ ತಿನ್ನಲು ಆರಂಭಿಸಿದ. ಕಾಲುವೆಗೆ ನೀರು ಬಿಟ್ಟಾಗ ಗೌಡರ ಗದ್ದೆಗೆ ನೀರು ಹಾಯಿಸಿ ಬರುವುದು ಹೊತ್ತಾದರೂ ಅಲ್ಲಿವರೆಗೆ ಕಾಯುತ್ತ ಲಕ್ಕಮ್ಮನ ಬಳಿ ಇದ್ದು ಅವನು ಬರುವತನಕ ಕಾದು ತಿನ್ನುತ್ತಿದ್ದನು ರಾಮು. ಅಪರೂಪಕ್ಕೊಮ್ಮೆ ಎಮ್ಮೆ, ದನ ಸತ್ತಾಗಲಂತು ರಾಮುವಿನ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ. ಬಂಡೆ ಮೇಲೆ ಕೊಯ್ದು ಪಾಲಾಕಿ ಮನೆಗೆ ಸಾಗಿಸಿ ಸಾರು ಮಾಡುವ ತನಕವೂ ಇಪ್ಪತ್ತು ಬಾರಿ ಮನೆಯೊಳಗೂ ಹೊರಗೂ ಸುತ್ತುತ್ತಿದ್ದ. ಹಲ್ಲಿಗೇ ರುಚಿ ಹಿಡಿಯುವಷ್ಟು ಚೆನ್ನಾಗಿರುತ್ತಿದ್ದ ದನದ ಬಾಡು ಮುಂದಿದ್ದರೂ ತನ್ನೊಡೆಯ ತಿನ್ನುವ ತನಕ ಕಾಯುವುದನ್ನು ಮರೆಯುತ್ತಿರಲಿಲ್ಲ.

ಇಬ್ಬರೂ ಊಟ ಮುಗಿಸಿ ಹೊರಬಂದು ಮನೆ ಮುಂದಿನ ಕಲ್ಲಿನ ಮೇಲೆ ಕುಳಿತಾಗ ಸೂರ್ಯ ನೆತ್ತಿಯ ಮೇಲೆ ಬಂದಿದ್ದ. ಕೇರಿಯಲ್ಲಿ ಯಾರೂ ಇರಲಿಲ್ಲ. ಶಾಲೆಗೆ ಹೋಗದ ಮಕ್ಕಳು ಆಟವಾಡುತ್ತಿದ್ದರಷ್ಟೆ. ಪಕ್ಕದಲ್ಲಿ ಬಂದು ನಿಂತ ರಾಮುವಿನ ತಲೆ ಸವರಿ "ಬೇಜಾರಾಯ್ತೇನ್ಲಾ? ಆ ರಜನಿ ಸಾವಾಸ ಬುಟ್ರೆ ಆವಾಗ ನಂಗೆ ನಿರಾಳ" ಎಂದು ಮತ್ತೆ ಅವನನ್ನು ಕಟ್ಟಿ ಹಾಕಿ ಲಕ್ಕಮ್ಮನಿಗೆ ತಿಳಿಸಿ ಒಲ್ಲದ ಮನಸ್ಸಿನಿಂದ ಕೆಲಸಕ್ಕೆ ಹೊರಟ. ರಾಮು ಕದಲಲಿಲ್ಲ. ಗಂಟಪ್ಪ ಹೋಗುವುದನ್ನೇ ನೋಡುತ್ತಾ ಒಂದು ಸುತ್ತು ಸುತ್ತಿ ಕೆಳಗೆ ಮಲಗಿದ. ಒಡೆಯ ಮನಸ್ಸು ಬದಲಿಸಿ ಕರೆಯುತ್ತಾನೆಂದು ಕಿವಿಗಳನ್ನು ಮೇಲೆತ್ತಿ ನಿಲ್ಲಿಸಿದ್ದ.

ತೋಟದ ಕಡೆ ಬಂದ ಗಂಟಪ್ಪನಿಗೆ ತನ್ನ ಕೇರಿಯ ಬಂಧುಗಳು ತನ್ನನ್ನು ಬಿಟ್ಟು ಗುಂಪು ಕಟ್ಟಿ ಏನನ್ನೋ ಮಾತನಾಡುತ್ತಿರುವುದನ್ನು ನೋಡಿ ಅಲ್ಲಿಗೆ ಬಂದ. ಅವನು ಬಂದಕೂಡಲೇ ಗುಂಪು ಮೌನವಾಯಿತು. ಬೇರೇನನ್ನೋ ಮಾತನಾಡುವಂತೆ ಸನ್ನೆ ಮಾಡಿಕೊಳ್ಳುತ್ತಿತ್ತು. ಇದನ್ನರಿತ ಗಂಟಪ್ಪ ಸರಿಯಾಗಿ ಜಾಡಿಸಿದ ನಂತರ ಬೀಡಿಗೆ ಬೆಂಕಿ ಹಚ್ಚಿದ ಕೆಂಪ "ಹೇಳ್ಬುಟ್ರೆ ಬಂದ್ಬುಡ್ತೀಯೋ?" ಎಂದು ಎದೆಯುಬ್ಬಿಸಿದ. ಗಂಟಪ್ಪ ಮೊದಲು ವಿಚಾರ ತಿಳಿಸಲು ಕೇಳಿಕೊಂಡಾಗ ಪಕ್ಕದ ಕೆರೆಯಲ್ಲಿ ಮರಳನ್ನು ಲೋಡ್ ಮಾಡುವ ಕೆಲಸವಿದ್ದು ಪ್ರತಿ ಲೋಡಿಗೆ ನೂರು ರೂಪಾಯಿ ಕೂಲಿ ಕೊಡುತ್ತಿರುವುದರಿಂದ ಒಂದು ವಾರ ಆ ಕೆಲಸಕ್ಕೆ ಎಲ್ಲರೂ ಹೋಗುವುದಾಗಿ ತೀರ್ಮಾನಿಸಿದ್ದರು. ಹೇಗೂ ಗೌಡರ ಮನೆಯ ಕೆಲಸದಿಂದ ಅಷ್ಟೇನು ದುಡ್ಡು ಮಾಡಲಾಗದ ಕಾರಣ ಒಂದು ವಾರದ ಮಟ್ಟಿಗಾದರೂ ಗೌಡರ ಒಪ್ಪಿಗೆ ಕೇಳಿ ಹೋಗೋಣವೆಂದು ಮಾತನಾಡಿಕೊಳ್ಳುತ್ತಿದ್ದಾಗ ಗಂಟಪ್ಪ ಅಲ್ಲಿಗೆ ತೆರಳಿದ್ದ. ಆದರೆ ಗೌಡರ ಬಳಿ ಅಪ್ಪಣೆ ಕೇಳಲು ಯಾರಿಗೂ ಧೈರ್ಯವಿರಲಿಲ್ಲ. ಗಂಟಪ್ಪ ಇದುವರೆಗೂ ಗೌಡರಿಂದ ಬಾಸುಂಡೆ ಬರಿಸಿಕೊಂಡಿರಲಿಲ್ಲವಾದ್ದರಿಂದ ಅವನ ಕೈಗೇ ಗಂಟೆ ಕೊಡಲು ಎಲ್ಲರೂ ತೀರ್ಮಾನಿಸಿದರು.

ಗಂಟಪ್ಪನಿಗೆ ಮದುವೆ ಆಗಿ ಎಂಟು ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಕಳೆದ ಬಾರಿ ಸುಬ್ಬಮ್ಮನ ಆಣತಿಯಂತೆ ಪ್ಯಾಟೆಗೆ ಹೋದಾಗ ಡಾಕ್ಟರ್ ಇವರಿಗೆ ತಿಳಿಯದ ಟೆಸ್ಟ್‌ಗಳನ್ನು ಹೇಳಿ ಒಂದಷ್ಟು ದುಡ್ಡು ಖರ್ಚಾಗುತ್ತದೆ ಎಂದಿದ್ದರು. ಅಷ್ಟೊಂದು ಹಣವಿಲ್ಲದ ಕಾರಣ ಇಬ್ಬರೂ

ಕತೆ

ಪೇಚು ಮೋರೆ ಹಾಕಿಕೊಂಡೇ ಮನೆಗೆ ಮರಳಿದ್ದರು. ಆದರೆ ಇಂದು ಬಂಧುಗಳ ಮಾತುಗಳಿಂದ ಆ ಆಸೆ ಮತ್ತೆ ಚಿಗುರೊಡೆದು ಗೌಡರ ಅಪ್ಪಣೆಯನ್ನು ಕೇಳುವ ಜವಾಬ್ದಾರಿಯನ್ನು ಹೊತ್ತುಕೊಂಡ. ಗೌಡರ ಬಳಿ ಸಂಜೆ ಹೋಗಬೇಕೆಂದು ತೀರ್ಮಾನವಾಯಿತು. ಅಷ್ಟರಲ್ಲಿ ಪ್ಯಾಟೆಯಿಂದ ಗೌಡರೂ ಬರುವ ನಿರೀಕ್ಷೆಯಿತ್ತು. ಇದ್ದ ಬದ್ದ ಕೆಲಸಗಳನ್ನೆಲ್ಲಾ ಮುಗಿಸಿ ಮನೆಗೆ ಹೊರಟ ಗಂಟಪ್ಪನ ಮನದಲ್ಲಿ ಮಗು ಪಡೆಯುವ ಸಂಭ್ರಮವಿತ್ತು. ಲಕ್ಕಮ್ಮನಿಗೆ ಈ ವಿಷಯ ತಿಳಿಸಿದಾಗ ಅವಳಿಗೂ ಹೊಟ್ಟೆಯಲ್ಲಿ ಗೂಡು ಕಟ್ಟಿದಷ್ಟು ಸಂತೋಷವುಂಟಾಗಿ ಇಬ್ಬರೂ ರಾಮುವಿನ ಬಂಧನವನ್ನು ಬಿಡಿಸಲು ಮರೆತಿದ್ದರು. ರಾಮುವಿನ ಕೂಗಾಟ ಕೇಳಿಸಿ ತಲೆಗೆ ಬಡಿದುಕೊಂಡು ಹೊರಬಂದ ಗಂಟಪ್ಪ "ಕ್ಷಮಿಸ್ಬುಡ್ಲಾ.. ಇನ್ನೊಂದು ಕಂದ ಬಂದ್ರುವೇ ನೀನೇ ನನ್ನ ಹಿರಿಮಗ" ಎಂದು ಗಂಟು ಬಿಚ್ಚಿದ.

ಮನೆಯಲ್ಲಿ ಸೌದೆ ಖಾಲಿಯಾಗಿದ್ದರಿಂದ ರಾಮುವನ್ನೂ ಕರೆದುಕೊಂಡು ಕಾಡಿನೊಳಕ್ಕೆ ಹೊರಟ. ಹಿಂದಿರುಗಿ ಬರುವಷ್ಟರಲ್ಲಿ ಸೂರ್ಯ ಕೆಂಪಾಗಿ ನೇಣಿಗೇರುತ್ತಿದ್ದ. ಸೌದೆ ತರುತ್ತಿದ್ದ ಗಂಟಪ್ಪನನ್ನು ಮಧ್ಯದಲ್ಲಿಯೇ ತಡೆಹಿಡಿದ ಬಂಧುಗಳು, ಗೌಡರು ಪ್ಯಾಟೆಯಿಂದ ಮಲ್ಲಿಗೆ ವಾಸನೆ ಹತ್ತಿಸಿಕೊಂಡು ಬಂದಿದ್ದು ಬಹಳ ಖುಷಿಯಾಗಿರುವುದರಿಂದ ತಮ್ಮ ವಿಷಯ ಮಾತಾಡಲು ಇದೇ ಒಳ್ಳೆಯ ಸಮಯವೆಂದು ಅವನನ್ನು ಹಾಗೆಯೇ ಕರೆದುಕೊಂಡು ಗೌಡರ ಮನೆ ಬಳಿ ಹೋದರು. ರಾಮುವಿಗೆ ಬಯಸದೇ ಬಂದ ಭಾಗ್ಯದಿಂದ ಖುಷಿಯಾಗಿ ತನ್ನ ಪ್ರೇಯಸಿಯನ್ನು ಕಾಣುವ ತವಕದಲ್ಲಿ ಗಂಟಪ್ಪ ಮತ್ತು ಕೇರಿಯವರ ಹಿಂದೆಯೇ ನಡೆದ. ಅವನ ರೋಮಗಳೆಲ್ಲ ಮೆಲ್ಲಗೆ ನಿಲ್ಲುತ್ತಿದ್ದವು. ಅವನಿಗೇ ತಿಳಿಯದಂತೆ ನಡೆಯುವ ಭಂಗಿ ಬದಲಾಗುತ್ತಿತ್ತು. ಬಾಲ ಸರಸರನೆ ಹಾವಿನಂತೆ ಬಳುಕುತಿತ್ತು.

ಗೌಡರ ಮನೆ ಮುಂದೆ ರಜನಿಯು ಮುಂಗಾಲನ್ನು ಮುಂಚಾಚಿಕೊಂಡು ನಾಲಿಗೆಯನ್ನು ಹೊರಬಿಟ್ಟು ಉಸಿರಾಡುತ್ತಿರಲು ಅವಳನ್ನು ನೋಡಿ ರಾಮು ತೇಲುತ್ತಿದ್ದರೆ ಗಂಟಪ್ಪ ಮುಳುಗುತ್ತಿದ್ದ. ರಾಮುವನ್ನೊಮ್ಮೆ ಬೇಕಂತಲೇ ಗದರಿಸಿ ಸೊಂಟ ಮುರಿದುಕೊಂಡ. ಅವನಂತೆ ಎಲ್ಲರೂ ಮುರಿದುಕೊಂಡು ನಿಂತರು. ಹೆಗಲ ಮೇಲಿನ ಚೌಕಗಳು ಕೈಯಲ್ಲಿದ್ದವು. ರಜನಿ ಚಂಗನೆ ನಿಂತು ತನ್ನ ಪ್ರಿಯಕರನನ್ನು ಸ್ವಾಗತ ಮಾಡಿ ಬೊಗಳಿದಳು. ಆ ಸದ್ದನ್ನು ಕೇಳಿ ಹೊರಬಂದ ಮನೆಯೊಳಗಿನ ಆಳು ಇವರ ಉಪಸ್ಥಿತಿಯನ್ನು ಗೌಡರಿಗೆ ತಿಳಿಸಿದ. ಸ್ವಲ್ಪ ಹೊತ್ತಿನಲ್ಲೇ ಬೋರೆಗೌಡ ಹೊರಬಂದ. ಎಲ್ಲರೂ ಭಾವಿಸಿದಂತೆ ಒಳ್ಳೆಯ ಮನಸ್ಥಿತಿಯಲ್ಲೇ ಇದ್ದವನ ಮೀಸೆ ಆಕಾಶ ನೋಡುತ್ತಿತ್ತು. ಎಲ್ಲರನ್ನೂ ಒಟ್ಟಿಗೆ ನೋಡಿದ ಬೋರೆಗೌಡ ಯಥಾಪ್ರಕಾರ "ಈಗಿರೋ ಸಾಲಾನೇ ತೀರಿಲ್ಲ ಮತ್ತೆ ಎಲ್ಲಿಂದ ಕೊಡದ್ರಲೇ" ಎಂದು ರೇಗಿದ ಕೂಡಲೆ ಗಂಟಪ್ಪನನ್ನುಳಿದು ಮಿಕ್ಕವರಿಗೆಲ್ಲ ಕಾಲು [illegible]

ಸುರುವಿಟ್ಟವು. ಆದರೆ ಗಂಟಪ್ಪನಿಗೆ ತನ್ನ ಗೌಡನ ಮೇಲೆ ನಂಬಿಕೆ ಇದ್ದದ್ದರಿಂದಲೋ ಏನೋ ಧೈರ್ಯವಾಗಿ "ದುಡ್ಡಿಗಲ್ಲ ದಣಿ" ಎಂದು ತಲೆಕೆರೆದು ಮಂಡಿಯನ್ನು ಇನ್ನೂ ಬಗ್ಗಿಸಿದ. ಇವನನ್ನು ನೋಡಿ ಮಿಕ್ಕವರೂ ಸಹ ಹಾಗೆಯೇ ಮಾಡಿದರು. ಆಳು ತಂದ ಕುರ್ಚಿಯಲ್ಲಿ ಕುಳಿತ ಬೋರೇಗೌಡ "ಮತ್ತೇನ್ರುಲಾ ನಿಮ್ ಪಜೀತಿ" ಎಂದಾಗ ರಜನಿ ಮತ್ತು ರಾಮು ಇಬ್ಬರೂ ಕಾಣೆಯಾಗಿರುವುದನ್ನು ಕಂಡು ದಿಗಿಲುಗೊಂಡಿದ್ದ ಗಂಟಪ್ಪನ ಕಣ್ಣು ಅವರಿಬ್ಬರನ್ನು ಹುಡುಕುತ್ತಿರಲು ಬೋರೇಗೌಡನ ಮಾತು ಕೇಳಲೇ ಇಲ್ಲ. ಸಂಬಂಧಿಕರು ತಿವಿದಾಗ ಎಚ್ಚರಗೊಂಡದ್ದಕ್ಕೂ, ಗೌಡ ಗಟ್ಟಿಯಾಗಿ "ಇನ್ನೇನ್ರುಲಾ ಮತೆ" ಎಂದಿದ್ದು ಒಟ್ಟಿಗೆ ಆದಾಗ ಗಂಟಪ್ಪ ತನ್ನ ಮನದೊಳಗಿನ ಆಸೆಯನ್ನು ಬಿಚ್ಚಿಟ್ಟ.


"ದಣಿ... ನಾವೆಲ್ಲಾ... ನಾಳೆ ನಮ್ಮ ಕೆರೆಯಾಗೆ ಮರಳು ತುಂಬೊ ಕೆಲಸಕ್ಕೆ ಹೋಗಾನ ಅಂತ. ಅದುಕ್ಕೆ ಒಂದು ವಾರ ಅಪ್ಪಣೆ ಕೊಟ್ರೆ ಹೋಗಿಬಂದು ಬಡ್ತೀವಿ" ಎಂದ ಗಂಟಪ್ಪ ಹೆದರುತ್ತಲೆ. ಗೌಡ ವ್ಯಂಗ್ಯವಾಗಿ ನಗುತ್ತಾ ಕೆಳದುಟಿ ಜಾರಿಸುತ್ತ "ಇಲ್ಲಿ ಸೆಗಣಿ ಬಳಿಯೋರು, ದನ ಕಟ್ಟಾಕೋರು, ಹೊಲದ ಕ್ಯಾಮೆ ನೋಡೋರು ಯಾರ್ಲಾ" ಎಂದವನೆ ಮೇಲೆದ್ದು ಮನೆಯೊಳಗೆ ಹೊರಡಲು ಅಣಿಯಾಗುತ್ತಿದ್ದಂತೆ ಎಲ್ಲರೂ ಒಕ್ಕೊರಲಿನಿಂದ "ಧಣೀ....." ಎಂದದಕ್ಕೆ ರೇಗಿದ ಗೌಡ ದುರುಗುಟ್ಟಿ ಒಮ್ಮೆ ಅವರತ್ತ ತಿರುಗಿದ.

ಸ್ನೇಹಿತರೆಲ್ಲ ತಿವಿಯಲು ಧೈರ್ಯ ಮಾಡಿದ ಗಂಟಪ್ಪ "ಆ ಕೆಲ್ಸುಕ್ಕೆ ಬೇರೆ ಆಳು ಒಂಟೋಗ್ಬುಟ್ರೆ ನಮಗೆ ದಕ್ಕೊ ಕೂಲಿಗೆ ಮಣ್ಣು ಬೀಳ್ತದೆ ಧಣಿ, ಇದೊಂದ್ ಕಿತ ನೀವು ಮನಸು ಮಾಡ್ಬುಟ್ರೆ ಮನೆಗೊಸಿ ಕಾಸು ಮಾಡ್ಕಂತೀವಿ" ಎಂದದಕ್ಕೆ ಸಿಟ್ಟಿಗೆ ಬಂದ ಗೌಡ "ಸಾಲ ಮಾಡುವಾಗ ಈ ಬುದ್ಧೀ ಎಲ್ಲೋಗಿತ್ತಲಾ" ಎಂದು ಮುಂದೆ ಬಂದು ಗಂಟಪ್ಪನ ಎದೆಗೆ ದಗ್ಗನೆ ಒದ್ದ. ಗಂಟಪ್ಪ ಹಾರಿ ಹಿಂದಕ್ಕೆ ಬಿದ್ದದನ್ನು ನೋಡಿ ಸ್ನೇಹಿತರೆಲ್ಲರೂ ಹಿಂದಕ್ಕೆ ಸರಿದುಕೊಂಡರು. ಗಂಟಪ್ಪನ ಹರಕು ಅಂಗಿಯ ಎದೆಯ ಭಾಗದಲ್ಲಿ ಗೌಡನ ಬಲಗಾಲ ಚಪ್ಪಲಿ ಗುರುತು ಅಚ್ಚೊತ್ತಿ ಹರಿದಿತ್ತು. ಅಷ್ಟಕ್ಕೆ ಬಿಡದ ಗೌಡ ಸೊಂಟಕ್ಕೆ ಕಟ್ಟಿದ್ದ ಚರ್ಮದ ಬೆಲ್ಟನ್ನು ಬಿಚ್ಚಿ ಬಲಗೈ ಹಸ್ತಕ್ಕೆ ಒಂದು ಸುತ್ತು ಸುತ್ತಿಕೊಂಡು "ಒಂದು ಸತೀನೂ ಮೈಮುಟ್ಟಿಲ್ಲ ಅಂತ ಕೊಬ್ಬೇನಲೇ ಸೂಳೆ ಮಗನೆ, ತಂಗ್ಳ ತಿಂದೇ ಇಷ್ಟು ನಿಗರಾಡೋರು ಇನ್ನು ಬಿಸಿ ಬಿಸಿ ಹಾಕಿದ್ರೆ..." ಎಂದು ರಪ್ಪನೆ ಗಂಟಪ್ಪನ ಮೈಮೇಲೆ ಬಿಟ್ಟ ಏಟಿಗೆ "ಅಯ್ಯಪ್ಪ.. ತಪ್ಪಾಯ್ತು ಧಣಿ" ಎಂದು ಗಂಟಪ್ಪ ಕಿರುಚಿದ. ಸಮಾಧಾನವಾಗದ ಗೌಡನ ಬೆಲ್ಟು ಗಂಟಪ್ಪನ ಮೈಮೇಲೆ ಕೆಲಹೊತ್ತು ಆಟವಾಡಿ ತನ್ನ ಹೆಜ್ಜೆ ಗುರುತನ್ನು ಉಳಿಸುತ್ತಿತ್ತು. ಗಂಟಪ್ಪನ ಚೀರಾಟ ಹೆಚ್ಚಾದಷ್ಟು ಗೆಳೆಯರು ಹೆಜ್ಜೆಗಳನ್ನು ಹಿಂದೆಯಿಡುತ್ತಿದ್ದರು. ಅಷ್ಟರಲ್ಲಿ ಎಲ್ಲಿಂದಲೋ ಓಡಿ ಬಂದ ರಾಮು ಹಿಂದು ಮುಂದು ನೋಡದೆ ಚಿರತೆಯಂತೆ ಚಂಗನೆ ಬೋರೆಗೌಡನ ಮೇಲೆ ಹಾರಿಯೇ ಬಿಟ್ಟ. ಅವನ ಮುಂಗೈಗೆ ತನ್ನ ಬಾಯಿ ಹಾಕಿದ ಕೂಡಲೆ ಗೌಡ ಬೆಲ್ಟನ್ನು ಕೈಬಿಟ್ಟ. ಈಗ ಗಂಟಪ್ಪನಿಂದ ಕೇಳಿಬರುತ್ತಿದ್ದ ಚೀರಾಟ ಗೌಡನ ಗಂಟಲಿನಿಂದ ಬರಲಾರಂಭಿಸಿತು. ಗಂಟಲು ಹರಿದೇ ಹೋಯಿತೇನೊ ಎಂದುಕೊಳ್ಳುವಂತೆ ಕಿರುಚುತ್ತಿದ್ದ. ಸುತ್ತಾ ಮುತ್ತಾ ಆಳುಗಳೆಲ್ಲ ಓಡಿಬಂದು ರಾಮುವಿನಿಂದ ಗೌಡನ ಕೈಬಿಡಿಸಲು ಪ್ರಯತ್ನಿಸಿದರಾದರೂ ರಾಮು ಕದಲಲಿಲ್ಲ. ಗಂಟಪ್ಪ ಕೆಳಬಿದ್ದಿದ್ದ ಬೆಲ್ಟನ್ನು ತೆಗೆದುಕೊಂಡು ರಾಮುವಿಗೆ ಮನಬಂದಂತೆ ಬಡಿದನಾದರು ಜಗ್ಗುತ್ತಿಲ್ಲ. ನೋವಿಗೆ ಗೌಡನಿಗೆ ತನ್ನ ಪೂರ್ವಜರೆಲ್ಲರು ಕಾಣುತ್ತಿದ್ದರು. ಬೇರೆ ದಾರಿಯಿಲ್ಲದೆ ಗಂಟಪ್ಪ ಕೈಗೆ ಸಿಕ್ಕ ಕಲ್ಲೊಂದನ್ನು ಎತ್ತಿ ರಾಮುವಿನ ಮೇಲೆಸೆದ ಅದು ಹಿಂಗಾಲಿಗೆ ವಾಸಿಯಾಗಬಹುದಾದ ಗಾಯ ಮಾಡಿ ಗಂಟಪ್ಪನ ಮನಸ್ಸಿಗೆ ವಾಸಿಯಾಗದ ಗಾಯ ಮಾಡಿದಾಗ ರಾಮು ಕುಂಯ್‌ಗುಡುತ್ತಾ ಓಡಿಹೋದ.

ಗೌಡನ ಕೈಮಾಂಸ ಕಿತ್ತುಬಂದು ರಕ್ತದಲ್ಲಿ ಕೈ ಅದ್ದಿದಂತೆ ಆಗಿತ್ತು. ಮನೆಯವರು ಹೆದರಿ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಗಂಟಪ್ಪ ಮತ್ತು ಕೇರಿಯವರೆಲ್ಲ ರಾತ್ರೋ ರಾತ್ರಿ ಊರು ಬಿಡಲು ಅಣಿಯಾದರು. ಆತುರಾತುರವಾಗಿ ಕೈಗೆ ಸಿಕ್ಕ ವಸ್ತುಗಳನ್ನು ಮೂಟೆ ಕಟ್ಟಿಕೊಂಡು ಕಾಡು ದಾರಿ ಹಿಡಿದು ನಡೆದರು. ಸ್ವಲ್ಪ ದೂರ ಹೋದ ಮೇಲೆ ಅಲ್ಲಿಯೆ ರಾಮು ಸತ್ತವನಂತೆ ನೆಲದ ಮೇಲೆ ಬಿದ್ದಿದ್ದ. ರಜನಿ ದುಗುಡದಿಂದ ಅವನ ಕಾಲನ್ನು ನೆಕ್ಕುತ್ತಿದ್ದಳು. ಗಂಟಪ್ಪ ಓಡುತ್ತ "ರಾಮು... ರಾಮೂ..." ಎಂದಾಗ ರಾಮುವಿನ ಕಿವಿ ನೆಟ್ಟಗಾಗಿ ಮೇಲೆದ್ದು ಕುಂಟುತ್ತಲೆ ತನ್ನೊಡೆಯನ ಬಳಿ ಬರಲು ಪ್ರಯತ್ನಿಸಿತು. ರಜನಿ ಬಾಲ ಅಲ್ಲಾಡಿಸಿಕೊಂಡು ಕುಣಿದಳು. ಗಂಟಪ್ಪ ಕಣ್ಣೀರು ಹಾಕುತ್ತಲೆ ಕಾಲಿಗೆ ತಣ್ಣೀರು ಬಟ್ಟೆ ಕಟ್ಟಿ, ಹೆಗಲಿಗೆ ಹಾಕಿಕೊಂಡು ದಾರಿಗುಂಟ ಹೊರಟ. ಅವನನ್ನೇ ಎಲ್ಲರೂ ಹಿಂಬಾಲಿಸಿದರು. ಮತ್ತೊಬ್ಬ ದಣಿಯ ದರ್ಪದ ಸುಡು ಮಡಿಲಿಗೆ ಬೀಳುವ ತವಕದಿಂದ!

■ ಏಕಾಸ. ಆರ್ ಮೌರ್ಯ

ಸಂಕ್ರಾಂತಿ: ಆಹಾರ ಸಂಸ್ಕೃತಿ ಪ್ರಶ್ನೆಗ




ಒಬ್ಬ ಪೌರಾಣಿಕ ಅಥವಾ ಐತಿಹಾಸಿಕ ವ್ಯಕ್ತಿಯ ಬಗೆಗೆ ನಾವು ಹೇಗೆ ಹತ್ತು ಹಲವು ಕಥೆಗಳನ್ನು ಕೇಳಿದ್ದೇವೋ ಹಾಗೆ ಪಿ.ಲಂಕೇಶ್ ಮೇಷ್ಟ್ರು ಅವರ ವ್ಯಕ್ತಿತ್ವದ ಬಗೆಗೆ ಹಲವು ಸಂಗತಿಗಳು ಚಾಲ್ತಿಯಲ್ಲಿರುವುದನ್ನು ನಾನು ಕೇಳಿಸಿಕೊಂಡಿದ್ದೇನೆ. ಅವು ಕೇವಲ ಕಟ್ಟು ಕಥೆಗಳಲ್ಲ ಎಂದೂ ಸ್ಪಷ್ಟಪಡಿಸಿಕೊಂಡಿದ್ದೇನೆ. ಅಂತಹ ಕಥೆಗಳನ್ನು ಕೇಳಿದಾಗೆಲ್ಲ ಮೇಷ್ಟ್ರು ಬಗೆಗೆ ನನ್ನ ಆಸಕ್ತಿ ಒಲವು ಹೆಚ್ಚುತ್ತಲೇ ಹೋಯಿತು. ಕೆಲವು ವ್ಯಕ್ತಿಗಳು ಹೀಗೆ ತಾವಿರುವ ಕಾಲದಲ್ಲೂ, ನಂತರದಲ್ಲೂ ತಮ್ಮ ವ್ಯಕ್ತಿತ್ವದ ಅಸಮಾನ್ಯ ಪ್ರಭಾವವನ್ನು ಬೀರುತ್ತಾರೆ. ಅಂತಹ ವ್ಯಕ್ತಿತ್ವ ಲಂಕೇಶ್ ಅವರದು. ಒಬ್ಬ ವ್ಯಕ್ತಿಯನ್ನು ಎರಡು ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು. ಒಂದು ಅವರ ಜೀವನ ಕ್ರಮದ ಮುಖಾಂತರ, ಎರಡನೆಯದು ಅವರ ಬರವಣಿಗೆಗಳು, ವೈಚಾರಿಕತೆ ಮೂಲಕ. ವ್ಯಕ್ತಿಯನ್ನು ಅರಿಯಲು ಇವೆರಡೂ ಭಿನ್ನ ಮಾರ್ಗಗಳು ಎಂದು ಹೇಳಬಹುದಾದರೂ ಈ ಭಿನ್ನತೆಗಳ ಸಮನ್ವಯ ಒಬ್ಬ ವ್ಯಕ್ತಿಯಲ್ಲಿ ಕಾಣುವುದು ಕಷ್ಟ ಸಾಧ್ಯ. ನಿಜ ವ್ಯಕ್ತಿ ಜೀವನವೇ ಬೇರೆ, ಆತನ ಬರವಣಿಗೆಯೇ ಬೇರೆ, ಎರಡಕ್ಕೂ ತಾಳೆ ಹಾಕಿ ನೋಡುವುದೂ ಕಷ್ಟ. ವ್ಯಕ್ತಿಯ ಜೀವನದಂತೆ ಆತನ ಸಾಹಿತ್ಯ ಆತ ರಚಿಸಿದ ಸಾಹಿತ್ಯದಂತೆ ಜೀವನ ಕ್ರಮ ಇರಬೇಕೆಂದು ಒತ್ತಾಯವೂ ಇಲ್ಲ, ಆದರೆ ಮೇಷ್ಟ್ರ ವಿಚಾರದಲ್ಲಿ ಜೀವನ, ವೈಚಾರಿಕತೆ ಒಂದನ್ನೊಂದು ಪ್ರತಿಫಲಿಸುತ್ತದೆ ಎಂದೇ ನನ್ನ ಭಾವನೆ. ಲಂಕೇಶ್ ಅವರ ಜೀವನ, ವೈಚಾರಿಕತೆಗಳು ಹಲವು ವೈರುಧ್ಯಗಳನ್ನು ಹೊಂದಿದ್ದಾಗ್ಯೂ ಆ ವೈರುಧ್ಯಗಳು ಕನ್ನಡ ಸಾಹಿತ್ಯದಲ್ಲಿ ಅವರ ವಿಶಿಷ್ಟ ಗುರುತುಗಳಾಗಿ ಕಂಡಿರಲೂ ಸಾಕು. ಮೇಷ್ಟ್ರ ಒಳಗಿದ್ದ ತಾಯ್ತನ, ಅಪ್ಪತನಗಳು ಆ ಕಾಲದಲ್ಲಿ ಹಲವರಿಗೆ ಬೆರಗನ್ನು ಉಂಟು ಮಾಡಿದ್ದವು ಎಂದು ಕೇಳಿ ತಿಳಿದಿದ್ದೇನೆ. ಇಂತಹ ಬೆರಗಿನ ವ್ಯಕ್ತಿತ್ವವನ್ನು ನಾನು ಕಾಣಲಾಗಲಿಲ್ಲವೇನೋ ನಿಜ. ಆದರೆ ಲಂಕೇಶರ ಹಲವು ಕೃತಿಗಳನ್ನು ಓದುವುದರ ಮೂಲಕ ಅವರ ಸಾಂಗತ್ಯವನ್ನು ಆಗುಮಾಡಿಕೊಳ್ಳುತ್ತಿದ್ದೇನೆ.

ಮೇಲೆ ನಾನು ಲಂಕೇಶ್ ಮೇಷ್ಟ್ರು ಬಗೆಗೆ ಸ್ವಲ್ಪ ಪ್ರೀತಿಯಿಂದ, ಭಾವನಾತ್ಮಕ ನೆಲೆಯಲ್ಲಿ ವಿವರಿಸಿದ್ದರೂ ವರ್ತಮಾನದ ತಲ್ಲಣಗಳಿಗೆ ಅವರು ಹೇಗೆ ಮುಖಾಮುಖಿಯಾಗಿದ್ದಾರೆ ಎಂದು ಹೇಳುವುದೇ ನನ್ನ ಲೇಖನದ ಉದ್ದೇಶ. ನಾನು ಹೀಗೆ ಹೇಳುವ ಹೊತ್ತಿನಲ್ಲಿ ದೇಶ, ರಾಜ್ಯದಲ್ಲಿ ಹಲವು ರಾಜಕೀಯ, ಸಾಮಾಜಿಕ ಬದಲಾವಣೆಗಳು ವೈಚಾರಿಕ ಜಗತ್ತು ಆತಂಕಗೊಳ್ಳುವ ಹಾಗೆ ಮಾಡುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಈ ಬದಲಾವಣೆಗಳು ವ್ಯಕ್ತಿ ಸಮಾಜದ ಮೇಲೆ ವ್ಯತಿರಿಕ್ತ ಪರಿಣಾಮ, ಒತ್ತಡಗಳನ್ನು ನಿರ್ಮಿಸುತ್ತಿರುವುದನ್ನು ಗ್ರಹಿಸಬಹುದು. ಅಂದರೆ ವ್ಯಕ್ತಿಯ ನಿಲುವುಗಳು, ಸಮಾಜದ ನಿಲುವುಗಳು ಒಂದರ ಮೇಲೊಂದು ಪ್ರಭಾವಿಸುತ್ತಲೇ ಇರುತ್ತದೆ ನಿಜ. ಆದರೆ ಇಲ್ಲಿ ನಿಯಂತ್ರಣವಿರದೇ 'ಸಹ ಸಂಬಂಧಗಳು' ಇರಬೇಕು. ಯಾವ ಸಮಾಜದಲ್ಲಿ ವ್ಯಕ್ತಿಯ ವೈಯಕ್ತಿಕ ಹಿತಾಸಕ್ತಿಗಳು, ಧೋರಣೆಗಳ ಮೇಲೆ ಅನಾಮತ್ತಾಗಿ ಹೇರಿಕೆ, ನಿಯಂತ್ರಣ ಹೇರಲಾಗುತ್ತದೆಯೋ ಆ ಸಮಾಜವು ಸಂಕೀರ್ಣಗೊಂಡಿದೆ ಎಂದೇ ಅರ್ಥ. ಬಹುಶಃ ಇಂಡಿಯಾ ದೇಶ ಈ ಸಂಕೀರ್ಣತೆಯನ್ನು ಒಪ್ಪಿಕೊಂಡು, ಪ್ರತಿಪಾದಿಸಿಕೊಂಡೇ ಬಂದಿದೆ. ಈ ಸಂಕೀರ್ಣತೆಯಿಂದ ಬಿಡಿಸಿಕೊಳ್ಳುವ, ಒಡೆದು ಹಾಕುವ ಯಾವುದೇ ಒಂದು ಸಣ್ಣ ಪ್ರಯತ್ನವನ್ನು 'ನಮ್ಮ ಪ್ರಬುದ್ಧ ಭಾರತದಲ್ಲಿ' ಸಹಿಸಲಾಗುವುದಿಲ್ಲ, ಇದು ದುರಂತವೂ ಹೌದು, ವಾಸ್ತವವೂ ಹೌದು.

ಹಿಂದಿನಿಂದಲೂ ಇರುವ ಜಾತಿ ಅಸಮಾನತೆ, ಧಾರ್ಮಿಕ ಅಸಹನತೆ, ಲಿಂಗತಾರತಮ್ಯ, ಕೋಮುವಾದ, ಪ್ರಾದೇಶಿಕ-ಭಾಷಾ ತಾರತಮ್ಯ ಮುಂತಾದ ಜ್ವಲಂತ ಸಮಸ್ಯೆಗಳು ನಮ್ಮ ಸಮಾಜವನ್ನು 'ನಿಗಿ-ನಿಗಿ ಕೆಂಡ'ವಾಗಿಸಿದೆ. ಯಾವುದು ಅಮುಖ್ಯ, ಮಾನವೀಯಗೊಳ್ಳಬೇಕಿತ್ತೋ ಅವುಗಳೇ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿರುವುದು ವಾಸ್ತವ. ಜಾತಿಯ ಹೆಸರಿನಲ್ಲಿ ದಲಿತ, ಶೋಷಿತರ ಮೇಲಿನ ನಿರಂತರ ಹಲ್ಲೆಗಳು, ಕೋಮುವಾದದ ಹೆಸರಿನಲ್ಲಿ ಅನೈತಿಕ ರೌಡಿಗಿರಿ, ವೈಚಾರಿಕತೆಗೆ ಗುಂಡಿನೇಟು... ಈ ಮೇಲಾಟಗಳೆಲ್ಲವೂ ನಾವು ಸಮಾಜವನ್ನು ನೋಡುವ, ಅರ್ಥೈಸುವ ಕ್ರಮಗಳನ್ನು ಬದಲಾಯಿಸಿಕೊಳ್ಳಲು ಒತ್ತಾಯಿಸುತ್ತವೆ. ಇದರ ಜೊತೆಗೆ ಆಹಾರ ಕ್ರಮದ ಆಯ್ಕೆ, ಆಹಾರ ಸಂಸ್ಕೃತಿಯ ಪ್ರಶ್ನೆ ಅತ್ಯಂತ ಸೂಕ್ಷ್ಮವಾಗಿ ಮುನ್ನೆಲೆಗೆ ಬರುತ್ತಿದೆ. ಒಂದು ರೀತಿಯಲ್ಲಿ ಇದನ್ನು 'ಆಹಾರದ ರಾಜಕಾರಣ' ಎಂದೇ ಕರೆಯಬಹುದೇನೋ. ಇದು 'ವಚನ ಚಳವಳಿ'ಯ ಕಾಲದ ಪ್ರಶ್ನೆಯಾಗಿದ್ದರೂ ಈಗ ಅದರ ಸ್ವರೂಪ ಬದಲಾಗಿ 'ಕೋಮುವಾದ'ಕ್ಕೆ ಅಂಟಿಕೊಂಡು ಅದರ ಚಹರೆ ಬದಲಾಗಿ ಹೋಗಿದೆ. ಆಹಾರ-ಪಾನಿಯಗಳು ಮನುಷ್ಯನ ಆಯ್ಕೆ ವಿಚಾರಗಳು. ನಿಖರವಾಗಿ ಹೇಳುವುದಾದರೆ ವ್ಯಕ್ತಿಗತ ನೆಲೆಗೆ ಸಂಬಂಧಿಸಿದ್ದು. ಅದು ಒಂದು ಸಮುದಾಯದ 'ಸಹಜ ಆಹಾರ ಕ್ರಮ'ವೂ ಹೌದು. ಇದು ತಪ್ಪು ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ, ವ್ಯಕ್ತಿಯ ಸಹಜವಾದ ಆಹಾರ ಕ್ರಮವನ್ನು (ಸಸ್ಯಾಹಾರ, ಮಾಂಸಾಹಾರ/ಗೋಮಾಂಸ) ಬಲವಂತವಾಗಿ ಅದನ್ನು ನಿಯಂತ್ರಿಸುವ, ನಿರಾಕರಿಸುವ, ಬದಲಾಯಿಸಿ ಎಂದು ನಿರ್ದೇಶಿಸುವ ಅಧಿಕಾರ ಯಾವೊಬ್ಬನಿಗೂ ಇಲ್ಲ, ಇರಲಾರದು. ಆದರೆ ಕೆಲವರು ಈಗ ಆಹಾರ ಕ್ರಮದ ಮೇಲೆ ನಿಯಂತ್ರಿಸುವ, ಬದಲಾಯಿಸಿ ಎಂದು ನಿರ್ದೇಶಿಸುವುನ್ನು ಕಾಣಬಹುದಾಗದೆ.

ಇದು ವರ್ತಮಾನದಲ್ಲಿ ಸಮಸ್ಯಾತ್ಮಕ, ಪ್ರಶ್ನಾರ್ಹವಾದದು. ಯಾರು ಹೀಗೆ ಮತ್ತೊಬ್ಬರ ಆಹಾರ ಕ್ರಮದ ಮೇಲೆ ನಿಯಂತ್ರಣಕ್ಕೆ ಪ್ರಯತ್ನಿಸುತ್ತಿದ್ದಾರೋ ಅವರಿಗೆ ನಮ್ಮ ಭಿನ್ನಮತವಿದೆ. ವಚನ ಚಳವಳಿಯ ಕಾಲದಲ್ಲೇ 'ಆಹಾರ ಸಂಸ್ಕೃತಿ' ಪ್ರಶ್ನೆಯು ಚರ್ಚಿತವಾಗಿ 'ಆಹಾರ ಕ್ರಮ, ತಳಸಮುದಾಯದವರು ಶರಣರಾಗಿ ಬದಲಾದರೂ ಅವರ ಜಾತಿಯ ಕೀಳರಿಮೆ ಬದಲಾಗುವುದಿಲ್ಲ' ಎಂಬುದೂ ಸಾಧಿತವಾಗಿದೆ. ಲಂಕೇಶ್ ಅವರ 'ಸಂಕ್ರಾಂತಿ' ನಾಟಕವು 'ಆಹಾರ ಸಂಸ್ಕೃತಿ' ನೆಲೆಯಲ್ಲಿ ವಚನ ಚಳವಳಿಯನ್ನು ವಿಮರ್ಶಿಸುತ್ತದೆ. ಶರಣ ಚಳವಳಿಯ ಗ್ರಹಿಕೆಯಲ್ಲಿ ಮಾಂಸಹಾರ, ಮದ್ಯಪಾನವನ್ನು ತಳಸಮುದಾಯಗಳು ತ್ಯಜಿಸಿದರೆ ಜಾತಿಯ ಕೀಳರಿಮೆ ಇಲ್ಲವಾಗುತ್ತದೆ ಎಂಬುದಾಗಿತ್ತು, ವಾಸ್ತವವಾಗಿ ಈ ಗ್ರಹಿಕೆಯೇ ಸಮಸ್ಯಾತ್ಮಕವಾದದು. ಅಂದರೆ ಮಾಂಸಾಹಾರಕ್ಕೂ ಮತ್ತು ಆಯಾ ಜಾತಿಗಳ ಸ್ಥಾನಗಳಿಗೂ ಸಂಬಂಧವನ್ನು ಕಲ್ಪಿಸುವುದು ಮತ್ತು ಈ ಕಾರಣಕ್ಕೇ ಅವರುಗಳ ಜಾತಿ ಮೇಲು-ಕೀಳಾಗಿದೆ ಎಂದು ಒಂದು ಬಗೆಯ ನಂಬಿಕೆ ಶರಣ ಚಳವಳಿಯ ಒಳಗಡೆ ಕೆಲಸ ಮಾಡುತ್ತಿತ್ತು, ಈ ಕಾರಣಕ್ಕಾಗಿ ಒಂದಂಶದ ಕಾರ್ಯಕ್ರಮವಾಗಿ ತಳಸಮುದಾಯಗಳ ಆಹಾರ ಕ್ರಮವನ್ನು ಬದಲಾಯಿಸಿ ಅವರೂ ಸಸ್ಯಹಾರಿಗಳಾಗುವಂತೆ ಮಾಡುವುದಾಗಿತ್ತು, ಅಂದರೆ ಆಹಾರ ಶುದ್ಧೀಕರಣದಿಂದ ಜಾತಿ ಶುದ್ಧೀಕರಣ ಸಾಧ್ಯ ಎಂಬ ನಂಬಿಕೆ, ಗ್ರಹಿಕೆ. ಇದನ್ನು ಮೇಷ್ಟ್ರು 'ಸಂಕ್ರಾಂತಿ' ನಾಟಕದ ಸಂವಿಧಾನದ ಒಳಗೆ ತಂದು ಮೇಲಿನ ಗ್ರಹಿಕೆಯನ್ನು ಪ್ರಶ್ನಿಸುತ್ತಾರೆ.

ನಾಟಕದಲ್ಲಿ ಬಸವಣ್ಣ ಸಂಘಟಿಸಿದ ಶರಣ ಚಳವಳಿಯ ಆಶಯದ ಮುಖವಾಣಿಯಾಗಿ 'ರುದ್ರ'ನಿದ್ದಾನೆ. ರುದ್ರ **Angry young man** ಸ್ವರೂಪದ ಪಾತ್ರ. ಬದಲಾವಣೆ ಪರವಾದ ಪಾತ್ರ. ರುದ್ರನಿಗೆ ಬಸವಣ್ಣನಲ್ಲಿ ಅಗಾಧವಾದ ಪ್ರೀತಿ, ನಂಬಿಕೆ. ರುದ್ರನು ತನ್ನ ಜಾತಿಯು ಅನುಭವಿಸಿದ



ಅಪಮಾನಕ್ಕೆ ತಾವು ರೂಢಿಸಿಕೊಂಡು ಬಂದ ತಮ್ಮ ಆಹಾರ ಪದ್ಧತಿ ಕಾರಣವೆಂದು ನಂಬಿದವನು. ಹೀಗಾಗಿ ತನ್ನ ಸಮುದಾಯಕ್ಕೆ ಶತಮಾನಗಳಿಂದ ಅಂಟಿದ ಕೀಳುತನವನ್ನು ಅಳಿಸಿಹಾಕಲು ಬಸವಣ್ಣ ಹೇಳಿದಂತೆ ಹೆಂಡ-ಕಂಡಗಳನ್ನು ತ್ಯಜಿಸಲು ತಾನೂ ಸೇರಿದಂತೆ ಹಲವರಿಗೆ ಮನವೊಲಿಸಲು ಪ್ರಯತ್ನಿಸುತ್ತಾನೆ. ಶರಣರಾದರೆ ತಮ್ಮ ಎಲ್ಲಾ ತರಹದ ಅಪಮಾನಗಳು ಇಲ್ಲವಾಗುತ್ತದೆಂಬ ನಂಬಿಕೆ. ವಾಸ್ತವವಾಗಿ, ಪ್ರಾಯೋಗಿಕವಾಗಿ ಅದು ಸಮಸ್ಯಾತ್ಮಕವೆಂಬ ಅರಿವು ಇಲ್ಲ.

ಶರಣ ಚಳವಳಿಯು ಆಹಾರ-ಪಾನಿಯಗಳಲ್ಲಿ ಬದಲಾವಣೆಗಳಾದರೆ, ಶುದ್ಧಿಕರಣವಾದರೆ ಜಾತಿ ಶುದ್ಧೀಕರಣವಾದಂತೆ ಎಂದು ಹೇಳುತ್ತದೆ. ಅಲ್ಲದೇ ಆಹಾರ ಶುದ್ಧೀಕರಣವನ್ನೇ ಜಾತಿಗಳ ಶುದ್ಧೀಕರಣಕ್ಕೆ ಸಾಮ್ಯತೆ (Similarity)ಯನ್ನಾಗಿ ಮಾಡಿದರು. ಇದು ವಿವೇಚನೆ ಮತ್ತು ಬಿಡುಗಡೆಯ ಮಾರ್ಗ ಅಲ್ಲ, ವಾಸ್ತವಿಕವಾಗಿ ಆಹಾರ ಶುದ್ಧೀಕರಣ ಮಾಡಿದರೆ ಜಾತಿ ಶುದ್ಧೀಕರಣ ಮಾಡಿದ ಹಾಗೆ ಅಲ್ಲವೇ ಅಲ್ಲ, ಇದು ವಚನ ಚಳವಳಿಯು ಜಾತಿಗಳ ಸ್ಥಿತಿಗತಿಗಳನ್ನು ಅರಿಯದ ಕ್ರಮದ ಗ್ರಹಿಕೆಯಲ್ಲಿನ ಸಮಸ್ಯೆಯೂ ಆಗಿದೆ. ಈ ಗ್ರಹಿಕೆಯನ್ನು 'ಸಂಕ್ರಾಂತಿ' ಬಲವಾಗಿ ಪ್ರಶ್ನಿಸುವುದನ್ನು ಕಾಣಬಹುದು. 'ಉಜ್ಜ' ಮತ್ತು 'ಕೆಂಚ' ಇವರು ಬಸವಣ್ಣನ 'ಆಹಾರ ಶುದ್ಧೀಕರಣ' ವಾದವನ್ನು ಬಲವಾಗಿ ಅಲ್ಲಗಳೆಯುತ್ತಾರೆ.

ಉಜ್ಜ: 'ಹೆಂಡ ತಕಬಾರದು ಉಜ್ಜಣ್ಣ' ಅಂತಾರೆ. ಮಗ ಸಹಿತ ಬಂದು ಬ್ಯಾಡಪ್ಪ ಇನ್ನ ಹೆಂಡ, ಕಂಡ ಅಂತಾನೆ. 'ಯಾಕ್ಲಾ ಮಗನೆ ಯಾಕ್ಲಾ' ಅಂತೀನಿ. 'ಶರಣ್ರು ಹೆಂಡ ಕಂಡ ತಕ್ಕಳ್ಳಕ್ಕಿಲ್ಲ' ಅಂತಾನೆ. 'ಹಂಗಾರ ಶರಣ್ರು ಹ್ಯಂಗಪ್ಪ ಬದುಕುತ್ತಾರೆ?' ಅಂತ ನಾನು ಅಂತೀನಿ. 'ಹ್ಯಂಗಂದ್ರ-ಬಸವಣ್ಣಾರಂಗೆ' ಅಂತಾನೆ ಮಗ. 'ಮಗ ಯಲ್ಲ ಬಿಟ್ಟು-ವಿನಪ ಮಾಡಬೇಕು' ಅಂತೀನಿ.

ಕೆಂಚ: ಬಸವಣ್ಣಾರಲ್ಲ, ಜವರಾಯನೆ ಬಂ ತಿಂಬೋದು ಬಿಡಕಾಗಲ್ಲ ಗೊತ್ತಾತ.

ಎಂದು ಮೇಲಿನಂತೆ 'ಉಜ್ಜ' ಮತ್ತು 'ಕೆ ತಮ್ಮ ಮೇಲೆ ಆಗುತ್ತಿರುವ ಪ್ರಜ್ಞಾ ಅಪ್ರಜ್ಞಾಪೂರ್ವಕ ಚಿಂತನೆಗಳ ಸವ ನಿರಾಕರಿಸುತ್ತಾರೆ, ವಿರೋಧಿಸುತ್ತಾರೆ. ತ ಸಂಸ್ಕೃತಿಯ ಹಳೆಯುಳಿಕೆಗಳನ್ನು ತಮ್ಮ ಸುಖ- ಹಂಚಿಕೊಳ್ಳುವ ಮಾರ್ಗಗಳನ್ನು ಪ್ರತಿಬಂ ಯಾವುದನ್ನು ಒಪ್ಪಲಾರರು. ಒತ್ತಾಯಪೂ ಯಾವುದೇ ಬದಲಾವಣೆಗಳನ್ನು ತಮ್ಮ ವಿರೋಧಿಸುತ್ತಾರೆ. ಕಾರಣ ಉಜ್ಜ-ಕೆಂಚರು ನೆಲೆಯ ಚಿಂತಕರಾಗಿದ್ದಾರೆ. ನಾಟಕದಲ್ಲಿ ನಿರೂಪಿ ಈ ದ್ವಂದ್ವಗಳನ್ನು ಹೇಗೆ ಅರ್ಥೈಸಿಕೊಳ್ಳಬ ವ್ಯಕ್ತಿಯ ದ್ವಂದ್ವಗಳೋ, ವ್ಯಕ್ತಿಗಳು ಪ್ರ ಸಮುದಾಯಗಳಲ್ಲಿನ ದ್ವಂದ್ವಗಳೋ? ಉತ್ತರ ಅಷ್ಟೇ. ನಾಟಕದ ಕೊನೆಯ ಭಾಗದಲ್ಲಿ ಉ ಸಂಕಟಗಳು ಪ್ರಮಾಣ ಮಾಡಲಾಗದ ಶರಣರಾಗುವುದಕ್ಕೂ ಹೆಂಡ-ಕಂಡ ಬಿ ಇರುತ್ತಿರುವ ಸಂಬಂಧವನ್ನು ಒಪ್ಪಲಾಗುತ್ತಿಲ್ಲ. ಅಂತೆಯೇ 'ಸಂ ದಿನದಂದು 'ಉಜ್ಜ' ಮಾಡಲಾರದವನಾಗಿದ್ದಾನೆ. ಅದು ಅ ಪ್ರತಿಭಟನೆಯೂ ಆಗಿರುವುದನ್ನು ಗವ ಅದಕ್ಕೆಂದೇ 'ಉಷಾ' ಉಜ್ಜನ ಬೆಂಬಲಕ್ಕೆ ಆಗ ಉಷಾ "ಕೆಲವರಿಂದ ಕೆಲವು ಪ್ರಮಾಣ ಮಾತ್ರ ಸಾಧ್ಯ. ಅದು ನೀನೆಂಥ ಶರಣ" ಎಂದು ಆಹಾರ ಸಂ ಬಲವಂತವಾಗಿ ಬದಲಾಯಿಸುವ, ನಿ ಧೋರಣೆಗೆ ಅವಳು ಪ್ರತಿರೋಧ ತ ಕೇವಲ ಪ್ರಮಾಣವೆಂಬುದು ಸಮುದಾಯಗಳ ಸ್ಥಿತಿಗತಿಗಳನ್ನು ಬದ ವುದಿಲ್ಲ ಎಂಬುದು ಉಷಾಳ ನಂಬಿಕೆ ಹೇಗೆ ಸಂತೋಷವಾಗಿರಲು ಸಾಧ್ಯವೋ ಇರುವುದಕ್ಕೆ ಬಿಡಬೇಕೆಂಬುದು ಅವಳ ವಾದಂತೆ ಕಾಣಿಸುತ್ತದೆ. ಉಷೆ ಕೇವಲ ಅಲ್ಲ ಒಂದು ಸಮುದಾಯದ ದನಿಯ ನಾಡುತ್ತಿದ್ದಾಳೆ. ಉಷೆಯು ತಾರ್ಕಿಕ ಉ ನೀಡುತ್ತಿಲ್ಲ, ಬದಲಾಗಿ ತಾರ್ಕಿಕ ಭಿನ್ನ ಹೂಡುತ್ತಿದ್ದಾಳೆ. ಈ ಭಿನ್ನಮತವು ಆಯ್ಕೆಯನ್ನು ಬಲವಾಗಿ ಸಮರ್ಥಿಸು

ಇದು ಲಂಕೇಶ್ ಅವರ ಬರ ಸ್ವರೂಪವೂ ಹೌದು. ಅಂದರೆ ನೆಲೆಯಿಂದ 'ಸಾಮುದಾಯಿಕ' ನೆಲಗೆ ಸ್ವರೂಪವು ಇಲ್ಲಿದೆ. ಈ ನೆಲೆಯಲ್ಲಿ ಅವರು ಸ್ಥಾಪಿತ ಅಥವಾ ಪ್ರಬಲ ಪ್ರತಿರೋಧ ತೋರುತ್ತಲೇ, ವ್ಯವಸ್ಥೆಯೊಂದಿಗೆ ಇಳಿಯುತ್ತಾರೆ. ಮೇಷ್ಟ್ರು ಬಸವಣ್ಣ, ರುದ ಉಷಾ-ಉಜ್ಜ ಇವರುಗಳನ್ನು ಮುಖಾಮುಖಿ 'ಆಹಾರ ಶುದ್ಧೀಕರಣ' ಚಿಂತನೆಯ ವೈರು 'ಸಂಕ್ರಾಂತಿ'ಯಲ್ಲಿ ತೆರೆದಿಟ್ಟಿದ್ದಾರೆ. ಯಾವುದ ಧರ್ಮದವರು ಅನುಸರಿಸುವ 'ಸಹಜ ಆಹಾ ವನ್ನು ನಿರಾಕರಿಸುವ, ನಿಯಂತ್ರಿಸುವ, ಕೀಳೆಂದು ಮೌಲ್ಯ ವ್ಯವಸ್ಥೆಯ ಹಿತಾಸಕ್ತಿಗಳೇನು ಎ ನಾಟಕದಲ್ಲಿ ಬಯಲು ಮಾಡಿದ್ದಾರೆ. 'ಸಂಕ್ರಾಂತಿ 'ಆಹಾರ ಶುದ್ಧೀಕರಣ ಸಮಸ್ಯೆ'ಯನ್ನು ವರ್ತ ಇಟ್ಟು ನೋಡುವ ಸಾಧ್ಯತೆ ಇರುವ ಕಾರಣಕ್ಕಾಗಿ ಮತ್ತು 'ಸಂಕ್ರಾಂತಿ' ಮುಖ್ಯವಾಗುತ್ತದೆ. 'ಸಂಕ್ರಾಂತಿ' ಸದಾ ವರ್ತಮಾನದ ಹಲವು ತಲ್ಲಣಗಳಿಗೆ ಪ್ರ ಉತ್ತರಗಳನ್ನು ಅಡಗಿಸಿಕೊಂಡಿದೆ.

ಲಂಕೇಶ್ ಮೇಷ್ಟ್ರು ಯಾಕೆ ಮುಖ್ಯ ಎ 'ಸಂಕ್ರಾಂತಿ'ಯನ್ನೊಮ್ಮೆ ಓದಲೇಬೇಕು. ಈ ವರ್ತಮಾನವನ್ನು ಓದುವ ನಮ್ಮ ಗ್ರಹಿಕೆಯನ್ನು ಯನ್ನು ಬದಲಾಯಿಸಿಕೊಳ್ಳಬಹುದು. ಯಾಕೆ ಈ ಹೇಳುತ್ತಿರುವುದೆಂದರೆ ವರ್ತಮಾನದಲ್ಲಿ ನಡೆಯ 'ಗೋಮಾಂಸ ರಾಜಕಾರಣ'ಕ್ಕೂ ನಮ್ಮ ಚ ವಿಸ್ತರಿಸುವುದಕ್ಕೆ, ಭಿನ್ನಮತ ಹೂಡುವುದಕ್ಕೆ 'ಸಂ ಯಲ್ಲಿಯ 'ಆಹಾರ ಶುದ್ಧೀಕರಣ' ಪ್ರಕರಣವನ್ನು ವುದು ಉತ್ತಮ. ಹೀಗಾಗಿಯೇ ಲಂಕೇಶ್ ಮೇ ಬರವಣಿಗೆಗಳು ವಾಸ್ತವವಾದಿ ಚಿಂತನೆಯ ಚಹರೆಗಳನ್ನು ತನ್ನೊಳಗೆ ಆಹ್ವಾನಿಸಿಕೊಂಡಿರುತ್ತ ಅವು ಹಲವು ಬಾರಿ ಅವರ ಬರವಣಿಗೆಗಳು ಆಪ್ತವೆನಿಸಿ ಬಿಡುತ್ತವೆ.

■ ನಟರಾಜ್ ಶ್ಯಾನುಭೋ



ಯೋಗೇಶ್ ಮಾಸ್ಟರ್


ಪುರಾಣದ ಹೂರಣ

ಮಾಟದ ಮಾಯೆಗೆ ಮರುಳಾಗಿ

. ರಾಜಕುಮಾರ್ ಅಭಿನಯದ, ಸಿದ್ದಲಿಂಗಯ್ಯ ರ್ದೇಶನದ ಗ್ರಾಮೀಣ ಸೊಗಡಿನ 'ಬಂಗಾರದ ಚಲನಚಿತ್ರದಿಂದ ಪ್ರೇರಿತರಾಗಿ ಹಳ್ಳಿಯನ್ನು ಂದಿದ್ದ ಎಷ್ಟೋ ಜನ ಮರಳಿ ಹಳ್ಳಿಗಳಿಗೇ ಗಲು ಹಿಡಿದಿದ್ದು ನಿಜ.

ೀರಾ ಸನಿಹದ ಸಂಬಂಧಿಯೋರ್ವ ಮದುವೆ ಯಾವುದೋ ಹೆಣ್ಣು ನೋಡಲು ಹೋಗಿದ್ದ. ಪ್ಪಿಗೆಯಾಗಿ ಬಂದಮೇಲೆ ಅವರಿವರು ನಮ್ಮ ು ಕಿವಿ ಊದಿದರು. ಅದೇನೆಂದರೆ, ಆ ಹೆಣ್ಣು ಮುನ್ನ ಯಾರನ್ನೋ ಪ್ರೀತಿಸಿದ್ದಳು. ಎಲ್ಲಿಗೋ ದ್ದಳು. ಮತ್ತೊಂದು, ಮಗದೊಂದು, ಹೀಗೇ. ಸಂಬಂಧಿಯ ತಲೆ ಕೆಟ್ಟಿತು. ಅವನ ಮನೆಯ ಷ್ಟು ಅವನು ಮಾತುಗಳನ್ನಾಡಿಕೊಂಡು ಕಡೆಗೆ ಂದು ಬಿಟ್ಟುಬಿಟ್ಟರು. ಅವನಿಗೆ ತಲೆಕೆಟ್ಟು ಬಿಡುಗಡೆಯಾಗಿದ್ದ 'ಬೆಂಕಿಯ ಬಲೆ' ಸಿನಿಮಾಗೆ ದರಲ್ಲಿ ಮುಸುರಿ ಕೃಷ್ಣಮೂರ್ತಿ ನಾಯಕಿ ಗೆ ಅಪಪ್ರಚಾರವನ್ನು ಮಾಡುತ್ತಿರುತ್ತಾನೆ. ಅವಳನ್ನು ಾಗಲು ನೋಡಲು ಬಂದಿದ್ದ ನಾಯಕ ಅನಂತ್ ಗೇ ಅವನ ತಂದೆ ಅವಳನ್ನು ಇಟ್ಟುಕೊಂಡು ಮಾಡುತ್ತಾನೆ, ಅವಳ ನಡವಳಿಕೆ ಸರಿ ಇಲ್ಲ ಹೇಳಿದರೆ "ನಾನು ಮೇಷ್ಟ್ರು. ನಾನು ಸರಿ . ನಾನು ಕರೆದುಕೊಂಡು ಹೋದರೆ ಅವರಪ್ಪ ಜಿನೆಸ್ ಮಾಡಲ್ಲ" ಎಂದೆಲ್ಲಾ ತುಂಬಾ ದಲೇ ನಾಯಕ ಉತ್ತರಿಸುತ್ತಾನೆ. "ಇಷ್ಟೆಲ್ಲಾ ೂ ನಿನಗೇನೂ ಅನ್ನಿಸೋಲ್ಲವಾ?" ಎಂದು ಕೇಳಿದಾಗ "ಹೌದಲ್ಲಾ?" ಎಂದು ಅನಂತ್ ತ್ತಾನೆ ಅವನ ಮುಖಕ್ಕೆ ಗುದ್ದುತ್ತಾನೆ ಮತ್ತು ಹೆಣ್ಣಿನ ಬಗ್ಗೆ ಆ ರೀತಿ ಮಾತಾಡಿ ಹೆಸರು ಡುವ ಕೆಲಸ ಮಾಡಿದರೆ ಸುಮ್ಮನಿರುವುದಿಲ್ಲ ಚ್ಚರಿಸುತ್ತಾನೆ. ಈ ದೃಶ್ಯ ನಮ್ಮ ಸಂಬಂಧಿಯ ಾವ ಬೀರಿತು. ಅವನು ಹೆಣ್ಣಿನೊಂದಿಗೆ ತಾನು ಷಯವನ್ನು ಮಾತಾಡಿ ತನ್ನ ಸಂದೇಹವನ್ನು







ಂಡ. ನಂತರ ಮದುವೆಯೂ ಆಯಿತು. ವವು. ಮೊಮ್ಮಕ್ಕಳೂ ಆದವು. ತಮ್ಮ ಯಶಸ್ವೀ ಚೆನ್ನಾಗಿಯೇ ನಿಭಾಯಿಸುತ್ತಿದ್ದಾರೆ.

ಷಯಕ್ಕೆ ಬರುತ್ತೇನೆ. ಈ ಹಿಂದೆ ದೇವರು, ಸ್ಕೃತಿ ಎಂದು ಹೇಗೆ ಸಾಹಿತ್ಯ, ಸಂಗೀತ, ಮೂಲಕ ಜನರಿಗೆ ದಾಟಿಸುತ್ತಿದ್ದರೋ ಹಾಗೇ ಯಗಳು ಇಂದು ಚಲನಚಿತ್ರಗಳ ಮೂಲಕ ಮೊಳಗೆ ಪ್ರವೇಶಿಸುತ್ತಿವೆ. ದೇವರು, ಧರ್ಮ ಚಾರಗಳೂ ಅಷ್ಟೇಯೇ. ಮುನ್ನವೇ ಇರುವಂತ ಚಲನಚಿತ್ರಗಳ ಮೂಲಕ ಮತ್ತಷ್ಟು ಗಾಢವಾಗಿ ವಾಗಿಯೂ ಬಲವಾಗುತ್ತಾ ಹೋಗುತ್ತವೆ. ಮೂವರೆ ಗಂಟೆ ಕತ್ತಲಮನೆಯಲ್ಲಿ ಕಣ್ಣು ನ್ನೂ ಕೇಂದ್ರೀಕರಿಸುತ್ತಾ ಸಿನಿಮಾದ ಮೂಲಕ ಮ ಸಂಮೋಹನಕ್ಕೆ ಒಳಗಾಗುತ್ತಾರೆ.

ಜಗನ್ಮೋಹಿನಿ

ದಿನಗಳಲ್ಲಿ 'ಪಾತಾಳ ಭೈರವಿ', 'ರತ್ನ ಗಿನ 'ಜಗನ್ಮೋಹಿನಿ'ಯಂತಹ ಮಾಯಾ ಚಲನಚಿತ್ರಗಳು ನಾವು ಕೇಳಿದ್ದ ಮತ್ತು ಓದಿದ್ದ ಗಳ ಚಿತ್ರಣ ಕಟ್ಟಿಕೊಟ್ಟಿದ್ದವು. ಜೊತೆಗೆ ಜಗತ್ತಿನಲ್ಲಿ ಅಸಮಾನ್ಯ ಎಂದು ನಿರೂಪಿಸಲು ಸಂತೆ ಏನೋ ಒಂದು ಪವಾಡವನ್ನು ದೂ ಭ್ರಮಿಸುತ್ತಿದ್ದ ದಿನಗಳವು.

ೋ ಮೇಲಿನ ಕೋಪವನ್ನು ತೀರಿಸಿಕೊಳ್ಳಲು, ಆಸೆಯನ್ನು ನೆರವೇರಿಸಿಕೊಳ್ಳಲು, ಯಾವುದೋ ಮತ್ತು ಕರ್ತವ್ಯಗಳನ್ನು ಪೂರೈಸಲು ಅತಿಮಾನವ ನನ್ನ ಜೀವನದಲ್ಲೂ ಆಗಲೇ ಬೇಕು ಎಂದು ಗಾಗಿ ನಾನು ಮಾಧ್ಯಮಿಕ ಶಾಲೆಯಲ್ಲಿ ಕೆಲವೊಂದು ಯಂತ್ರ-ಮಂತ್ರ-ತಂತ್ರಗಳ ಕುರಿತು ಪುಸ್ತಕದಿಂದ ಓದುತ್ತಿದ್ದೆ, ಅವುಗಳಲ್ಲಿ ಸ್ಸು ಸಾಧನೆ ಮಾಡಲು ಗಂಭೀರವಾಗಿ ಪ್ರಯತ್ನವನ್ನೂ ಮಾಡಿದ್ದೆ. ಮೈಸೂರು ರಸ್ತೆಯ ಸಿರ್ಸಿ ಸರ್ಕಲ್ ಸಮೀಪದ ಗೌರಿಪಾಳ್ಯದ ನನ್ನ ಸ್ನೇಹಿತನೊಬ್ಬನ ಜೊತೆಗೆ ಮನೆಯನ್ನು ಬಿಟ್ಟು ಓಡಿ ಹೋಗಿ ಸರಿಯಾದ ಗುರುವೊಬ್ಬನನ್ನು ಹಿಡಿದು, ಮಾಟಾದಿ ವಿದ್ಯೆಗಳನ್ನೆಲ್ಲಾ ಕಲಿತು ಚಾಮರಾಜಪೇಟೆಯ ಮೇಲೆಲ್ಲಾ ಹಾರಾಡುವ ಕನಸು ಕಂಡಿದ್ದೆ. ನಮ್ಮ ದೇಶಕ್ಕೆ ಶತ್ರುಗಳಿಂದ ಬರುವ ದಾಳಿಯ ಮುನ್ಸೂಚನೆಗಳನ್ನೆಲ್ಲಾ ಕರಿಬೆಕ್ಕಿನ ಮೂಳೆಯ ಬಟ್ಟಲಿನ ಎಣ್ಣೆಯಲ್ಲಿಯೇ ಕಂಡು ತಿಳಿಸುವಂತಹ ರಕ್ಷಣಾ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರಲು ಆಸೆ ಪಟ್ಟಿದ್ದೆ. ಪ್ರತಿಫಲ ಮಾತ್ರ ಶೂನ್ಯ. ಯಾವುದೂ ಸಿದ್ಧಿಯಾಗಲಿಲ್ಲ. ಪಾಪ ಯೋಗೀಶ!

ನಿಧಿಯಾಸೆಯ ವಿಧಿ

ಚಾಮರಾಜಪೇಟೆಯ ಒಂಭತ್ತನೇ ಅಡ್ಡರಸ್ತೆಯಲ್ಲಿನ ಒಂದು ವಠಾರದ ಸಣ್ಣ ಮನೆಯಲ್ಲಿ ವಾಸವಿದ್ದ ನಮ್ಮ ಕುಟುಂಬದ ಯಜಮಾನಿಯಾಗಿದ್ದ, ನಮ್ಮಜ್ಜಿ ಪಾರ್ವತಮ್ಮನವರಿಗೆ ಯಾರೋ ನಿಧಿಯ ಹುಚ್ಚು ಹಿಡಿಸಿದ್ದರು. ಬಹು ಸಿರಿವಂತಿಕೆಯಲ್ಲಿದ್ದು ಔದಾರ್ಯದಿಂದ ಮತ್ತು ಆರ್ಥಿಕ ಸ್ವಾತಂತ್ರ್ಯದಿಂದ ಬದುಕಿದ ನಮ್ಮಜ್ಜಿಗೆ ನಂತರ ಕಾಡಿದ ಕಡುಬಡತನದಿಂದ ಆಗ ದಿಕ್ಕು ಕಾಣದೇಹೋಗಿದ್ದು ನಿಜ. ನಿಜಜೀವನದಲ್ಲಿ ಬಹಳ ಪ್ರಾಕ್ಟಿಕಲ್ ಆಗಿದ್ದು ಜಾತಿ, ಧರ್ಮ, ದೇವರುಗಳ ಸ್ಥಾಪಕ ನಂಬುಗೆಗಳನ್ನೆಲ್ಲಾ ಒಂದು ಹಂತಕ್ಕೆ ತಿರಸ್ಕರಿಸಿ ಯಾವಾಗಲೂ ಪ್ರಗತಿಪರವಾಗಿದ್ದ ನಮ್ಮ ಅಜ್ಜಿಯ ವೈಚಾರಿಕ ನೆಲೆಯನ್ನು ಆಗ ಕಾಡಿದ್ದ ಆರ್ಥಿಕ ಮುಗ್ಗಟ್ಟು ಅಲುಗಾಡಿಸಿದ್ದೇ ಅಲ್ಲದೇ, ಧನ ಪ್ರಾಪ್ತಿಗೆ ಯಾರು ಯಾವುದೇ ಮಂತ್ರವನ್ನು ಹೇಳಿಕೊಟ್ಟರೂ ಪಠಿಸಲು, ಪೂಜೆ ಇತ್ಯಾದಿಗಳನ್ನು ಮಾಡುವಷ್ಟು ಸೋತಿದ್ದರು. ಸಾಲಸೋಲಗಳಿಂದ ಕುಸಿದಿದ್ದ ವೃದ್ಧೆಗೆ ಹಿರಿಯ ಮಗ ಮನೆಬಿಟ್ಟು ಹೊರಟು ಹೋಗಿದ್ದ ನೋವು ಕೂಡ ಸೇರಿತ್ತು. ಮಗ ಮರಳಿ ಮನೆಗೆ ಬರಲಿ ಎಂದೂ, ಸಾಲಮುಕ್ತವಾಗಿ ಹಿಂದಿನ ಆರ್ಥಿಕತೆಯ ಸಾಮರ್ಥ್ಯ ಬರಲೆಂದು ಆಕೆ ತನ್ನ ವೃದ್ಧಾಪ್ಯದ ಮಿತಿಯಲ್ಲಿ ಮಾಡಬಹುದಾದುದನ್ನೆಲ್ಲಾ ಮಾಡುತ್ತಿದ್ದರು. ಅದರಲ್ಲಿಯೇ ಈ ಪೂಜೆ, ಮಂತ್ರ, ಅಂಜನಾ ಮತ್ತು ಜ್ಯೋತಿಷ್ಯಗಳ ಪ್ರಯೋಗಗಳು.

ಆಗಲೇ ನಮ್ಮ ಮನೆಯ ಅಡುಗೆ ಮನೆಯ ಮೂಲೆಯಲ್ಲಿ, ಸೌದೆ-ಒಲೆಯ ಕೆಳಗೆ ನಿಧಿಯಿರುವುದೆಂದೂ ಅದಕ್ಕೆ ಸರ್ಪಗಳು ಕಾವಲಿರುವುದು ಎಂದೂ, ಅದಕ್ಕೆ ಸಂಬಂಧಪಟ್ಟ ಪೂಜೆ ಪುನಸ್ಕಾರಗಳನ್ನು ಮಾಡಿದರೆ ನಿಧಿ ತಾನಾಗೇ ಎದ್ದು ಬರುವುದು ಎಂದೂ ಮಾತುಗಳು ಕೇಳಿಬರುತ್ತಿದ್ದವು. ಹಾಗೆ ಹೇಳಿದ ತಂತ್ರಿಗಳಿಗೆ ತಮ್ಮೆರಡೂ ಕಿವಿಗಳನ್ನು ನೀಡಿದ್ದರು ನನ್ನಜ್ಜಿ. ತನ್ನ ಶ್ರೀಮಂತ ಮತ್ತು ಸರ್ಕಾರಿ ಅಧಿಕಾರಿ ಹುದ್ದೆಯಲ್ಲಿದ್ದ ಪತಿಯು ಮರಣಿಸಿದ ನಂತರ ಮಾನಸಿಕವಾಗಿ ಕುಸಿದಿದ್ದ ನಮ್ಮಜ್ಜಿ ಕಿವಿಗೆ ಹಿತವಾಗುವಂತಹ ಮಾತುಗಳನ್ನೆಲ್ಲಾ ನಂಬಿ ಪೂಜೆಗೆ, ಮಂತ್ರ ಅಥವಾ ತಂತ್ರ ಮಾಡಿಸಲು ಏನೇನೋ ಶ್ರಮ ಪಡುತ್ತಿದ್ದರು. ಯಾವುದೇ ನಿಧಿ ತುಂಬಿರುವ ಪಾತ್ರೆ ಮೇಲೆದ್ದು ಬರಲಿಲ್ಲ. ಒಂದು ದಿನ ನಮ್ಮಜ್ಜಿಗೆ ರೇಗಿ ಗಡಾರಿಯೊಂದನ್ನು ತೆಗೆದು ಕೊಂಡು ಅಲ್ಲಿದ್ದ ಒಲೆಯನ್ನು ಒಡೆದು ಅಗೆದುಬಿಟ್ಟರು. ಒಂದು ವೇಳೆ ಕಾವಲಿರುವ ಸರ್ಪ ತನ್ನನ್ನು ಕಚ್ಚಿ ಕೊಂದರೂ ನಿಧಿಯು ಕಷ್ಟದಲ್ಲಿರುವ ತನ್ನ ಮಕ್ಕಳಿಗೆ ಸಲ್ಲಲಿ, ಅವರು ಚೆನ್ನಾಗಿರಲಿ ಎಂದು ಭಾವಿಸಿದ್ದರೋ ಏನೋ. ಆದರೆ ಸಿಕ್ಕಿದ್ದು ಬರೀ ಮಣ್ಣು

ಆಗ ನಿಧಿ-ವಾದಕರು ಹೇಳಿದ್ದು, "ಆ ರೀತಿ ಬಲವಂತದಿಂದ ನಿಧಿಯನ್ನು ಪಡೆಯಲು ಹೋದರೆ, ನಿಧಿಯ ಪಾತ್ರೆ ಮಾಯವಾಗಿ ಬಿಡುತ್ತದೆ" ಎಂದು. ನಿಧಿಯ ಪಾತ್ರೆಯು ಭೂಗರ್ಭದಲ್ಲಿಯೂ ಒಂದೇ ಕಡೆ ಇರುವುದಿಲ್ಲ, ಮೆಲ್ಲನೆ ಜರುಗುತ್ತಾ ಇರುತ್ತದೆ ಎಂದೂ ಹೇಳುತ್ತಿದ್ದರು. ಆ ಮೂಲೆಯಲ್ಲಿ ನಿಧಿ ಇದೆಯೋ ಇಲ್ಲವೋ ಎಂದು ನೋಡಲು ಒಮ್ಮೆ ಅಂಜನಾ ಹಾಕಿಸಿದ್ದರು ನಮ್ಮಜ್ಜಿ.

ವೀಳ್ಯದೆಲೆಗೆ ಕಪ್ಪನ್ನು ಹಚ್ಚಿ ದೀಪದ ಬೆಳಕಿನಲ್ಲಿ ಅದನ್ನು ನೋಡುತ್ತಾ ಹೇಳಲು ಎಳೆಂಟು ವರ್ಷದೊಳಗಿರುವ ಬಾಲಕನೇ ಬೇಕೆಂದು ನನ್ನಿಂದ ನೋಡಿಸಿದ್ದರು. ಬಳಿದಿರುವ ಬರೀ ಮಸಿಯನ್ನು ನೋಡುತ್ತಾ ನನ್ನ ಆಸೆಯಂತೆ ಅಲ್ಲಿ ಏನೇನು ಇರಬೇಕೋ ಅದೆಲ್ಲವೂ ಆ ಮೂಲೆಯಲ್ಲಿದೆ ಎಂದು ಹೇಳಿ, ವ್ಯರ್ಥವಾಗಿ ನಮ್ಮಜ್ಜಿಗೆ ಪೂಜೆ ಮತ್ತು ಮಂತ್ರಗಳಿಗೆ ಮತ್ತಷ್ಟು ವೆಚ್ಚ ಮಾಡಿಸಿದ್ದೆ.

ಬಾಲ ಮತ್ತು ಜಡೆ

ಇದೇ ರೀತಿ ತನ್ನ ದೊಡ್ಡ ಮಗ ಮನೆಬಿಟ್ಟು ಹೋಗಿದ್ದಾಗಲೂ ನಮ್ಮಜ್ಜಿ ಅಂಜನಾ ಹಾಕಿಸಿ ನೋಡಿದ್ದರು. ಆ ಜ್ಯೋತಿಷ್ಯ ಪಂಡಿತರು ಬಾಟಲೊಂದರಲ್ಲಿ ನೀರನ್ನು ತುಂಬಿ ಅದರ ಮೇಲೆ ಕಪ್ಪನ್ನು ಹಚ್ಚಿ (ಸರಿಯಾಗಿ ನೆನಪಿಲ್ಲ) ಬಾಟಲಿನ ಹಿಂದೆ ದೀಪವೊಂದನ್ನು ಇಟ್ಟು ನನ್ನನ್ನು ನೋಡಲು ಹೇಳಿದ್ದರು. ಚಾಮರಾಜಪೇಟೆಯ ಕಡಲೇಕಾಯಿ ಟಾಕೀಸ್ ಎಂದೇ ಪ್ರಸಿದ್ಧವಾದ ಜಯಶ್ರೀ ಚಿತ್ರಮಂದಿರದ ಬಳಿ ಇದ್ದ ವಯಸ್ಸಾದ ಜ್ಯೋತಿಷಿಯೊಬ್ಬರು ನಮ್ಮಜ್ಜಿಗೆ ಏನೋ ಭರವಸೆಗಳನ್ನು ಕೊಡುತ್ತಾ ಬದುಕಿಸಿದ್ದರು. ನಾನೋ ಅಂಜನಾ ನೋಡುತ್ತಾ ಆತ ತನಗೆ ಬೇಕಾದ ಉತ್ತರಗಳನ್ನು ಪಡೆಯಲು ಸೂಕ್ತವಾದ ಪ್ರಶ್ನೆಗಳನ್ನು ಕೇಳುತ್ತಿರಲು, ನಾನೂ ತನಗೆ ಕಾಣುತ್ತಿದೆ ಎಂದು ಜಂಭ ಹೊಡೆಯಲು ಏನೇನೋ ಹೇಳುತ್ತಿದ್ದೆ.

'ಸ್ವಾಮಿ ಕಾಣಿಸ್ತಾಯಿದ್ಯಾ?' ಎಂದು ಆತ ಕೇಳಿದರೆ, ನನ್ನ ನೆಚ್ಚಿನ ದೈವೀಪಾತ್ರವಾದ ಶಿವನೇ ಕಾಣಿಸುತ್ತಾ ಇದ್ದಾನೆ ಎಂದು ನಿರೂಪಿಸಲು, 'ಹೌದು, ಗಂಡಸು ಕಾಣಿಸ್ತಾಯಿದ್ದಾರೆ' ಎನ್ನುತ್ತಿದ್ದೆ. 'ಅವರ ಹಿಂದೆ ಏನಿದೆ?' ಎಂದು ಆತ ಕೇಳಿದರೆ, ನಾನು, 'ಕೂದಲು ಉದ್ದಕ್ಕೆ ಕಾಣುತ್ತಿದೆ' ಎಂದು ಹೇಳುತ್ತಿದ್ದೆ. ಆತ, 'ಅದು ಬಾಲ, ನೀನು ನೋಡ್ತಿರೋದು ಆಂಜನೇಯ' ಎಂದು ನನ್ನ ಶಿವನ ಚಿತ್ರವನ್ನು ಅವರ ಸ್ವಾಮಿ ಹನುಮಂತನ ಚಿತ್ರವನ್ನಾಗಿ ಮಾರ್ಪಡಿಸಿ, ಅದನ್ನು ಅನುಸರಿಸಲು ಹೇಳುತ್ತಿದ್ದರು. 'ಸ್ವಾಮಿ ಹೋದಂಗೆಲ್ಲಾ ನೋಡ್ತಾಯಿರು. ನಿನ್ನ ಮಾವನನ್ನು ತೋರಿಸ್ತಾರೆ. ರಸ್ತೆ, ಬೋರ್ಡು ಎಲ್ಲಾ ನೋಡ್ಕೋ. ಜ್ಞಾಪಕ ಇಟ್ಕೋ' ಎಂದೇನೇನೋ ಹೇಳಿ ನನ್ನ ತಲೆ ತಿನ್ನುತ್ತಿದ್ದರು.

ಸುಳ್ಳು ಹೇಳುವ ವಿದ್ಯೆಯಲ್ಲಿ ನಾನೂ ಏನೂ ಹಿಂದೆ ಬಿದ್ದಿರಲಿಲ್ಲ. ಬಾಯಿಗೆಬಂದಂತೆ ಹೇಳಿ ಪಾಪದ ನಮ್ಮಜ್ಜಿಗೆ ಗೊಂದಲವುಂಟುಮಾಡುತ್ತಿದ್ದೆ. ಇಷ್ಟೆಲ್ಲಾ ಆದ ಮೇಲೆ ನಮ್ಮಜ್ಜಿಗೆ ಅರಿವಾಗಿದ್ದೇನೆಂದರೆ, ಅವರು ಮಾಡಿಕೊಂಡಿದ್ದ ವಿಚಾರಗಳೇ ಸರಿ, ಈ ಮಾಟ ಮಂತ್ರಗಳೆಲ್ಲಾ ನಿಷ್ಪ್ರಯೋಜಕ ಎಂದು.

ಈಗ ಸುಳ್ಳುಪಳ್ಳು ಹೇಳಿಕೊಂಡು ಅದೆಷ್ಟೋ ಜನ ಈ ಬಗೆಯ ವಿದ್ಯೆಯಿದೆ ಎಂದು ಕಷ್ಟದಲ್ಲಿರುವ ಜೀವಿಗಳ ಜೀವನದ ಜೊತೆ, ಭಾವನೆಗಳ ಜೊತೆ, ನಂಬುಗೆಯ ಜೊತೆ ಆಟವಾಡುತ್ತಿದ್ದಾರೆ ಎಂದು ನೆನೆದರೇನೇ ಸಂಕಟವಾಗುತ್ತದೆ. ಸಹಿಸಲಾರದಷ್ಟು ಕೋಪ ಬರುತ್ತದೆ. ಪಾಪ, ತಮ್ಮ ಯಾವುದೋ ಸಂಕಷ್ಟದಿಂದಾಗಿ, ಮುಳುಗುವವನಿಗೆ ಹುಲುಕಡ್ಡಿಯ ಆಸರೆ ಎಂಬಂತೆ ಕಂಡಕಂಡ ದಾರಿಯಲ್ಲೆಲ್ಲಾ ನುಗ್ಗುವ ಪಾಪದ ಜೀವಗಳು ಯಂತ್ರ ಮಂತ್ರ ತಂತ್ರ ದೇವರು ಹರಕೆ ವ್ರತ ಇತ್ಯಾದಿಗಳಿಗೆ ಮೊರೆ ಹೋಗುವುದು ಏನೂ ಆಶ್ಚರ್ಯವಲ್ಲ. ಆದರೆ ನಾನು ನನ್ನ ಜೀವನದುದ್ದಕ್ಕೂ ಪಡೆದಂತಹ ವಿವಿಧ ಅನುಭವಗಳನ್ನು, ಅವುಗಳ ಪ್ರಭಾವಗಳನ್ನೂ ಗಮನಿಸುತ್ತಾ ತಿಳಿದಿದ್ದೇನೆಂದರೆ, ಮನಸ್ಸನ್ನು ದೃಢವಾಗಿಟ್ಟುಕೊಳ್ಳುವುದು ಮತ್ತು ವೈರುಧ್ಯತೆಗಳಿಗೆ ಒಳಗಾಗುವಂತಹ ನಮ್ಮ ವಿಚಾರಗಳನ್ನು ಮತ್ತು ಭಾವನೆಗಳನ್ನೆಲ್ಲಾ ಸಾಕ್ಷೀಕರಿಸುವುದು; ಈ ಎರಡು ಗುಣಗಳು ನಮ್ಮ ಆರ್ಥಿಕ, ಸಾಮಾಜಿಕ, ವ್ಯಕ್ತಿಗತ, ಆರೋಗ್ಯ, ಲೈಂಗಿಕ, ನೈತಿಕ, ಧಾರ್ಮಿಕ, ಆಧ್ಯಾತ್ಮಿಕ, ತಾತ್ವಿಕ, ಭಾವನಾತ್ಮಕ, ವೈಚಾರಿಕ- ಹೀಗೆ ಯಾವುದೇ ಸಮಸ್ಯೆಗಳು, ಗೊಂದಲಗಳು, ಪತನಗಳು ನಮ್ಮತನವನ್ನು ಘಾಸಿಗೊಳಿಸುವುದಾಗಲಿ, ಆತ್ಮಹಾನಿಯನ್ನಾಗಲಿ ಮಾಡಲಾರದು.

ಮಂತ್ರದ ಮದ್ದು

ಚಾಮರಾಜಪೇಟೆಯ ಎರಡನೇ ರಸ್ತೆಯ ತುದಿಯಲ್ಲಿ ಒಂಭತ್ತನೆಯ ಅಡ್ಡರಸ್ತೆಯಲ್ಲಿಯೇ ಪ್ರಶಾಂತ್ ಕಾಫಿ ವರ್ಕ್ಸ್ ಎಂಬ ಅಂಗಡಿಯೊಂದಿತ್ತು. ಒಂದೇ ಮನೆಯ ಅಣ್ಣತಮ್ಮಂದಿರು ಅದನ್ನು ನಡೆಸುತ್ತಿದ್ದರು. ಅವರಲ್ಲಿ ಒಬ್ಬರಿಗೆ ಆರೋಗ್ಯದ ಸಮಸ್ಯೆ ಬಂದಾಗ (ಯಾವುದೋ ಕ್ಯಾನ್ಸರ್‌ನಂತಹ ಮಾರಣಾಂತಕ), ಉಳಿದ ಸೋದರರು ತಮಗೆ ತೋಚಿದಂತೆಲ್ಲಾ ಚಿಕಿತ್ಸೆಗಳನ್ನು ಕೊಡಿಸುತ್ತಿದ್ದರು. ಆದರೆ ಗುಣವಾಗುತ್ತಿದ್ದದ್ದು ಬಹಳ ಕಡಿಮೆ ಪ್ರಮಾಣದಲ್ಲಿ. ಅದಕ್ಕೆ ಕೊನೆಗೆ ಅವರು ಮೊರೆ ಹೋದದ್ದು ಮಂತ್ರ ತಂತ್ರಕ್ಕೆ. ಅದೇ ಎರಡನೆ ರಸ್ತೆಯಲ್ಲಿ ತಾವು ಮಾಡುತ್ತಿದ್ದ ಯಾವುದೋ ಪ್ರತಿಷ್ಠಿತ ಫ್ಯಾಕ್ಟರಿಯ ಉದ್ಯೋಗವನ್ನು ಬಿಟ್ಟು ಮಾಟ ಮಂತ್ರದ ದಂಧೆಗೆ ಇಳಿದಿದ್ದ ಅಲ್ಲಿನ, ಆಗಿನ ಖ್ಯಾತ ವ್ಯಕ್ತಿ (ಈಗ ಸಿದ್ಧಾರೂಢರ ಹೆಸರಲ್ಲಿ ಆಶ್ರಮ ಕಟ್ಟಿಕೊಂಡು ತುಮಕೂರಿನಲ್ಲಿ ರಾಜಕಾರಣಿ ಮತ್ತು ವ್ಯಾಪಾರೋದ್ಯಮಿಗಳನ್ನು ಸೆಳೆವ ಯಶಸ್ವಿ ಸ್ವಾಮೀಜಿಯಾಗಿದ್ದಾರೆ) ತಾನು ಮಂತ್ರ ಮಾಡಿರುವ ನೀರನ್ನು ಕೊಡಿ ಸಾಕು ಎಂದು ಹೇಳಿ, ಬೇರೆ ಎಲ್ಲಾ ಔಷಧೋಪಚಾರಗಳನ್ನು ನಿಲ್ಲಿಸಲು ತಾಕೀತು ಮಾಡಿದರು. ಅದ್ಯಾವುದೋ ಜಾಗಕ್ಕೆ ಹೋಗಬೇಕು; ಅಲ್ಲಿ ಏನೋ ತಂತ್ರದ ಸಾಧನೆ ಮಾಡಬೇಕು - ಹಾಗೆ ಹೀಗೆ ಎಂದೆಲ್ಲಾ ಮಾಟ ಮಂತ್ರ ಮಣ್ಣು ಮಸಿ ಮಾಡಿ, ಈ ಎಲ್ಲಾ ಪ್ರಯತ್ನಗಳ ಫಲವಾಗಿ ಬದುಕಿ ಬಾಳಬೇಕಾದ ಆ ವ್ಯಕ್ತಿ ಕೊನೆಯುಸಿರೆಳೆದರು. ಈ ಘಟನೆ ನನ್ನ ತೀರಾ ಕಂಗಾಲಾಗಿಸಿತು. ಆ ಪ್ರಶಾಂತ್ ಕಾಫಿ ವರ್ಕ್ಸ್‌ನ ಆ ಸೋದರರು ವಯಸ್ಸಿನಲ್ಲಿ ನನಗಿಂತ ಹಿರಿಯರಾಗಿದ್ದರೂ ನನ್ನೊಡನೆ ಬಹು ಅಭಿಮಾನದಿಂದ, ಬಹಳ ಸೌಜನ್ಯ ಮತ್ತು ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಬರೀ ಗ್ರಾಹಕನಾಗಿ ಕಾಫಿಪುಡಿ ಕೊಂಡುಕೊಳ್ಳುವುದಕ್ಕೆ ಹೋದ ವ್ಯಕ್ತಿ ಅವರ ಕಷ್ಟಗಳನ್ನು ಹಂಚಿಕೊಳ್ಳುವಷ್ಟರ ಮಟ್ಟಿಗೆ ಆತ್ಮೀಯನಾಗಿದ್ದೆ. ಆದರೆ, ನನ್ನ ಕಣ್ಣೆದುರೇ ನಾನು ನಿತ್ಯ ಕಾಣುತ್ತಿದ್ದ ಸೌಜನ್ಯದ ವ್ಯಕ್ತಿ, ಅದ್ಯಾವುದೋ ಮಾಟ ಮಂತ್ರದ ಹುಸಿ ಪ್ರಯೋಗಕ್ಕೆ, ಮೂಢ ನಂಬುಗೆಗೆ ಬಲಿಯಾಗಿದ್ದು ಮಾತ್ರ ನನಗೊಂದು ದೊಡ್ಡ ಆಘಾತ!

ಕ್ಯಾನ್ಸರ್‌ಗೆ ಮಾಟದ ಚಿಕಿತ್ಸೆ

ಅದೇ ರೀತಿಯಲ್ಲಿ ನಾನು ಎಸ್‌ಎಫ್‌ಎಸ್ ಶಾಲೆಯಲ್ಲಿ ಉಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾಗ ರಾಜಾಸ್ತಾನ ಮೂಲದ ಇಬ್ಬರು ಸೋದರಿಯರು ನನ್ನ ಆಪ್ತ ವಿದ್ಯಾರ್ಥಿಗಳ ಪಟ್ಟಿಯಲ್ಲಿದ್ದರು. ಅವರ ತಂದೆ ಬಹಳ ದಷ್ಟಪುಷ್ಟವಾಗಿದ್ದು ನಿಜಕ್ಕೂ ತಮ್ಮ ಅಂಗ ಸೌಷ್ಟವದಿಂದ ನೋಡುಗರ ಮನಸೆಳೆಯುವಷ್ಟು ಬಲಾಢ್ಯರಾಗಿಯೂ, ಸುಂದರವಾಗಿಯೂ ಕಾಣುತ್ತಿದ್ದರು. ನನ್ನ ಕೂಡ ಬಹಳ ಆತ್ಮೀಯತೆಯಿಂದ ಮಾತಾಡುತ್ತಿದ್ದರು. ಇದ್ದಕ್ಕಿದ್ದಂತೆ ಆ ಹುಡುಗಿಯರು ಸರಿಯಾಗಿ ಶಾಲೆಗೆ ಬರುತ್ತಿರಲಿಲ್ಲ, ನಾನು ವಿಷಯವೇನೆಂದು ವಿಚಾರಿಸಲಾಗಿ, ಅವರ ತಂದೆಗೆ ಹುಷಾರಿಲ್ಲ ಎಂದು ತಿಳಿದುಬಂತು. ವಿಷಯ ತಿಳಿದು ಅವರಿಗೆ ನೈತಿಕ ಧೈರ್ಯವನ್ನೂ, ಸಾಧ್ಯವಾದ ಸಹಕಾರವನ್ನೂ ಕೊಡಲು ಅವರ ಮನೆಗೆ ಹೋದರೆ ನನಗೆ ಆಘಾತ ಕಾದಿತ್ತು. ಅಷ್ಟು ದಷ್ಟಪುಷ್ಟವಾಗಿದ್ದ ಆ ವ್ಯಕ್ತಿ ಕೇವಲ ಒಂದೆರಡು ತಿಂಗಳಲ್ಲಿ ಮೂಳೆ ಚಕ್ಕಳವಾಗಿ ಮಲಗಿಬಿಟ್ಟಿದ್ದರು. ಕಣ್ಣುಗಳು ಒಳಕ್ಕೆ ಹೋಗಿ, ಮೈಯೆಲ್ಲಾ ಕಪ್ಪಾಗಿದ್ದು, ಕೂದಲೆಲ್ಲಾ ಉದುರಿ ಹೋಗಿದ್ದವು. ಅವರಿಗೆ ನನ್ನ ಕಂಡು ಸ್ನೇಹದ ನಗೆ ಬೀರಲೂ ಕಷ್ಟವಾಗಿತ್ತು ಮತ್ತು ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲೂ ಸಾಧ್ಯವಾಗದಷ್ಟು ದುರ್ಬಲವಾಗಿಬಿಟ್ಟಿದ್ದರು. ನನಗೆ ದುಃಖ ತಡೆಯಲಾಗಲಿಲ್ಲ, ಅವರಿಗೆ ಕ್ಯಾನ್ಸರ್ ಎಂದು ತಿಳಿದಿದ್ದೇ ಅಲ್ಲದೇ, ಅವರ ಹೆಂಡತಿ ಯಾರದೋ ಮಾಟ ಮಂತ್ರದ ಪ್ರಭಾವದಿಂದ ಹೀಗಾಗಿದೆ ಎಂದು ತಿಳಿದು ತಮಗೆ ತಿಳಿದ ಮಂತ್ರ ತಂತ್ರಗಳನ್ನು ಮಾಡಿಸುವುದಕ್ಕೆ ತಮ್ಮಲ್ಲಿದ್ದ ಹಣವನ್ನೆಲ್ಲಾ ವೆಚ್ಚ ಮಾಡುತ್ತಿದ್ದರು. ಆಕೆಗೆ ಮತ್ತು ಅವರ ದೊಡ್ಡ ಮಗಳಿಗೆ ತಾವು ಮಾಡುತ್ತಿರುವ ಪೂಜೆಯಿಂದಾಗಿ ಒಳ್ಳೆಯ ಫಲಿತಾಂಶ ಸಿಗುವುದೆಂದು ಘನವಾದ ನಂಬುಗೆ ಇತ್ತು. ಅವರ ಮನೆಯಲ್ಲಿ ಎಲ್ಲಿ ನೋಡಿದರಲ್ಲಿ ಮಂತ್ರ ತಂತ್ರಗಳಿಗೆ ಸಂಬಂಧಿಸಿದಂತಹ ವಸ್ತುಗಳೇ ಕಾಣುತ್ತಿದ್ದವು. ಅದೆಂತದ್ದೋ ಬೇರು, ತೆಂಗಿನ ಕಾಯಿ, ಕಳಸ, ನಿಂಬೆಹಣ್ಣು ಮಡಿಕೆ ಕುಡಿಕೆ ಇತ್ಯಾದಿಗಳು. ನಾನು ಅವರ ಮೆಡಿಕಲ್ ರಿಪೋರ್ಟ್ ಹಿಡಿದುಕೊಂಡು ನನಗೆ ತಿಳಿದ ಕಡೆ ಓಡಾಡಿ ಇನ್ನೂ ಹೆಚ್ಚಿನ ಚಿಕಿತ್ಸೆ ಕೊಡಿಸಿ ಅವರನ್ನು ಉಳಿಸಿಕೊಳ್ಳಲು ಸಾಧ್ಯವೇನೋ ಎಂದು ನೋಡುವ ಪ್ರಯತ್ನ ಮಾಡಿದೆ. ಆದರೆ ಕೆಲವೇ ದಿನಗಳಲ್ಲಿ ನಾನು ಅವರ ಅಂತ್ಯಸಂಸ್ಕಾರದಲ್ಲಿ ಭಾಗಿಯಾದೆ.

ಓಕುಳಿಪುರದ ಬಾಬಾ ಲಕ್ಷ್ಮಣಪುರಿ

80ರ ದಶಕದಲ್ಲಿ ಮಾಟವಿದ್ಯೆಯ ಬಗ್ಗೆ ದೊಡ್ಡ ದುರಂತವೊಂದು ಬೆಂಗಳೂರಿನಲ್ಲಿ ಸಂಭವಿಸಿತು; ಓಕಳೀಪುರಂನ ಸ್ಮಶಾನದಲ್ಲಿ ಬಾಬಾ ಲಕ್ಷ್ಮಣಪುರಿ ಎಂಬಾತ ತನ್ನ ಸಹಾಯಕಿ ಲಕ್ಷ್ಮಮ್ಮ ಎಂಬುವಳ ನೆರವಿನಿಂದ ಯಾವುದೋ ಸಿದ್ಧಿಗಾಗಿ ಅನೇಕ ಮಕ್ಕಳನ್ನು ಬಲಿಕೊಟ್ಟಿದ್ದು. ಶಾಲೆಗೆ ಹೋಗುತ್ತಿದ್ದ ಅಥವಾ ಮನೆಯ ಬಳಿ ಆಡುತ್ತಿದ್ದ ಮಕ್ಕಳನ್ನು ಹೇಗೋ ಅಪಹರಿಸಿಬಿಡುತ್ತಿದ್ದರು. ನಂತರ ಅವರ ಹೆಣಗಳು ದೊರಕುತ್ತಿದ್ದವು. ಈ ಘಟನೆ ಕುರಿತಾಗಿ 'ರಾಜೇಶ್ವರಿ' ಎಂಬ ಕನ್ನಡ ಚಲನಚಿತ್ರವೂ ಬಂದಿತು. ವಿಪರ್ಯಾಸವೆಂದರೆ ಈ ಚಿತ್ರವೂ ಮೂಢ ನಂಬುಗೆಯನ್ನೇ ಕೊನೆಯಲ್ಲಿ ಕೊಂಡಾಡಿ ವಿಫಲವಾಯಿತು.

ಈಗ ಇದೇ ರೀತಿ ಅಂಜನಾ, ಅತೀಂದ್ರಿಯ ಶಕ್ತಿ ಇತ್ಯಾದಿಗಳನ್ನು ಚಾನೆಲ್‌ಗಳಲ್ಲಿ ಪ್ರತಿಪಾದಿಸಿಕೊಂಡು ಬದುಕ್ತಿದ್ದಾರೆ. ಗಿಡಮೂಲಿಕೆಗಳ ಜೊತೆಗೆ ಮೌಢ್ಯ ಮತ್ತು ಧರ್ಮಾಂಧತೆಯನ್ನು ಬಿತ್ತುವ ಸಂತೋಷ್ ಗುರೂಜಿ ಎಂಬಾತ ಅದರಲ್ಲಿ ಅಗ್ರಗಣ್ಯ. ಆತ ಅಂಜನಾ ಕುರಿತಾಗಿ ಏನೇನೆಲ್ಲಾ ಹೇಳುತ್ತಾನೆ ಎಂದು ಮುಂದೆ ನೋಡೋಣ. ■

ಕೂಗುಮಾರಿಯಾಗುತ್ತಿರುವ ಸೋಬ

ಹೊಗಳಿಕೆ ತೆಗಳಿಕೆ


ಕೂಗುಮಾರಿಗಳಿಗೆ ಬಿಜೆಪಿ ಪಕ್ಷದಲ್ಲಿ ಸಖತ್ ಬೇಡಿಕೆಯಿದೆ. ಬಹುಶಃ ಇದೇ ಕಾರಣಕ್ಕೆ ಹುಟ್ಟು ಕೂ.ಮಾ. ಆಗಿ ಜನಿಸಿದ ತೇಜಸ್ವಿನಿ ಎನ್ನುವ ತೇಜಸ್‌ರಹಿತ ಮಹಿಳೆಯೊಂದು ಕಮ್ಯುನಿಸ್ಟ್ ಸಿದ್ಧಾಂತದಲ್ಲಿ ಬೆಳೆದು ಕೊನೆಗೆ ಚಡ್ಡಿಯನ್ನು ಅಪ್ಪಿ ಹಿಡಿದಿತ್ತು. ಆದರೆ ಆದರ ಮನೆಹಾಳ ಬುದ್ಧಿ ತಿಳಿದಿರುವ ಚಾಲಾಕಿ ಚಡ್ಡಿಗಳು ಅದನ್ನು ಕೇವಲ ಚುನಾವಣೆ ಮತ್ತು ಟಿವಿ ಚರ್ಚೆಗಳಲ್ಲಿ ಒದರಲಿಕ್ಕಷ್ಟೆ ಬಳಸಿಕೊಳ್ಳುತ್ತಿದೆಯೇ ಹೊರತು ಬೇರೆ ಯಾವ ಗೌರವವನ್ನೂ ಕೊಡುತ್ತಿಲ್ಲ, ಅದು ಬೇರೆ ವಿಷಯ.


ನಮ್ಮ ಸೋಬಕ್ಕ ಎನ್ನುವ ಕನ್ಯಾಮಣಿಯೂ ಸ್ವಭಾವತಃ ಕೂಗುಮಾರಿಯೇ ಆದರೂ ಉಮಾಭಾರತಿ ಮೊದಲಾದ ವರಂತೆ ಕೆಟ್ಟಬಾಯಿಯ ಮೂಲಕ ಅಧಿಕಾರಕ್ಕೇರಿದ್ದಕ್ಕಿಂತಲೂ ಯಡ್ಡಿ ಮಹಾತ್ಮನ ಕೃಪೆಯೇ ಸೋಬಕ್ಕನನ್ನ ಇನ್ನಿಲ್ಲದಂತೆ ಮೇಲೆತ್ತುತ್ತಾ ಬಂದಿತ್ತೆನ್ನುವುದು ಗೊತ್ತಿರುವಂತಹ ಸಂಗತಿಯೇ. ಆದರೂ, ಬಾಯಿಬಡುಕಿ ಸೋಬಕ್ಕ ಬೆಂಕಿ ಕಾರಿ ದ್ವೇಷ ಹರಡುವುದರಲ್ಲಿ ಯಾವತ್ತಿದ್ದರೂ 'ಫೇಮ'ಸ್. ತೀರ್ಥಹಳ್ಳಿಯ ನಂದಿತಾ ಪ್ರಕರಣ ಎಂಬ ಯೋಜಿತ (ಪಕ್ಕಾ ಪ್ಲಾನ್ ಮಾಡಿ ಹಬ್ಬಿದ) ಸುಳ್ಳು ದೊಂಬಿಗಳಿಂದ ಹಿಡಿದು ಮುಸಲ್ಮಾನರು ಆರೋಪಿಗಳಗಿರುವ ಅನೇಕ ವಿಚಾರಗಳಲ್ಲಿ ತಾನು ಮಹಿಳಾ ಪರವೆಂದು ಈಕೆ ತೋರಿಸಿ ಕೊಳ್ಳುತ್ತಾ ತನ್ನ ಬಾಯನ್ನು ಹರಿಬಿಟ್ಟಿದ್ದಳು.

ಈಕೆ ನಿಜಕ್ಕೂ ಮಹಿಳಾ ಪರವಿದ್ದರೆ, ಆಡಳಿತ ಪಕ್ಷದ ಏಕೈಕ ಸಚಿವೆಯಾಗಿದ್ದುಕೊಂಡು ತನ್ನ ಕಾಲದಲ್ಲೇ ನಡೆದಂತಹ ಅಮಾಯಕಿ ಪದ್ಮಪ್ರಿಯಾ (ರಘುಪತಿ ಭಟ್ಟನ ಪತ್ನಿ) ಕೊಲೆಯ ಬಗ್ಗೆ ದನಿ ಎತ್ತಬೇಕಿತ್ತು, ಧರ್ಮಸ್ಥಳದವರು ಕೊಂದು ಹಾಕಿದ ತನ್ನದೇ ಜಾತಿಯ ಸೌಜನ್ಯಾಳ ಬಗ್ಗೆ ಮಾತನ್ನಾಡ ಬೇಕಿತ್ತು, ಅದಿರಲಿ, ಕಳೆದ ಒಂದು ವರ್ಷದಿಂದ ಸುದ್ದಿ ಮಾಡುತ್ತಿರುವ ಪ್ರೇಮಲತಾ ಕೇಸಿನ ಬಗ್ಗೆ ಕಾಟಾಚಾರ ಕ್ಕಾದರೂ ಮಾತನ್ನಾಡಬೇಕಿತ್ತು, ಆದರೆ ಅದನ್ನೆಲ್ಲ ಬಿಟ್ಟು ಈಕೆ ಹಿಂದೆ ಬಿದ್ದದ್ದು ಸೊರಕೆಯ ವಿರುದ್ಧ.

ಸೋಬಕ್ಕನ ಚೈತನ್ಯ ಪ್ರಭಾವಳಿಯ ಬಗ್ಗೆ ಮಾತನ್ನಾಡಿದ ಸೊರಕೆಯ ವಿರುದ್ಧ ಸೋಬಕ್ಕ ಬಾಂಬ್ ಒಂದನ್ನು ಸಿಡಿಸಿ ಸುದ್ದಿ ಮಾಡಿದ್ದಳು. ಅದು ಅತ್ಯಾಚಾರದ ಕೇಸ್. ರಾಜ್ಯದ ಮಟ್ಟಿಗೆ ಆವತ್ತಿದು ಹೊಸ ಸುದ್ದಿಯಾದರೆ ಜಿಲ್ಲೆಯ ಮಟ್ಟಿಗದು ಹಳೆ ಸುದ್ದಿ, ದುರದೃಷ್ಟಕ್ಕೆ ಸೊರಕೆ ಗ್ರಾಮವಾಸಿ ಯುವತಿಗೆ ಸಂಬಂಧಿಸಿದ ಈ ಪ್ರಕರಣವನ್ನು ಸೊರಕೆಯ ತಲೆಗೆ ಕಟ್ಟಿ ಆವತ್ತೇ ಸೋಬಕ್ಕ ಬೊಬ್ಬೆ ಹಾಕಿದ್ದಳಾದರೂ ಪುತ್ತೂರನ್ನು ಶಕು ಅಕ್ಕನಿಗೆ ಬಿಟ್ಟುಕೊಟ್ಟು ಉಡುಪಿಯ ಕಾಪುವಿನಲ್ಲಿ ಹೋಗಿ ಕೂತ ಸೊರಕೆಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲವೆಂದು ಜನರಿಗೆ ಗೊತ್ತಿದ್ದ ಕಾರಣ ಆ ಕೇಸ್ ಮುಂದೆ ಹೋಗಲೇ ಇಲ್ಲ. (ಈ ಗಟ್ಟಿ ನಂಬಿಕೆಯ ಕಾರಣಕ್ಕೇ ಸೊರಕೆ ಸೋಬಕ್ಕನನ್ನ ಕೊಲ್ಲೂರು ಮೊದಲಾದೆಡೆ ಪ್ರಮಾಣಕ್ಕೆ ಕರೆದದ್ದು)

ಹಳೆಯ ಚಾಳಿಯಂತೆ ಸೋಬಕ್ಕ ಈ ಪ್ರಕರಣದ ಬಗ್ಗೆ ಮಾತನಾಡಲೂ ಆವತ್ತು ಬಲವಾದ ಕಾರಣವಿತ್ತು, ಅದು ಬೇರೇನಲ್ಲ, ಯುವತಿಯನ್ನು ಕಾಡಿದಾತ ಒಬ್ಬ ಮುಸ್ಲಿಮ್ ಯುವಕನಾಗಿದ್ದ ಎಂಬುದು. ದೊಂಬಿ ರಾಣಿ ಸೋಬಕ್ಕ ಚಂಗನೆ ಕೂತಿದ್ದು ಇದೇ ಕಾರಣಕ್ಕೆ. ಆದರೆ ಸೋಬಕ್ಕ ಏನೇ ಪ್ರಯತ್ನಪಟ್ಟರೂ ದೊಂಬಿ ಏಳಲೇ






ಇಲ್ಲ, ಅದನ್ನು ಮೊನ್ನೆ ಪುನಃ ಕಾರಿಕೊಂಡಿದ್ದಳಷ್ಟೆ.

ವಿರೋಧ ಪಕ್ಷದಲ್ಲಿದ್ದಾಗ ಇಂಥವರ ಆರ್ಭಟಗಳೆಲ್ಲ ಜೋರಾಗಿರುತ್ತದೆ. (ಆವತ್ತು ಬೊಬ್ಬೆ ಹಾಕುತ್ತಿದ್ದ ಮೋದಿ ಈಗ ಮೌನಕ್ಕೆ ದಾಸನಾಗಿರುವುದು ಎಲ್ಲರಿಗೂ ಗೊತ್ತು). ರಾಜ್ಯದಲ್ಲಿ ಸಿದ್ದು ವಿರುದ್ಧ ಕಾರಿಕೊಳ್ಳುವ ಈಕೆ ಸಿದ್ದರಾಮಯ್ಯ ಮೋದಿಯ ಕೂದಲಿಗೆ ಸಮವಿಲ್ಲ ಎಂದದ್ದು ಆಕೆಯ ಹೊಲಸುತನವನ್ನು ತೋರಿಸುತ್ತಿದೆಯಾದರೂ ಕಿಲಾಡಿಗಳು ಆಡುವ ಮಾತೇ ಬೇರೆಯಿದೆ. ಅದೆಂದರೆ, ಆಕೆ ಹೇಳಿದ್ದು ಸರಿಯಂತೆ, ಪರಿಚಿತವಾದ ಯಡ್ಡಿಯ ಬಿಳಿ ಕೂದಲು ಮೋದಿಯ ಬಿಳಿಕೂದಲಿನಂತಿದೆ. ಆದರೆ ಸಿದ್ದರಾಮಯ್ಯರ ಪೆಪ್ಪರ್-ಸಾಲ್ಟ್ ಕೂದಲು ಬೇರೆಯೇ ತಾನೆ? ಹಾಗಾಗಿ "ಸಿದ್ದು ಮೋದಿಯ ಕೂದಲಿಗೆ ಸಮವಿಲ್ಲ" ಎಂಬ ವಾಕ್ಯದಲ್ಲಿ 'ಸಿದ್ದು' ಬದಲು 'ಸಿದ್ದು ಕೂದಲು' ಎಂದಾಗ ಬೇಕಿತ್ತಂತೆ. ಎಲ್ಲಾ ಮೀಡಿಯಾದವರು ತಿರುಚಿದ್ದು. ಏನ್ ಮಾಡ್ಲಿಕ್ಕಾಗ್ತದೆ? ಅಮಾಯಕಿ ಸೋಬಕ್ಕ.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಎಲ್ಲಾ ಹಿಂದೂ ಸಂಪ್ರದಾಯಗಳ ಹಿಂದೆ ವೈಜ್ಞಾನಿಕ, ವೈದ್ಯಕೀಯ ಅಥವಾ ಮನೋವೈಜ್ಞಾನಿಕ ಕಾರಣಗಳಿವೆ ಎನ್ನುತ್ತಾ ಹಾದಿ ತಪ್ಪಿಸುವ ಅನೇಕ ವಾಟ್ಸ್‌ಅಪ್ ಸಂದೇಶಗಳು ಹಿಂದಿನ ಎರಡು ವರ್ಷಗಳಿಂದ ತುಂಬಾ ಹರಿದಾಡುತ್ತಿವೆ. ಅದರಲ್ಲಿ ಹಿಂದೂಗಳ ಪ್ರತಿಯೊಂದು ಸಂಪ್ರದಾಯ ಅಥವಾ ಮೌಢ್ಯಗಳ ಹಿಂದೆ ವೈಜ್ಞಾನಿಕ ಕಾರಣಗಳಿವೆ ಎಂದು ಶಬ್ದಜಾಲ ಹೆಣೆದು ಕುತರ್ಕ ಮಂಡಿಸುವ ಸಂದೇಶಗಳೇ



ಹೆಚ್ಚು. ಅಬಲೆಯರು ಸಿಂಧೂರ-ಕುಂಕುಮ ಹಚ್ಚಿಕೊಳ್ಳುವುದರ ಹಿಂದೆ ಸಬಲ ವೈಜ್ಞಾನಿಕ ಕಾರಣವಿದೆ ಎಂದು ವಾಟ್ಸ್‌ಅಪ್ ಮೂಲಕ ಕೇಸರಿ ಪಡೆಗಳು ಹರಡುತ್ತಿರುವ ಕುಜ್ಞಾನದ ಬಗ್ಗೆ ಗಿರೀಶ್ ತಾಳಿಕಟ್ಟೆಯವರ ಕಣ್ಣು ತೆರೆಸುವ ಲೇಖನ ತಮ್ಮ ಪತ್ರಿಕೆಯ ಅಕ್ಟೋಬರ್ 14 ರ ಸಂಚಿಕೆಯಲ್ಲಿ ಸವಿಸ್ತಾರವಾಗಿ ಪ್ರಕಟವಾಗಿದ್ದರೂ ಮಂಗಳೂರಿನ ಕೆಲವು ಸ್ಥಳೀಯ ಪತ್ರಿಕೆಗಳು ಮಹಿಳೆಯರು ಬೈತಲೆಯಲ್ಲಿ ಕುಂಕುಮ ಧರಿಸಿದರೆ ಮೆದುಳಿನ ಮೇಲೆ ತುಂಬಾ ಧನಾತ್ಮಕ ಪರಿಣಾಮ ಬೀರುತ್ತದೆ ಎಂದು ಬರೆದು ಜನರನ್ನು ಹಾದಿ ತಪ್ಪಿಸುವುದನ್ನು ಮುಂದುವರಿಸಿವೆ.

ಈ ಸಿಂಧೂರದಲ್ಲಿ ಇರುವ ಪಾದರಸ ಮತ್ತು ಸೀಸ ಎರಡೂ ವಿಷಕಾರಿಯಾಗಿದ್ದು ಮಾನವನ ಹೊಟ್ಟೆ ಸೇರಿದರೆ ಎಷ್ಟು ಹಾನಿಕಾರಕ ಎಂದು ಗಿರೀಶ್ ತಮ್ಮ ಲೇಖನದಲ್ಲಿ ವಿವರಿಸಿದ್ದರು. ಆದರೆ ಕುಂಕುಮವು ನೋವು ನಿವಾರಕ ಹಾಗೂ ದೇಹಕ್ಕೆ ತಂಪು ಒದಗಿಸುವ ಔಷಧಿ ಗುಣ ಹೊಂದಿದೆ ಎಂಬ ವಾಟ್ಸ್‌ಅಪ್‌ನ ಸುಳ್ಳನ್ನು ಓದಿದ್ದ ಒಬ್ಬ ಮಹಿಳೆ ತನ್ನ ಒಂದು ವರ್ಷದ ಮಗುವಿಗೆ ನಡುರಾತ್ರಿಯಲ್ಲಿ ಹೊಟ್ಟೆ ನೋವು ಕಾಣಿಸಿದಾಗ ಗ್ರೈಪ್-ವಾಟರ್ ಮುಗಿದಿದ್ದರಿಂದ ಕುಂಕುಮವನ್ನು ನೀರಲ್ಲಿ ಕಲಸಿ ಕುಡಿಸಿದ್ದರು. ಪರಿಣಾಮವಾಗಿ ಮಗುವಿನ ಆರೋಗ್ಯ ತುಂಬಾ ಕೆಟ್ಟಿತು ಹಾಗೂ ರಾತ್ರಿಯೇ ಡಾಕ್ಟರ್ ಹತ್ತಿರ ಓಡಬೇಕಾಯಿತು. ಹೀಗಿದೆ ವಾಟ್ಸ್‌ಅಪ್‌ನ ಕರಾಳ ಮಹಿಮೆ.

ಮೂರು-ನಾಲ್ಕು ಸಾವಿರ ವರ್ಷಗಳಿಂದ ಸಾಮಾನ್ಯ ಜನರಿಗೆ ವಿದ್ಯೆ ನಿರಾಕರಿಸಿ ಅವರನ್ನು ಅಂಧಕಾರದಲ್ಲಿ ಇಟ್ಟು ಅವರ ಅಜ್ಞಾನವನ್ನು ಬಂಡವಾಳ ಮಾಡಿಕೊಂಡು ಸಮಾಜದ ಮೇಲೆ ತಮ್ಮ ಅಧಿಕಾರ ನಡೆಸಿದವರೇ ಮೊದಲೆಲ್ಲಾ ಯಾವ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅವರು ವಿರೋಧಿಸಿದ್ದರೋ ಈಗ ಅದೇ ವಿಜ್ಞಾನ ಮತ್ತು ತಂತ್ರಜ್ಞಾನದ ಭರಪೂರ ದುರುಪಯೋಗಮಾಡಿಕೊಂಡು ಮೌಢ್ಯವನ್ನು ಜೋರಾಗಿ ಹರಡುತ್ತಿದ್ದಾರೆ. ಈ ರೀತಿ ಸಂಘ ಪರಿವಾರದವರು ಸೋಷಿಯಲ್ ಮೀಡಿಯಾವನ್ನು ದುರುಪಯೋಗಪಡಿಸಿ ವಿದ್ಯಾವಂತರಲ್ಲೂ ಮೂಢನಂಬಿಕೆ ಗಳನ್ನು ಹರಡಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಹಾಗೂ ತಮ್ಮ ಸ್ವಾರ್ಥಕ್ಕಾಗಿ ಇಡೀ ಹಿಂದೂ ಸಮಾಜವನ್ನು ಹಿಮ್ಮುಖವಾಗಿ ನೂಕಲು ಯತ್ನಿಸುತ್ತಿದ್ದಾರೆ ಎಂಬುದು ಜನಸಾಮಾನ್ಯರಿಗೆ ಎಷ್ಟು ಬೇಗ ಅರ್ಥವಾಗುತ್ತದೋ ಅಷ್ಟು ಒಳಿತು.

- ಆರ್. ಬಿ. ಶೆಣೈ. ಮಂಗಳೂರು

ಗೋಮಾಂಸದ ಬಗ್ಗೆ ಹೆಚ್ಚುತ್ತಿರುವ ಕುತೂಹಲ

ಪವಿತ್ರ ಬೈಬಲ್ಲಿನಲ್ಲಿ ಹೇಳಿರುವಂತೆ ಮಾನವನ ಮೂಲ ದೌರ್ಬಲ್ಯವೆಂದರೆ- ಅವನಿಗೆ ಯಾವಾಗಲೂ ನಿಷಿದ್ಧ ಹಣ್ಣಿನೆಡೆಗೇನೇ ಹೆಚ್ಚು ಆಕರ್ಷಣೆ. ಅಂದರೆ ಹೆಚ್ಚು ನಿರ್ಬಂಧಿತ ವಸ್ತು ಅಥವಾ ಕೃತ್ಯಗಳ ಕಡೆಗೇ ಮಾನವನಿಗೆ ಹೆಚ್ಚು -ಹೆಚ್ಚು ಆಕರ್ಷಣೆ.

ಅದೇರೀತಿ ಈಚೆಗಿನ ಒಂದು ವರ್ಷದಿಂದ ಬಿಜೆಪಿಯವರಿಂದಾಗಿ ಗೋಮಾಂಸದ ಬಗ್ಗೆ ದೇಶದೆಲ್ಲೆಡೆ ವಿನಾಕಾರಣ ವಿವಾದ ಎದ್ದು ಮಾಧ್ಯಮಗಳಲ್ಲಿ ದಿನಾಲೂ ಪ್ರಾಮುಖ್ಯತೆ ಪಡೆಯುತ್ತಿದೆ. ಇದರಿಂದಾಗಿ ಈಗೀಗ ಗೋಮಾಂಸದ ಬಗ್ಗೆ ಹಿಂದೂ ಸಮಾಜದ ಮೇಲ್ಜಾತಿ ಯುವಕರಲ್ಲಿ ಕುತೂಹಲ ಹುಟ್ಟಿದೆ. ಹಾಗಾಗಿ ಹಲವಾರು ಮೇಲ್ಜಾತಿ ಹಿಂದೂಗಳೇ ಈಗ ಕುತೂಹಲದಿಂದ "ಗೋಮಾಂಸದ ರುಚಿ ಹೇಗಿರುತ್ತದೆ? ಅದರ ಬಣ್ಣ-ವಾಸನೆ ಹೇಗಿರುತ್ತದೆ? ಅದರ ಕ್ರಯ ಎಷ್ಟಿದೆ?" ಎಂದು ಬೀಫ್ ಸೇವಿಸುವ ಸಮುದಾಯದ ತಮ್ಮ ಮಿತ್ರರನ್ನು ಕೇಳುತ್ತಿದ್ದಾರೆ. ಒಮ್ಮೆ ಹೀಗೆ ಕುತೂಹಲ ಬೆಳೆದ ಮೇಲೆ ಮುಂದೊಮ್ಮೆ ಅವರು ಗೋಮಾಂಸದ ರುಚಿ ನೋಡಿ ನಂತರ ಅದರಲ್ಲಿ ಆಸಕ್ತಿ ಬೆಳೆಸಿಕೊಳ್ಳುವುದು ಖಂಡಿತ. ಹಾಗಾಗಿ ಗೋಮಾಂಸ ಸೇವನೆಯ ಪರವಾಗಿರುವವರು ಈ ಧನಾತ್ಮಕ ಬೆಳವಣಿಗೆಗೆ ಪರೋಕ್ಷವಾಗಿ ಸಹಾಯ ಮಾಡಿದ ಮೋದಿ - ಅಮಿತ್ ಶಾ ಹಾಗೂ ಸಂಘ ಪರಿವಾರದ ರೌಡಿಗಳಿಗೆ ಮತ್ತು ಬಾಯಿಬಡುಕರಿಗೆ ಥ್ಯಾಂಕ್ಸ್ ಹೇಳಬೇಕು ಅಲ್ಲವೇ?

ಬೆಂಗಳೂರಿನಲ್ಲಿಯ ಲಕ್ಷಗಟ್ಟಲೆ ಐಟಿ-ಬಿಟಿ ನೌಕರರು ಪ್ರೊಜೆಕ್ಟ್‌ಗಳಿಗಾಗಿ ವಿದೇಶಕ್ಕೆ ಹೋಗಲೇಬೇಕಾಗುತ್ತದೆ ಹಾಗೂ ಅವರು ಅಲ್ಲಿ ಗೋಮಾಂಸ ಭರಿತ ಖಾದ್ಯಗಳನ್ನು ತಿನ್ನದೇ ವಿಧಿಯಿರುವುದಿಲ್ಲ. ಆದರೆ ಅವರು ಭಾರತಕ್ಕೆ ಮರಳಿಬಂದ ಮೇಲೆ ಅದನ್ನು ತಮ್ಮ ಮನೆಯವರಿಂದ ಮುಚ್ಚಿಡುತ್ತಿದ್ದರು. ಆದರೆ ಇತ್ತೀಚೆಗೆ ಅವರಿಗೆ ವಿದೇಶದಲ್ಲಿ ತಾವು ಗೋಮಾಂಸ ಸೇವಿಸಿರುವುದನ್ನು ತಮ್ಮ ಕುಟುಂಬ ದವರಿಂದ ಮುಚ್ಚಿಡುವ ಅಗತ್ಯ ಬೀಳುತ್ತಿಲ್ಲ. ಯಾಕೆಂದರೆ ಇಡೀ ಜಗತ್ತೇ ಈಗ ಒಂದು ಜಾಗತಿಕ ಗ್ರಾಮ ಆಗಿರುವುದರಿಂದ ಐಟಿ ನೌಕರರ ಕುಟುಂಬದವರಿಗೆ ತಾವೆಲ್ಲ ಜಗತ್ತಿನೊಟ್ಟಿಗೆ ಕಾಲು ಹಾಕಬೇಕಾದ ಅನಿವಾರ್ಯತೆಯ ಅರಿವಾಗಿದೆ.

ವಿದೇಶದಲ್ಲಿ ತಮ್ಮ ಮಕ್ಕಳು ಗೋಮಾಂಸ ಸೇವಿಸಿರುವ ಬಗ್ಗೆ ಅವರಿಗೆ ಅಸಹನೆಯಿಲ್ಲ, ಮುಂದೆ ತಮ್ಮ ಈ ಮಕ್ಕಳು ಭಾರತದಲ್ಲಿಯೂ ಗೋಮಾಂಸ ಸೇವಿಸಿದರೆ ಹಿರಿಯರಿಗೆ ಬೇಜಾರಾಗಲಿಕ್ಕಿಲ್ಲ, ಅಮೆರಿಕ-ಯುರೋಪಿನಲ್ಲಿ ವಾಸಿಸುವ ಹಿಂದೂಗಳೆಲ್ಲಾ ಗೋಮಾಂಸ ಸೇವಿಸುವುದು ಅನಿವಾರ್ಯ ಎಂದು ಎಲ್ಲರಿಗೂ ಈಗ ಮನದಟ್ಟಾಗಿದೆ. ಜತೆಗೆ ಕೇಸರಿ ಪಡೆಗಳ ಗೋಹತ್ಯೆ ರಾಜಕೀಯದ ಹಿಂದಿನ ಕಪಟ ಉದ್ದೇಶ ಮತ್ತು ಸ್ವಾರ್ಥ ಸಹ ಜನರಿಗೆ ಕ್ರಮೇಣ ಅರ್ಥವಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ.

- ವೀರಪ್ಪ ದಿ ನಾಯಕ್. ಮಂಗಳೂರು

ಬಡ ಹುಡುಗಿಯರ ಗೋಳು ಹೇಳತೀರದು

ಬೆಂಗಳೂರಿನ ಮಲ್ಲತ್ತಳ್ಳಿ ಹಾಸ್ಟೆಲ್‌ನ ಹುಡುಗಿಯರ ಗೋಳಿನ ಕುರಿತು ಬಂದ ವಸ್ತುನಿಷ್ಠ ವರದಿಯನ್ನು ಓದಿ ತುಂಬಾ ಬೇಜಾರಾಯಿತು. ಆದರೆ ಆ ಗೋಳು ಕೇವಲ ಮಲ್ಲತ್ತಳ್ಳಿ ಹಾಸ್ಟೆಲ್‌ದು ಮಾತ್ರ ಅಲ್ಲ, ಇಡೀ ಕರ್ನಾಟಕದಲ್ಲಿರುವ ಎಲ್ಲ ಹಾಸ್ಟೆಲ್‌ಗಳ ಪರಿಸ್ಥಿ ರೀತಿ ಇದೆ ಎಂಬುದರಲ್ಲಿ ಯಾವ ಸಂದೇಹವಿ ಅತಿ ಹೆಚ್ಚು ಭ್ರಷ್ಟಾಚಾರ ನಡೆಯುವ ಇಲಾಖೆ ಕಲ್ಯಾಣ ಇಲಾಖೆಯು ಒಂದು ಎನ್ನಬಹು ಹಿಂದುಳಿದ ಪ್ರತಿಭಾವಂತ ಮಕ್ಕಳಿಗೆ ನ್ಯಾಯ ಹಾಗೂ ಹಕ್ಕುಬದ್ಧವಾಗಿ ಸಿಗಬೇಕಾದ ಊ ದುಡ್ಡನ್ನು ಕಾಗೆಹದ್ದುಗಳಂತೆ ಹರಿದು ತಿನ್ನುವವರು ಹಾಸ್ಟೆಲ್ ವಾರ್ಡನ್‌ಗಳು ಅವರ ಜೊತೆಗೆ ಅವರ ಮೇಲಿನ ತಾಲ್ಲೂ ಜಿಲ್ಲಾ ಅಧಿಕಾರಿಗಳು ಸಹ ಬಳಿದುಕೊಂ ಉಳಿದಿದ್ದರಲ್ಲಿ ಮಕ್ಕಳಿಗೆ ಪ್ರಾಣಿಗಳು ತಿನ್ನಲು ಹಿ ನೋಡುವಂತಹ ಊಟವನ್ನು ಕೊಡುತ್ತ ಗೊತ್ತಿದ್ದರೂ ಯಾವ ಶಾಸಕರು ಮತ್ತು ಮಂ ವ್ಯವಸ್ಥೆಯನ್ನು ಸರಿಪಡಿಸಲು ತಲೆಕೆಡಿಸಿಕೊಳ್ಳುವು ತಲೆಕೆಡಿಸಿಕೊಳ್ಳುವುದು ಕೇವಲ ತಮ್ಮ ಹಿಂಬಾಲಕ ಚೇಲಾಗಳ ಪೆದ್ದ ಮಕ್ಕಳಿಗೆ ಬಡ ಮಕ್ಕಳಿಗೆಂದು ಸ್ಥಾಪಿಸಿರುವ ವಸತಿಶಾಲೆಗಳ ಕೊಡಿಸಲು ಮಾತ್ರ. ಇದರಿಂದಾಗಿ ಎಷ್ಟೋ ಬಡ ಮಕ್ಕಳು ಓದಲು ವಸತಿಶಾಲೆಗಳಲ್ಲಿ ಸ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಂಡಿದ್ದಾ ಭ್ರಷ್ಟ ರಾಜಕೀಯ ವ್ಯವಸ್ಥೆ ಯಾವಾಗ ಬೇ ನಿರ್ಮೂಲನೆ ಆಗುತ್ತೋ?


- ಲಕ್ಷ್ಮೀಕಾಂತ ಮಿರಜಕರ

ಕಾಲಕ್ಕೆ ತಕ್ಕಂತೆ ಹಿಂದೂ ಧರ್ಮ ಬದಲಾಗಲಿ

ಇನ್ನಿತರ ಧರ್ಮಗಳಿಗೆ ಹೋಲಿಸಿದರೆ ಹಿಂ ಅತಿ ಪ್ರಾಚೀನ ಧರ್ಮ. ಈ ಧರ್ಮದ ನಂ ಧರ್ಮಗಳಂತೆ, ಎಲ್ಲರನ್ನೂ ಕೊಂಡೊಯ್ಯುವ, ಹಿಂದೂ ಕೂಡಾ ಮಾನ್ಯ ಮಾಡುವಂಥ, ಒಬ್ಬ ಅಥವಾ ಸ್ವಾಮಿಗಳು ನಮಗೆ ಇದ್ದಾರೆಯೇ? ಗಲ್ಲಿ ನಂಬಿಗೆಗೆ, ಪ್ರಾಂತ್ಯಕ್ಕೆ, ರಾಜ್ಯಕ್ಕೆ - ಹೀಗೆ ಸ್ವಾಮಿಗಳಿದ್ದು, ಪ್ರತಿಯೊಬ್ಬರೂ ತಾವು ಹೋ ಮಾರ್ಗವೇ ಮೋಕ್ಷಕ್ಕೆ ಸಮೀಪದ ಮತ್ತು ಸ ಹೈವೇ ಎಂದು ಬಿಂಬಿಸುತ್ತಿದ್ದಾರೆ.

ತಮಿಳುನಾಡಿನಲ್ಲಿ ಪೊಂಗಲ್, ಕೇರಳದ ಆಂಧ್ರದಲ್ಲಿ ಉಗಾದಿ, ಮಹಾರಾಷ್ಟ್ರದಲ್ಲಿ ವಿನಾಯಕ ಗುಜರಾತ್-ಬಂಗ್ಲಾದಲ್ಲಿ ದಸರಾ, ಉತ್ತರದಲ್ಲಿ ಮತ್ತು ಪಂಜಾಬ್‌ನಲ್ಲಿ ಬೈಸಾಖಿ, ಬಿಹಾರದ ಪೂಜಾ - ಹೀಗೆ ರಾಜ್ಯಕ್ಕೊಂದು, ಭಾಷೆಗೊಂದು ತಮಿಳುನಾಡಿನ ಕರುಣಾನಿಧಿಯವರಿಗೆ ಪೊಂಗ ಹಬ್ಬ, ಆದರೆ ಮತ್ತು ದೀಪಾವಳಿ ಸೇರಿದ ಯಾವುದೇ ಹಬ್ಬ ಹಬ್ಬವಲ್ಲ. ಯಾವುದಾದರು ಹಬ್ಬವನ್ನು ಎಲ್ಲಾ ಹಿಂದೂಗಳು ಒಟ್ಟಾಗಿ ಉದಾಹರಣೆ ಇದೆಯೇ?

ಹಬ್ಬ-ಹರಿದಿನಗಳಿರಲಿ, ಮಂಗಳಕಾಯ ಹುಟ್ಟು ಹಬ್ಬವಿರಲಿ, ತಿಥಿ ಇರಲಿ, ತೇರು- ಜಾ ಇವುಗಳನ್ನು ಆಚರಿಸುವ ವಿಧಿವಿಧಾನದಲ್ಲಿ ಏಕತೆ ಇದೆಯೇ? ಒಬ್ಬೊಬ್ಬರದು ಒಂದೊಂದು



ಪ್ರತಿಯೊಬ್ಬರಿಗೂ ತಮ್ಮದೇ ಶ್ರೇಷ್ಠವೆನ್ನುವ ವಾ ದೇಶದಲ್ಲಿ ಏಕರೂಪದ ನಾಗರಿಕಸಂಹಿತೆ ಇರ ಚರ್ಚೆ ನಡೆದಿರುವಾಗ, ಆ ನಿಟ್ಟಿನಲ್ಲಿ ತೆರೆಯ ಕಾರ್ಯ ಚಟುವಟಿಕೆಗಳು ನಡೆದಿದೆ ಹೇಳುತ್ತಿರುವಾಗ, ಇದಕ್ಕೂ ಮೊದಲು ದೇಶದ ಧರ್ಮವಾದ ಹಿಂದೂ ಧರ್ಮದಲ್ಲಿ ಏಕತಾನತೆ, ವಿಧಿವಿಧಾನಗಳು, ಹಬ್ಬಗಳು-ಹುಣ್ಣಿಮೆಗಳು ಆಚರಣೆಗಳು ಬರಬೇಕಲ್ಲವೇ?

- ರಮಾನಂದ ಶರ್ಮಾ. ಬೆಂ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು ಪ್ರತಿಕ್ರಿಯೆಗಳನ್ನು 9980331427 ನಂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿ

...ಪ್ರತಿಭಟನೆ ಪರಿಣಾಮಕಾರಿ


...ಶೋಷಣೆ, ದಮನಕಾರಿನೀತಿ ಇತ್ಯಾದಿಗಳ
...ದಾದ್ಯಂತ ಪ್ರಗತಿಪರರು, ಬರಹಗಾರರು,
...ದಾಖಲಿಸುತ್ತಿರುವ ಪ್ರತಿಭಟನೆ ನಿಜಕ್ಕೂ
...ಣಾಮಕಾರಿ. ದಮನಕಾರಿ ಪ್ರವೃತ್ತಿಯವರು
...ಭುವಿಸಲು ಕಾರಣರಾದ ದೇಶದ ಯುವಜನತೆ
...ನೆಗೆ ನೋಡಿ ಆಲೋಚಿಸಬೇಕಿದೆ. ನಂದಿತಾ
...ಕೆ.ರವಿ ಆತ್ಮಹತ್ಯೆಯಲ್ಲಿ ನಾಡಿನ ಜನತೆಗೆ
...ಪುಢಾರಿಗಳು, ಕೆಲ ಸಂಘಸಂಸ್ಥೆಗಳು ಈಗ
...ರುವುದೇಕೆ? ಕಳೆದವಾರ ಚಂಪಾ ಅವರ
...ತ್ರಿಕೆಯ ಚುರುಕುತನಕ್ಕೆ ಸಾಕ್ಷಿ. ನಂತರ
...ನಪತ್ರಿಕೆಯೊಂದು ಚಂಪಾ ಅವರ ಸಂದರ್ಶನ
...ತು.

...ಪ್, ಫೇಸ್‌ಬುಕ್‌ನಲ್ಲಿ ಕೆಲ ಅರೆಹುಚ್ಚರು
...ಲಿ-ಅರಚಲಿ, ಪ್ರತಿಭಟನೆ ಹೆಚ್ಚಲಿ.
...ಗಳ ಬೆಂಬಲ ಸದಾ ಇರುತ್ತದೆ.

- ಡಿ.ಎಲ್.ಮಂಜು, ಶಿವಮೊಗ್ಗ

...ಬುದ್ಧಿರಹಿತ ತಾಕತ್

...ದಿಗೆ ಕಾದಾಡುವಾಗ ತನ್ನವರನ್ನು ರಕ್ಷಿಸಲು
...ವರ್ಧನ ಗಿರಿಯನ್ನು ಹನುಮಂತ ಬೆಟ್ಟ
... ಹಸ್ತ ಅಗಲಿಸಿ ಎತ್ತಲಿಲ್ಲ, ಸೀದಾ ಮೇಲೆ
...ೋರು ಬೆರಳಿನಿಂದಲೂ ಎತ್ತಲಿಲ್ಲ, ಬದಲಿಗೆ
... ಎತ್ತಿದ. ಆದರೆ ಬಾಲ್ಯದಲ್ಲಿ ಬ್ರಹ್ಮಾಂಡವನ್ನೇ



...ೋರಿದಂತಹ ಆತ ಮನಸ್ಸು ಮಾಡಿದರೆ
...ೋವರ್ಧನ ಬೆಟ್ಟವನ್ನು ಗಾಳಿಯಲ್ಲೇ
...ತ್ತು, ಆದೇರೀತಿ ಪಾಂಡವರಾರೂ ಕುಂತಿ
...ಲೆ ಬೀಳದೇ ಕೇವಲ ಭೀಮನಷ್ಟೆ ಬಿದ್ದ.
... ಆತ ಬಿದ್ದ ಪೆಟ್ಟಿಗೆ ಬಂಡೆಯೇ
...ು ಕಾರಣನಾದ. (ಬೇರೆಯವರು ಬಿದ್ದಿದ್ದರೆ
...ತ್ತಿದ್ದರೆ ಇಲ್ಲಿ ಬಂಡೆಯೇ ಸತ್ತಿತು ಅರ್ಥಾತ್
...ಬುತು.) ಅಂದರೆ ತಮ್ಮ ಕಥಾ ನಾಯಕನನ್ನು
...ಬಿಸಲು ಹುಟ್ಟಿಕೊಂಡಂತಹ ಕಥೆಗಳಿವೆಯೇ
...ಸ್ತಿತಿಗೆ ಹತ್ತಿರವಿಲ್ಲ, ಹಾಗೆಯೇ ಮಧ್ವ
...ಾಲಿನ ಪಾತ್ರಕ್ಕೆ ಚಪ್ಪಡಿ ಮುಚ್ಚಿದ ಕಥೆಗೂ
...ಲೆಯಿದೆಯೇ ಹೊರತು ಬೇರೇನಲ್ಲ,
... ಕಾಲದ ಬಳಕೆಯಂತೆ ಮಣ್ಣಿನದೋ
... ಹಾಲಿನ ಪಾತ್ರ ಅದಾಗಿದ್ದರೆ ಆ ಪಾತ್ರದ
...00 ಕೆಜಿ ತೂಗುವ ಚಪ್ಪಡಿ ಇಟ್ಟರೆ ಆ
...ುಡಿಯುವ ಮಾತು ಒತ್ತಟ್ಟಿಗಿರಲಿ ಅದನ್ನ
...ತ್ರದ ಗತಿ ಏನಾಗಬಹುದು? ರೋಡ್
... ಸಿಕ್ಕ ಪೆಪ್ಸಿ ಕ್ಯಾನ್‌ನಂತಾಗಬಹುದಷ್ಟೆ.
...ದಶಾವತಾರದ ರಾಮಾವತಾರದಲ್ಲಿ ವಿಷ್ಣು
...ಆದಿಶೇಷನು ಲಕ್ಷ್ಮಣನಾಗಿ ಅವತರಿಸಿದರೆ
...ಬಲರಾಮನಾಗಿ ಬರುತ್ತಾನಂತೆ. ಬಲರಾಮ
...ತೆ ಬಲದೇವನೆಂದು ಗುರುತಿಸಲಾದ
... ಪಾತ್ರಕ್ಕೆ 'ಅವತಾರ ಪುರುಷ'ನೆಂದಲ್ಲದ
... ಅಸ್ತಿತ್ವವಿದೆಯಾದರೂ ಕೆಲವೆಡೆ
...ಬಿಸಿದ್ದು ಸೇರಿಸಲೂ ಆಗದ ಸೇರಿಸದಿರಲೂ
... ಪಾತ್ರಕ್ಕಾಗಿ ಮಾಡಿಕೊಂಡಂತಹ ಬದಲಿ
...ರತು ಬೇರೇನಲ್ಲ, ಜಗತ್ತಿಗೇ ಬೆಳಕಾಗಿ
... ಗೌತಮ ಬುದ್ಧನನ್ನೇ ಬಹುತೇಕರು
...ವನಂತೆ ಉಗಿದವನನ್ನೂ ಸಹಿಸಿಕೊಳ್ಳುವ
...ಳಿಸಿಕೊಳ್ಳುತ್ತಿದ್ದಾರಾದರೂ, ತಿಳಿದಿರುವಂತಹ
...ಮೊದಲಾದ ವೈಷ್ಣವ ಪಂಥಗಳು
...ೆ ಬದಲಿ ವ್ಯವಸ್ಥೆಗೆ ಈ ರೀತಿಯಾಗಿ
...ಸಿಸುತ್ತಿ.

- ಶಶಿ ಪುತ್ತೂರು, ದಕ

ಏಲಿಯನ್ + ಕಾಡು ಪ್ರಾಣಿ = ಮಾನವ!

ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರನ ಮೂರ್ತಿಯನ್ನು ಅಲ್ಲಿಂದ ತೆಗೆಯಬೇಕೆಂದು ವೈದಿಕರು ಮಾಡಿರುವ ಕುತಂತ್ರಕ್ಕೆ ಎದುರಾಗಿ ಪ್ರಗತಿಪರರು ಆ ಮೂರ್ತಿಗೆ ನವರಾತ್ರಿ ಸಮಯದಲ್ಲಿ ಪೂಜೆ ಮಾಡಿ ಅದನ್ನು ಅಲ್ಲಿಂದ ತೆಗೆಯಬಾರದೆಂದು ಹೇಳಿದ್ದರು. ಈ ವಿವಾದಕ್ಕೆ ಸಂಬಂಧಪಟ್ಟಂತೆ ಕಳೆದ ವಾರ ಕನ್ನಡ ಟಿವಿ ಚಾನೆಲ್ಲೊಂದರಲ್ಲಿ ಪ್ಯಾನೆಲ್ ಚರ್ಚೆ ನಡೆಯಿತು. ಅದರಲ್ಲಿ ಪ್ರಗತಿಪರರ ಪರವಾಗಿ ಈ ಪತ್ರಿಕೆಯ ಅಂಕಣಕಾರ ಮತ್ತು ಸಂಶೋಧಕ ಯೋಗೇಶ್ ಮಾಸ್ಟರ್ ಭಾಗವಹಿಸಿದ್ದರು. ವೈದಿಕರ ಕಡೆಯಿಂದ ಒಬ್ಬ ಪುರೋಹಿತ ಹಾಗೂ ಒಬ್ಬ ಬಂಡಲ್ ಜ್ಯೋತಿಷಿ ಇದ್ದರು. ಯೋಗೇಶ್ ಮಾಸ್ಟರ್ ಮತ್ತು ಒಬ್ಬ ಪ್ರಗತಿಪರ ಪ್ರೊಫೆಸರ್ ಕೂಡಿ ವೈದಿಕರ ಮುಖದ ನೀರಿಳಿಸಿದ್ದು ನೋಡುವಾಗ ತುಂಬಾ ಖುಷಿಯಾಗುತ್ತಿತ್ತು.

ಈ ಚರ್ಚೆಗೆ ಇನ್ನೂ ಇಬ್ಬರು ವಿಚಿತ್ರ ಪಗಡಿ ಧರಿಸಿದ್ದ ಅಮಿಬಾ ಎಂಬ ವೇಷಗಾರರು ಬಂದಿದ್ದರು. ಅದರಲ್ಲಿ ಒಬ್ಬ ಚೀನಾದಿಂದ ಆಮದಾದ ಪಾಸಿಟಿವ್-ಎನರ್ಜಿ ನೆಗೆಟಿವ್-ಎನರ್ಜಿ ಸಿದ್ಧಾಂತದ ಬಗ್ಗೆ ಬೊಗಳೆ ಬಿಟ್ಟ ಮೇಲೆ ಆ ವಿಚಿತ್ರ ಪಗಡಿವಾಲಾ ರಾಕ್ಷಸರೆಂದರೆ ಬೇರೆ ಗ್ರಹದಿಂದ ಬಂದ ದುಷ್ಟ ಏಲಿಯನ್ನುಗಳಾಗಿದ್ದವು ಎಂದು ತೀರ್ಪು ಕೊಟ್ಟನು. (ಅವನ ವಿಚಿತ್ರ ವೇಷ ನೋಡಿದಾಗ ಅವನೇ ಎಲಿಯನ್ ಇರಬಹುದೇ ಎಂಬ ಸಂಶಯ ಮೂಡುತ್ತಿತ್ತು).

ಈಜಿಪ್ಟ್ ಚೀನಾ ಭಾರತ ಗ್ರೀಸ್ ಈ ಪ್ರಾಚೀನ ಸಂಸ್ಕೃತಿಗಳ ಪುರಾಣಗಳಲ್ಲಿ ಹೇಳಲಾದ ಚಿತ್ರವಿಚಿತ್ರ ರೂಪದ ದೇವರುಗಳೆಲ್ಲಾ ಎಲಿಯನ್ ಆಗಿದ್ದರು ಎಂದು ಸಾರುವ ಒಂದು ಕಾರ್ಯಕ್ರಮ ಇಂಗ್ಲಿಷ್ ಹಿಸ್ಟರೀ ಟಿವಿ ಚಾನೆಲ್ಲಿನಲ್ಲಿ ಕಳೆದ ಮೂರು ವರ್ಷಗಳಿಂದ ಪ್ರಸಾರ ಆಗುತ್ತಿದೆ. ಅದನ್ನೇ ಈ ಅಮಿಬಾ ಸ್ವಲ್ಪ ಬದಲಾಯಿಸಿ ಹೇಳಿದ್ದು. ಬೇರೆಲ್ಲಾ ಪುರಾತನ ಸಂಸ್ಕೃತಿಯಿದ್ದ ದೇಶಗಳು ಚಿತ್ರವಿಚಿತ್ರ ಮಾನವ ಅಥವಾ ಪ್ರಾಣಿ ರೂಪದ ದೇವರನ್ನು ಪೂಜಿಸುವುದನ್ನು ತೊರೆದು ಶತಮಾನಗಳೇ ಕಳೆದಿದ್ದರೂ ಭಾರತೀಯ ವೈದಿಕರು ಮಾತ್ರ ಅದೇ ಅಡಗೋಲಜ್ಜಿ ಕಥೆಯಾಧಾರಿತ ಚಿತ್ರವಿಚಿತ್ರ ದೇವರನ್ನು ಆರಾಧಿಸುತ್ತಾ ಬಂದಿರುವುದನ್ನು ನೋಡಿದಾಗ ವೈದಿಕರು ಏಲಿಯನ್ನರ ಮೂಲ ಸಂತತಿ ಎಂದೆನಿಸುತ್ತದೆ.

ಅದೇನೇ ಇರಲಿ, ಇವರೆಲ್ಲರ ಏಲಿಯನ್ ಸಿದ್ಧಾಂತ ನೋಡಿ ನನಗೂ ಎಲಿಯನ್ ಭ್ರಮೆ ಹಿಡಿದಿದ್ದರಿಂದ ನನ್ನದೂ ಒಂದು ಸ್ವಂತ ಎಲಿಯನ್ ಜೀವಿಗಳ ಸಿದ್ಧಾಂತ ಮಂಡಿಸುತ್ತಿದ್ದೇನೆ.

ಹಿಮ ಯುಗದ ನಂತರ ಈ ಪೃಥ್ವಿಯ ಮೇಲೆ ಉದ್ಭವಿಸಿದ ಜೀವಿಗಳಲ್ಲಿ ಕೇವಲ ಹೆಚ್ಚು ಬುದ್ಧಿವಂತಿಕೆಯಿಲ್ಲದ ಜೀವಿಗಳು ಮಾತ್ರ ಇದ್ದವು. ಅವುಗಳಲ್ಲಿ ವಾನರ ಮತ್ತು ಮಾನವರು ಇರಲಿಲ್ಲ, ಆದರೆ ಬೇರೆ ಎಲ್ಲಾ ಸಸ್ತನಿಗಳೂ ಇದ್ದವು ಹಾಗೂ ಅವುಗಳಲ್ಲಿ ಪ್ರಾಕೃತಿಕವಾಗಿ ಬೆಳೆದ ಬೇರೆ ಬೇರೆ ಮೂಲ ಗುಣಗಳಿದ್ದವು. ಆಗ ಭೂಮಿಗೆ ಬಂದ ಎಲಿಯನ್‌ಗಳು ಇಲ್ಲಿಯ ಜೀವಿಗಳ ಅತೀ ಕಡಿಮೆ ಬುದ್ಧಿಮಟ್ಟ ನೋಡಿ, ಈ ಭೂಮಿಯ ಸಸ್ತನಿಗಳ ಬುದ್ಧಿಮಟ್ಟ ಹೆಚ್ಚಿಸುವ ಸುಲಭದ ಉಪಾಯವಾಗಿ ಸಸ್ತನಿಗಳೊಂದಿಗೆ ತಮ್ಮ ಎಲಿಯನ್‌ಗಳ ಬುದ್ಧಿವಂತ ಜೀನ್ಸ್ ಸಮ್ಮಿಲನಗೊಳಿಸಲು ಭೂಮಿಯ ಹೆಣ್ಣು ಸಸ್ತನಿಗಳೊಂದಿಗೆ ಸಂಭೋಗ ಮಾಡಿಯೋ ಅಥವಾ ಎಲಿಯನ್‌ಗಳ ವೀರ್ಯದಿಂದ ಭೂಮಿಯ ಮೂಲ ಸಸ್ತನಿಗಳಲ್ಲಿ ಕೃತ್ರಿಮ ಗರ್ಭಧಾರಣೆ ಮಾಡಿಸಿಯೋ ಹೆಚ್ಚು ಬುದ್ಧಿವಂತ ಜೀವಿಯನ್ನು ಸೃಷ್ಟಿ ಮಾಡಿ ಕೊಟ್ಟು ಹೋದರು. ಹೀಗೆ ಹುಟ್ಟಿದ ಜೀವಿಗಳು ವಾನರರಾಗಿ ಹುಟ್ಟಿ ನಂತರ ಬೌದ್ಧಿಕ ಹಾಗೂ ದೈಹಿಕ ವಿಕಾಸ ಹೊಂದುತ್ತಾ ಹೋಗಿ ಮನುಷ್ಯ ಜೀವಿಗಳಾಗಿ ವಿಕಾಸ ಹೊಂದಿದರು. ಆ ಯುಗದಲ್ಲಿ ಏಲಿಯನ್ನುಗಳು ಭೂಮಿಯ ವಿವಿಧ ಜಾತಿಯ ಪ್ರಾಣಿಗಳೊಂದಿಗೆ ಸಂಕರ ಮಾಡಿದ್ದರಿಂದ ಭೂಮಿಯ ಎಲ್ಲಾ ಸಸ್ತನಿ ಪ್ರಾಣಿಗಳ ಮೂಲ ಗುಣ-ಸ್ವಭಾವಗಳನ್ನು ಹೊಂದಿದ ಆದರೆ ಹೆಚ್ಚಿನ ಬುದ್ಧಿ ಮಟ್ಟದ ವಾನರ/ಮಾನವ ಜೀವಿಗಳು ಹುಟ್ಟಿದರು (ಅವರೇ ಮೊದಲ ಮಾನವ ಆದಮ್ ಮತ್ತು ಈವ್ ಆಗಿರಬಹುದು).

ಹಾಗಾಗಿ ಇಂದು ಸ್ವತಃ ನಾವು ಹಾಗೂ ನಮ್ಮ ಕುಟುಂಬ ಸದಸ್ಯರ ಸಹಿತ ಎಲ್ಲಾ ಮಾನವರ ಗುಣ-ಸ್ವಭಾವಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಪ್ರತಿಯೊಬ್ಬ ಮಾನವನಲ್ಲೂ ಒಂದಲ್ಲ ಒಂದು ಪ್ರಾಣಿಯ ಮೂಲ ಗುಣಗಳು ಗೋಚರಿಸುತ್ತವೆ. ಕೆಲವರು ನರಿಯಂತೆ ಚಾಣಾಕ್ಷರಾಗಿದ್ದರೆ, ಇನ್ನು ಕೆಲವರು ಹಸುವಿನಂತೆ ಸೌಮ್ಯ ಸ್ವಭಾವದವರಾಗಿರುತ್ತಾರೆ. ಇನ್ನೂ ಕೆಲವರು ಕತ್ತೆಯಂತೆ ಶ್ರಮಜೀವಿ ಮತ್ತು ತನ್ನ ಅಧಿಕಾರಕ್ಕೆ ಹೋರಾಡದ ಗುಲಾಮೀ ಮನಸ್ಥಿತಿಯವರಾಗಿದ್ದರೆ, ಮತ್ತೆ ಕೆಲವರು ಜಿಂಕೆಯಂತೆ ಚಂಚಲ ಅಥವಾ ಬೆಕ್ಕಿನಂತೆ ಸೋಮಾರಿ ಹಾಗೂ ಸ್ವಾರ್ಥಿಯಾಗಿರುತ್ತಾರೆ. ಮತ್ತೆ ಕೆಲವರು ನಾಯಿಯಂತೆ ಪ್ರಾಮಾಣಿಕರಾಗಿರುತ್ತಾರೆ ಅಥವಾ ಆನೆಯಂತೆ ಬಲಶಾಲಿಯಾಗಿದ್ದೂ ಮೃದು ಸ್ವಭಾವದವರಾಗಿರುತ್ತಾರೆ, ಅಥವಾ ಸಿಂಹದಂತೆ ಪಾಳೆಗಾರಿಗೆ ಸ್ವಭಾವ ಅಥವಾ ಹುಲಿಯಂತೆ ಚಾಲಾಕಿ ಆಕ್ರಮಣಕಾರರಾಗಿರುತ್ತಾರೆ ಅಥವಾ ಇಲಿಯಂತೆ ಕಳ್ಳರಾಗಿರುತ್ತಾರೆ, ಹೀಗೆ ಪ್ರತಿಯೊಬ್ಬ ಮಾನವನ ಮೂಲ ಸ್ವಭಾವ ಒಂದಲ್ಲ ಒಂದು ಪ್ರಾಣಿಯ ಮೂಲ ಸ್ವಭಾವಕ್ಕೆ ಹೋಲಿಕೆ ಇದ್ದೇ ಇರುತ್ತದೆ. ಇದಕ್ಕೆಲ್ಲಾ ಕಾರಣ ಏಲಿಯನ್ನರು ತಮ್ಮ ಬುದ್ಧಿವಂತಿಕೆಯನ್ನು ತಮ್ಮ ವೀರ್ಯದ ಮುಖಾಂತರ ಭೂಮಿಯ ಸಸ್ತನಿ ಪ್ರಾಣಿಗಳೊಳಗೆ ಸಂಕರಗೊಳಿಸಿ ಆ ಸಂಸರ್ಗದಿಂದ ಮಾನವ ಜೀವಿಯನ್ನು ಹುಟ್ಟಿಸಿದ್ದೇ ಆಗಿದೆ. ಹಾಗಾಗಿ ಮನುಷ್ಯನ ಬೌದ್ಧಿಕ ಮಟ್ಟ ಈಗಲೂ ಪೀಳಿಗೆಯಿಂದ ಪೀಳಿಗೆಗೆ ಹೆಚ್ಚುತ್ತಾ ಹೋಗುತ್ತಿರುವುದು ನಿಜವಾದರೂ ಅವರೊಳಗೆ ಯಾವುದಾದರೂ ಒಂದು ಕಾಡು ಪ್ರಾಣಿಯ ಸ್ವಭಾವ ಇರುವುದು ಸಹ ಅಷ್ಟೇ ನಿಜ.

ಇತರ ಸಸ್ತನಿಗಳ ಮೆದುಳು ಶಕ್ತಿ ಲಕ್ಷಾಂತರ ವರ್ಷ ಹಿಂದಿದ್ದಷ್ಟೇ ಈಗಲೂ ಇದೆ, ಆದರೆ ಮಾನವನ ಮೆದುಳು ಶಕ್ತಿ ಬೆಳೆಯುತ್ತಲೇ ಹೋಗುತ್ತಿದೆ. ಇದಕ್ಕೆ ಕಾರಣ ನಮ್ಮೊಳಗೂ ಏಲಿಯನ್ ಅಂಶವಿರುವುದು. ಲಕ್ಷಾಂತರ ವರ್ಷಗಳಿಂದ ಉಳಿದ ಪ್ರಾಣಿಗಳ ಬುದ್ಧಿಶಕ್ತಿ ಇದ್ದಲ್ಲೇ ಇದ್ದರೆ ಮಾನವನ ಬುದ್ಧಿಶಕ್ತಿ ಮಾತ್ರ ಇಷ್ಟು ವೇಗವಾಗಿ ಬೆಳೆದು ಕಂಪ್ಯೂಟರ್ ಯುಗಕ್ಕೆ ಮುಟ್ಟಲು ಮಾನವನೊಳಗಿರುವ ಏಲಿಯನ್ ಅಂಶಗಳೇ ಕಾರಣ.

ಹೀಗಿದೆ ನನ್ನ (ಏಲಿಯನ್ + ಕಾಡು ಪ್ರಾಣಿ = ಮಾನವ) ಸಂಕರ ಸಿದ್ಧಾಂತ! ಮುಂದೊಮ್ಮೆ ನನ್ನ ಈ ಸಿದ್ಧಾಂತ ಸತ್ಯ ಎಂದು ವೈಜ್ಞಾನಿಕವಾಗಿ ಸಾಬೀತಾದರೆ ಸನಾತನಿಗಳು ಆಗ "ನಮ್ಮ ಆದಿ ಶಂಕರರಿಗೆ ಇದೆಲ್ಲಾ ಮೊದಲೇ ಗೊತ್ತಿತ್ತು, ಹೇಗೆಂದರೆ ಎಲ್ಲರಲ್ಲೂ ದೇವರ ಅಂಶವಿದೆ ಎಂದು ಶಂಕರರು ಹೇಳಿದ್ದರ ಒಳಅರ್ಥ ಎಲ್ಲರಲ್ಲೂ ಎಲಿಯನ್ ಅಂಶವಿದೆ ಎಂದೇ ಆಗಿತ್ತು" - ಎಂದು ಕ್ಲೇಮ್ ಮಾಡಬಹುದು!


ಎಷ್ಟಾದರೂ ವೈದಿಕರು ತ್ರಿಕಾಲ ಜ್ಞಾನಿಗಳು ತಾನೇ. ನಮ್ಮಂತಹ ಶೂದ್ರ ಮುಂಡೇವುಗಳಿಗೆ ಅದೆಲ್ಲಾ ಅರ್ಥವಾಗುವುದಿಲ್ಲ ಬಿಡಿ!!

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಮೋದಿ ಸರ್ಕಾರಕ್ಕೆ ಚಾವಟಿ ಬೀಸಿದ 'ಲ್ಯಾನ್ಸೆಟ್'

ಬೂಸಿ ಬಸ್ಯ... ಮೋದಿ!

84



ನೂರಾರು ಭರವಸೆಗಳು ಮತ್ತು 'ಅಭಿವೃದ್ಧಿ'ಯ ಘೋಷಣೆಗಳ ಮೂಲಕ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ತನ್ನೆಲ್ಲಾ ಶಕ್ತಿಸಾಮರ್ಥ್ಯವನ್ನು ಶ್ರೀಮಂತ ವರ್ಗಗಳ ಒಳಿತಿಗಾಗಿ ಮೀಸಲಿಟ್ಟಿರುವುದು ಮಾತ್ರವಲ್ಲ ಅವರಿಗೋಸ್ಕರ ದೇಶವಿದೇಶಗಳಲ್ಲಿ ಬಂಡವಾಳ ಹೂಡಿಕೆಗೆ ಹೊಸ ಹೊಸ ಅವಕಾಶದ ಬಾಗಿಲುಗಳನ್ನು ತೆರೆದುಕೊಡುವುದರಲ್ಲೆ ತಲ್ಲೀನವಾಗಿರುವ ವಿಚಾರ ಜನಜನಿತವಾಗಿದೆ. ಇತ್ತ ನಾಡಿನ ಜನಸಾಮಾನ್ಯರು ಮಾತ್ರ ಮಂಕುಬೂದಿ ಎರಚುವ ಭಾಷಣಗಳಿಂದಲೆ ತೃಪ್ತಿಪಡಬೇಕಾದ ಪರಿಸ್ಥಿತಿ ಇದೆ. ಇಂತಹ ಒಂದು ಭಾಷಣದ ಸ್ಯಾಂಪಲ್ ನೋಡಿ: "ಬಡವರಿಗೆ ಸಬ್ಸಿಡಿಗಳು ಅವಶ್ಯವೆಂದು ನನ್ನ ಭಾವನೆ. ಸಬ್ಸಿಡಿಗಳನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವ ವ್ಯವಸ್ಥೆ ಬೇಕಾಗಿದೆ. ಸಬ್ಸಿಡಿಗಳು ಪೋಲಾಗುತ್ತಿರುವುದನ್ನು ನಿಲ್ಲಿಸಬೇಕಾಗಿದೆ." ಆದರೆ ವಾಸ್ತವದಲ್ಲಿ ಸರ್ಕಾರದ ನಡೆ ಅದರ ನುಡಿಗೆ ತೀರ ತದ್ವಿರುದ್ಧವಿದೆ. ಅದೇನೋ ಓದೋದು ಶಾಸ್ತ್ರ ಇಕ್ಕೋದು ಗಾಳ ಅಂತಾರಲ್ಲ, ಹಾಗೆ. ಸಾರ್ವಜನಿಕ ಆರೋಗ್ಯದ ವಿಷಯವನ್ನೆ ತೆಗೆದುಕೊಂಡರೆ ಅನೇಕ ಕಾರ್ಯಕ್ರಮಗಳಿಗೆ ಕತ್ತರಿಪ್ರಯೋಗ ಆಗಿರುವುದನ್ನು ಕಾಣಬಹುದು. ಚುನಾವಣಾ ಪ್ರಣಾಳಿಕೆಯಲ್ಲಿ ಕೊಟ್ಟಿರುವ ಭರವಸೆಗಳನ್ನು ಸಹಿತ ಗಾಳಿಗೆ ತೂರಲಾಗಿದೆ. 2014-15ರ ಸಾಲಿನ ಬಜೆಟ್ಟಿನಲ್ಲಿ ಆರೋಗ್ಯ ಸೇವೆಗಳ ಅನುದಾನದಲ್ಲಿ ಶೇಕಡಾ 20ರಷ್ಟು ಮತ್ತು ಎಚ್‌ಐವಿ, ಏಯ್ಡ್ಸ್ ನಿಯಂತ್ರಣ ಕಾರ್ಯಕ್ರಮಗಳ ಅನುದಾನದಲ್ಲಿ ಶೇಕಡಾ 30ರಷ್ಟು ಕಡಿತ ಮಾಡಲಾಗಿದೆ! ವಿಶ್ವ ಸಂಸ್ಥೆಯ ಅಂಕಿಅಂಶಗಳ ಅನುಸಾರ ಭಾರತದಲ್ಲಿ ಸುಮಾರು 40 ಕೋಟಿ ಬಡವರಿದ್ದಾರೆ. ಎಚ್‌ಐವಿ, ಏಯ್ಡ್ಸ್ ರೋಗಿಗಳ ಸಂಖ್ಯೆಯಲ್ಲಿ ಭಾರತ ಜಗತ್ತಿನಲ್ಲಿ ಮೂರನೆ ಸ್ಥಾನದಲ್ಲಿದೆ. ಇಲ್ಲಿ ವರ್ಷಕ್ಕೆ 10 ಲಕ್ಷಕ್ಕೂ ಅಧಿಕ ಮಕ್ಕಳು ಅತಿಸಾರಕ್ಕೆ ಬಲಿಯಾಗುತ್ತಿದ್ದಾರೆ. ದೇಶದ ಸರಕಾರಿ ಆಸ್ಪತ್ರೆಗಳು, ಕ್ಲಿನಿಕ್ಕುಗಳು ಶೋಚನೀಯ ಪರಿಸ್ಥಿತಿಯಲ್ಲಿದ್ದರೆ ಖಾಸಗಿ ವಲಯ ಶೇಕಡಾ 15ರಷ್ಟು ಬೆಳವಣಿಗೆ ಸಾಧಿಸಿದೆ. ಸಾರ್ವಜನಿಕ ಆರೋಗ್ಯಕ್ಕೆ ಮಾಡುವ ವೆಚ್ಚದ ವಿಷಯದಲ್ಲಿ ಭಾರತ, ಚೀನಾ ಅಮೆರಿಕಗಳಿಗಿಂತ ತುಂಬಾ ಹಿಂದಿದೆ. ಅಮೆರಿಕದಲ್ಲಿ ಇದು ಜಿಡಿಪಿಯ ಶೇಕಡಾ 8.3 ಮತ್ತು ಚೀನಾದಲ್ಲಿ ಶೇಕಡಾ 3ರಷ್ಟಿದ್ದರೆ ಭಾರತ ವ್ಯಯಿಸುತ್ತಿರುವುದು ಜಿಡಿಪಿಯ ಶೇಕಡಾ 1ರಷ್ಟು ಮಾತ್ರ!!!

ಬ್ರಿಟನ್‌ನ ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕ 'ಲ್ಯಾನ್ಸೆಟ್' ಇತ್ತೀಚೆಗೆ ನಡೆಸಿರುವ ಒಂದು ಮಹತ್ವದ ಅಧ್ಯಯನ ಮೋದಿ ಸರ್ಕಾರಕ್ಕೆ ಬಲವಾದ ಚಾಟಿ ಬೀಸಿದೆ. ಜಾಗತಿಕ ಮಟ್ಟದ ಆರೋಗ್ಯತಜ್ಞರ ತಂಡವೊಂದು ನಡೆಸಿದ ಈ ಅಧ್ಯಯನ, ಕೇಂದ್ರ ಸರ್ಕಾರ ದೇಶದ ಆರೋಗ್ಯ ವಲಯದ ಬಗ್ಗೆ ಅತೀವ ನಿರ್ಲಕ್ಷ್ಯದ ಧೋರಣೆ ತಳೆದಿದೆ ಎಂದು ಯಾವುದೇ ಮುಚ್ಚುಮರೆ ಇಲ್ಲದೆ ಹೇಳುತ್ತದೆ. ಸರ್ಕಾರವನ್ನು ಕಟುವಾಗಿ ಟೀಕಿಸಿರುವ ಈ ವರದಿ ಭಾರತದಲ್ಲಿ ವ್ಯಾಪಕವಾಗಿರುವ ಸಕ್ಕರೆ ಕಾಯಿಲೆ ಮತ್ತು ಹೃದ್ರೋಗಗಳಂತಹ ಅಸಾಂಕ್ರಾಮಿಕ ವ್ಯಾಧಿಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳ ಪರಿಹಾರಕ್ಕೆ ಸಾಕಷ್ಟು ಹೂಡಿಕೆ ಮಾಡದೆ ಹೋದರೆ ದೊಡ್ಡ ದುರಂತ ಕಾದಿದೆ ಎಂದು ಎಚ್ಚರಿಕೆ ನೀಡಿದೆ. ಚುನಾವಣೆಗಳ ಕಾಲದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವ ದಿಕ್ಕಿನಲ್ಲಿ ಯಾವುದೇ ಕ್ರಮ ಕೈಗೊಳ್ಳದಿರುವ ಕುರಿತು ಮೋದಿಯನ್ನು ಪ್ರಶ್ನಿಸಿದೆ. ಆರೋಗ್ಯವು ರಾಷ್ಟ್ರೀಯ ಭದ್ರತೆಯ ವಿಷಯವಾಗಿದೆಯಾದರೂ ಮೋದಿ ಅದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಹೇಳಿದೆ. ಈ ಕುರಿತು ಸರ್ಕಾರ ಯಾವುದೇ ಹೊಸ ನೀತಿಗಳನ್ನು ರೂಪಿಸಿಲ್ಲ, ಸಾರ್ವಜನಿಕವಾಗಿ ಬದ್ಧತೆ ತೋರಿಸುತ್ತಿಲ್ಲ, ಆರೋಗ್ಯ ಕ್ಷೇತ್ರಕ್ಕೆ ಆರ್ಥಿಕ ಸಹಾಯ ಒದಗಿಸುವ ಬಗ್ಗೆ ಯಾವ ಭರವಸೆಯನ್ನೂ ನೀಡುತ್ತಿಲ್ಲ ಎಂದು 'ಲ್ಯಾನ್ಸೆಟ್'ನ ಪ್ರಧಾನ ಸಂಪಾದಕ ರಿಚರ್ಡ್ ಹಾರ್ಟನ್ ಗಂಭೀರ ಆರೋಪ ಮಾಡಿದ್ದಾರೆ.

'ಲ್ಯಾನ್ಸೆಟ್' ವರದಿಯ ಪ್ರಕಾರ ಮೇ 2014ರ ತರುವಾಯ ಭಾರತದಲ್ಲಿ ಆರೋಗ್ಯ ಪೂರ್ತಿ ನಾಪತ್ತೆಯಾಗಿದೆ. ಇಂದು ಪ್ರಪಾತದ ಅಂಚಿನಲ್ಲಿ ನಿಂತಿರುವ ಭಾರತ ದೇಶದ ಆರೋಗ್ಯ ಕ್ಷೇತ್ರಕ್ಕೆ ಗಮನ ನೀಡದೆ ಹೋದರೆ ಜನಸಂಖ್ಯೆ ಏರಿಕೆಯೊಂದಿಗೆ ಆರ್ಥಿಕತೆಯ ಭಾರವನ್ನು ಹೊರಲು ಅಸಾಧ್ಯವಾಗಲಿದೆ. ಭಾರತದಲ್ಲಿ ಸರಕಾರಿ ಮತ್ತು ಖಾಸಗಿ ಕ್ಷೇತ್ರಗಳ ನಡುವೆ ತೀವ್ರ ಅಸಮತೋಲನ ಇದೆ. ಖಾಸಗಿ ಕ್ಷೇತ್ರ ಅನಿಯಂತ್ರಿತವಾಗಿ ಬೆಳೆಯುತ್ತಿದೆ. ಆರೋಗ್ಯ ಸೇವೆಗಳ ಗುಣಮಟ್ಟ ಅಧೋಗತಿಯಲ್ಲಿದೆ. ಈ ಹೊತ್ತು ಭಾರತದ ಮುಂದೆ ಎರಡು ಆಯ್ಕೆಗಳಿವೆ. ಒಂದು, ತನ್ನ ಪ್ರಜೆಗಳ ಆರೋಗ್ಯಕ್ಕಾಗಿ ಅವಶ್ಯವಿರುವ ಹೂಡಿಕೆ ಮಾಡುವುದು. ಎರಡು, ಸಮಸ್ಯೆಯನ್ನು ನಿರ್ಲಕ್ಷಿಸುತ್ತ ಸಾಗುವುದು. ಮೊದಲನೆಯ ಮಾರ್ಗವನ್ನು ಆರಿಸಿದರೆ ದೇಶದ ಭವಿಷ್ಯ ಉಜ್ವಲವಾಗಲಿದೆ. ಆದರೆ ಆರೋಗ್ಯ ಕ್ಷೇತ್ರವನ್ನು ನಿರ್ಲಕ್ಷಿಸಿದರೆ ದೇಶದಲ್ಲಿ ಸಾಂಕ್ರಾಮಿಕ ರೋಗಗಳು ತಲೆದೋರಲಿವೆ; ರಾಷ್ಟ್ರದ ಭದ್ರತೆ ನಾಶವಾಗಲಿದೆ; ದೇಶಕ್ಕೆ ಭವಿಷ್ಯ ಇಲ್ಲದಂತಾಗಲಿದೆ.

ಸರ್ವರಿಗೂ ಆರೋಗ್ಯಭಾಗ್ಯ ಒದಗಿಸುವ ವಿಷಯದಲ್ಲಿ ಮೋದಿ ಸರ್ಕಾರ ಏನೇನೂ ಮಾಡಿಲ್ಲ, ಭಾರತದ ಸಮಸ್ಯೆ ಏನೆಂದರೆ ಆರೋಗ್ಯ ಇವತ್ತು ರಾಜಕೀಯ ಅಜೆಂಡಾದ ಒಂದು ಅಂಶವೇ ಆಗಿಲ್ಲ. ಹಿಂದಿನ ಸರಕಾರಗಳು ಹೆಚ್ಚೇನೂ ಮಾಡದೆ ಹೋದರೂ ಕನಿಷ್ಠಪಕ್ಷ ಆರೋಗ್ಯವನ್ನು ಅಜೆಂಡಾದ ಒಂದು ಭಾಗವಾಗಿ ಮಾಡಿದ್ದವು. ಆದರೆ ಮೋದಿ ಸರ್ಕಾರದ ಕಾಲದಲ್ಲಿ ಅದು ಸಂಪೂರ್ಣವಾಗಿ ಮಾಯವಾಗಿರುವುದರಿಂದ ಭಾರತೀಯ ಪ್ರಜೆಗಳ ಪಾಲಿಗೆ ಬಹಳ ದೊಡ್ಡ ಹತಾಶೆಯ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರತದಲ್ಲಿ ಪ್ರತಿವರ್ಷ ಐದು ವರ್ಷಕ್ಕಿಂತ ಕೆಳಗಿನ 6 ಲಕ್ಷ ಮಕ್ಕಳು ಸಾವಿಗೀಡಾಗುತ್ತಿದ್ದಾರೆ. ಇದು ವಿಶ್ವದಲ್ಲೇ ಅತಿ ಹೆಚ್ಚಿನ ಸಂಖ್ಯೆಯಾಗಿದ್ದು ಇದಕ್ಕಾಗಿ ಇಡೀ ದೇಶ ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ. ನಾಗರಿಕ ಸಮಾಜವೊಂದನ್ನು ಅದರ ತಾಯಿ, ಮಕ್ಕಳ ಆರೋಗ್ಯದ ವಿಚಾರದಲ್ಲಿ ಗುರುತಿಸಲಾಗುತ್ತದೆ. ನಾಗರಿಕ ಸಮಾಜ ತನ್ನ ತಾಯಂದಿರು ಮತ್ತು ಹೆಣ್ಣುಮಕ್ಕಳನ್ನು ಸಾಯಲು ಬಿಡಬಾರದು. ಭಾರತ ವಿಶ್ವದ ಆಗುಹೋಗುಗಳಲ್ಲಿ ಇನ್ನಷ್ಟು ಹೆಚ್ಚಿನ ಪಾತ್ರ ವಹಿಸಲು ಆಸಕ್ತವಾಗಿದೆ; ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯನಾಗಬಯಸುತ್ತಿದೆ. ಆದರೆ ಯಾವ ದೇಶ ತನ್ನ ತಾಯಂದಿರನ್ನು ಹಾಗೂ ಮಕ್ಕಳನ್ನು ಬದುಕಿಸದ ಬೇಗೆಯಿಂದ ಸಾಯಲು ಬಿಡುತ್ತದೋ ಅದಕ್ಕೆ ವಿಶ್ವ ನಾಯಕನೆಂದು ಕರೆದುಕೊಳ್ಳುವ ಅರ್ಹತೆ ಇಲ್ಲವೆಂದು ಸ್ಪಷ್ಟವಾಗಿ ಹೇಳುವ ಈ ವರದಿ ಇದೇ ಡಿಸೆಂಬರ್ 11ರಂದು ಬಿಡುಗಡೆಗೊಳ್ಳಲಿದೆ.

(ಆಧಾರ: www.huffingtonpost.in hhttp://www.huffingtonpost.in; Times Of India)



ದಿಲ್ ಕಾ ರಾಜಾ

ರಮ್ಯಾ ನಟನೆಯ 'ದಿಲ್ ಕಾ ರಾಜಾ' ಶೂಟಿಂಗ್ ನಿಲ್ಲಿಸಿ ಎರಡೂವರೆ ವರ್ಷಗಳೇ ಕಳೆದಿವೆ. ರಮ್ಯಾ ರಾಜಕಾರಣದ ಹಾದಿ ಹಿಡಿಯುತ್ತಿದ್ದಂತೆಯೇ ಶೂಟಿಂಗ್ ಪ್ಯಾಕ್‌ಅಪ್ ಆಯಿತು. ಈವರೆಗೂ ಚಿತ್ರೀಕರಣದ ಬಗ್ಗೆ ನಿರ್ದೇಶಕರು ಯೋಚನೆಯನ್ನೇ ಮಾಡುತ್ತಿಲ್ಲ. ಕಾರಣ ರಮ್ಯಾ ಮೇಡಂ ಕಾಲ್‌ಶೀಟ್ ಸಿಗುತ್ತಿಲ್ಲ.

ಸಿನಿಮಾದ ಚಿತ್ರೀಕರಣ ಶೇಕಡಾ 90ರಷ್ಟು ಆಗಿದೆ. ಕ್ಲೈಮ್ಯಾಕ್ಸ್ ಶೂಟಿಂಗ್ ಮತ್ತು ಎರಡು ಹಾಡುಗಳ ಚಿತ್ರೀಕರಣ ಮುಗಿದರೆ, ಸಿನಿಮಾವನ್ನು ತೆರೆಗೆ ತರಬಹುದು. ಹತ್ತು ದಿನಗಳ ಕಾಲ ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲು ರಮ್ಯಾ ಅವರಿಗೆ ಪುರುಸೊತ್ತು ಸಿಗುತ್ತಿಲ್ಲ. ಹೀಗಾಗಿ ನಿರ್ಮಾಪಕ ಕಂ ನಿರ್ದೇಶಕ ಪಾಟೀಲ್, ಮನೆಯ ಹಾದಿ ಹಿಡಿದಿದ್ದಾರೆ. ಈಗಾಗಲೇ ಚಿತ್ರಕ್ಕೆ ಎರಡು ಕೋಟಿ ರೂಪಾಯಿ ಖರ್ಚಾಗಿದೆ. ರಮ್ಯಾರನ್ನು ರಿಪ್ಲೇಸ್ ಮಾಡಿದರೆ, ಇನ್ನೂ ಒಂದೂವರೆ ಕೋಟಿ ಖರ್ಚಾಗುತ್ತದೆ. ಮೊದಲ ಪ್ರತಿ ಸಿದ್ಧವಾಗಿ, ಥಿಯೇಟರ್‌ಗೆ ಬರಲು ಇನ್ನೊಂದು ಕೋಟಿ ಬೇಕು. ನಾಲ್ಕೂವರೆ ಕೋಟಿ ಖರ್ಚಾದರೆ, ಅದನ್ನು ವಾಪಸ್ಸು ತರುವ ಶಕ್ತಿ ಚಿತ್ರದ ನಾಯಕ ಪಜ್ವಲ್‌ಗೆ ಇಲ್ಲ. ಹೀಗಾಗಿ ನಿರ್ದೇಶಕರು ತಲೆಮೇಲೆ ಕೈ ಹೊತ್ತು ಕೂತಿದ್ದಾರೆ. ರಮ್ಯಾ ಮೇಡಂ ಎಲ್ಲದಕ್ಕೂ ಮನಸು ಮಾಡಬೇಕಷ್ಟೆ.



ರಾಕ್‌ಲೈನ್ ಬ್ಯಾನರ್‌ನಲ್ಲಿ ಗಣೇಶ್




ಸದ್ಯ ಮೂರ್‍ನಾಲ್ಕು ಚಿತ್ರಗಳ ಶೂಟಿಂಗ್‌ನಲ್ಲಿ ಬಿಜಿ ಆಗಿರುವ ಗಣೇಶ್, ಮತ್ತೊಂದು ಚಿತ್ರಕ್ಕೆ ಸಹಿ ಹಾಕಿದ್ದಾರೆ. ಈ ಸಿನಿಮಾದನ್ನು ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಮಾಡಲಿದ್ದಾರೆ. ಕನ್ನಡ ಸಿನಿರಂಗದಿಂದ ರಾಕ್‌ಲೈನ್ ದೂರ ಆಗಿದ್ದಾರೆ ಎನ್ನುವ ಆರೋಪವಿತ್ತು. ಅದಕ್ಕೆ ಕಾರಣ ಅವರು ತೆಲುಗು ಮತ್ತು ಹಿಂದಿ ಸಿನಿಮಾಗಳ ನಿರ್ಮಾಣದಲ್ಲಿ ತೊಡಗಿಕೊಂಡಿದ್ದು. ಆದರೀಗ ಅವರು ಮತ್ತೆ ಕನ್ನಡದ ಚಿತ್ರವನ್ನು ತಯಾರಿಸುತ್ತಿದ್ದಾರೆ.

ತೆಲುಗಿನ ರಿಮೇಕ್ ಚಿತ್ರ ಇದ್ದಾಗಿದ್ದು, ಗಣೇಶ್ ಅವರಿಗೆ ಕತೆ ಹೇಳಿ ಒಪ್ಪಿಸಿದ್ದಾರೆ. ನಿರ್ದೇಶಕರ ಹುಡುಕಾಟ ನಡೆದಿದೆ. ಸದ್ಯ ಗಣೇಶ್ 'ಪಟಾಕಿ' ಮತ್ತು 'ಮುಂಗಾರು ಮಳೆ-2' ಚಿತ್ರದಲ್ಲಿ ಬಿಜಿ ಆಗಿರುವುದರಿಂದ ಈ ಚಿತ್ರಗಳ ನಂತರ ಹೊಸ ಸಿನಿಮಾದಲ್ಲಿ ನಟಿಸುವ ಸಾಧ್ಯತೆ ಇದೆ.

ದಿಗಂತ್ ಕನಸು ಭಗ್ನ

ಕೆನ್ನೆಗುಳಿ ಕಲಾವಿದ ದಿಗಂತ್ ಬಾಲಿವುಡ್‌ನಲ್ಲಿ ನಟಿಸಿದ್ದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಆಗಿತ್ತು. ಪ್ರಚಾರಪ್ರಿಯ ದಿಗಂತ್ ಕೂಡ ಚಿತ್ರದ ಬಗ್ಗೆ ಭಾರೀ ಪ್ರಚಾರ ಗಿಟ್ಟಿಸಿಕೊಂಡಿದ್ದರು. 'ವೆಡ್ಡಿಂಗ್ ಪಲಾವ್' ಹೆಸರಿನ ಸಿನಿಮಾದ ಮೂಲಕ ಬಾಲಿವುಡ್‌ನಲ್ಲಿ ಗಟ್ಟಿಯಾಗಿ ನಿಲ್ಲುತ್ತೇನೆ ಎಂಬ ಭರವಸೆಯ ಮಾತುಗಳನ್ನು ಆಡಿದ್ದರು. ಆದರೆ ಪಲಾವ್ ಅಂದುಕೊಂಡಷ್ಟು ರುಚಿಯಾಗಿಲ್ಲ. ಹೀಗಾಗಿ ಒಂದೇ ವಾರಕ್ಕೇ ಥಿಯೇಟರ್‌ನಿಂದ ಚಿತ್ರ ಎತ್ತಂಗಡಿ ಆಗಿದೆ.



ನಿರ್ದೇಶಕ ಯೋಗರಾಜ್ ಭಟ್ ಗರಡಿಯಲ್ಲಿ ಬೆಳೆದಿರುವ ದಿಗಂತ್‌ಗೆ ತನ್ನ ಸಾಮರ್ಥ್ಯ ಏನು ಎನ್ನುವುದರ ಅರಿವಿದೆ. ಬಾಲಿವುಡ್‌ನಲ್ಲಿ ಅವಕಾಶ ಸಿಕ್ಕಿದೆ ಅನ್ನುವ ಕಾರಣಕ್ಕೆ ಸಾಮರ್ಥ್ಯವನ್ನೂ ಮೀರಿದ ಕೆಲಸ ಮಾಡಿದ್ದಾರೆ. ಅದೇ ಅವರಿಗೆ ಮುಳುವಾಗಿದೆ.

ದಿಗಂತ್ ಅವರ ಸ್ಟ್ರೆಂತ್ ಡೈಲಾಗ್ ಹೇಳುವ ಶೈಲಿ ಮತ್ತು ಉಡಾಫೆ ಪಾತ್ರ. 'ವೆಡ್ಡಿಂಗ್ ಪಲಾವ್' ಸಿನಿಮಾದಲ್ಲಿ ಎರಡೂ ಇಲ್ಲ. ಹೀಗಾಗಿಯೇ ದಿಗಂತ್ ಬಾಲಿವುಡ್ ಪ್ರೇಕ್ಷಕರಿಗೆ ಇಷ್ಟವಾಗಿಲ್ಲ.

ಮೀಡಿಯಾಗೆ ಶರಣಾದ ದರ್ಶನ್

'ಐರಾವತ' ಸಿನಿಮಾ ಬಿಡುಗಡೆಯ ನಂತರ ಮೀಡಿಯಾದ ಮೇಲೆ ದರ್ಶನ್ ಗರಂ ಆಗಿದ್ದರು. ಪತ್ರಕರ್ತರ ಮೇಲೆ ಯಾವಾಗಲೂ ಕೋಪಿಸಿಕೊಳ್ಳುವ ದರ್ಶನ್ ಈ ಬಾರಿ ಇನ್ನಷ್ಟು ಸಿಡಿದೆದ್ದಿದ್ದರು. ಅಭಿಮಾನಿಗಳು ಇರುವತನಕ ತನಗೆ ಯಾರೂ ಏನೂ ಮಾಡೋಕೆ ಆಗಲ್ಲ ಅನ್ನುವ ಮಾತುಗಳನ್ನೂ ಆಡಿದ್ದರು. ಆದರೆ 'ಐರಾವತ' ಚಿತ್ರವನ್ನು ಅಭಿಮಾನಿಗಳೇ ತಿರಸ್ಕರಿಸಿದ್ದಾರೆ. ಸಿನಿಮಾ ವಿಮರ್ಶೆಯನ್ನು ಪುರಸ್ಕರಿಸಿದ್ದಾರೆ. ಹೀಗಾಗಿ ದರ್ಶನ್ ಬೆವೆತಿದ್ದಾರೆ.

'ಐರಾವತ' ಚಿತ್ರ ಅಂದುಕೊಂಡಷ್ಟು ಬಾಕ್ಸ್ ಆಫೀಸ್‌ನಲ್ಲಿ ಗೆದ್ದಿಲ್ಲ. ಹಾಕಿದ ಬಂಡವಾಳಕ್ಕೂ ಮೋಸ ಆಗಿದೆ. ಅಲ್ಲದೇ ಹಿಂದಿನ 'ಅಂಬರೀಷ' ಚಿತ್ರವೂ ಪ್ರೇಕ್ಷಕರನ್ನು ನಿರಾಸೆಗೊಳಿಸಿದೆ. 'ಜಗ್ಗುದಾದ' ಸಿನಿಮಾದ ಬಗೆಗೂ ನೆಗೆಟಿವ್ ಮಾತು ಕೇಳಿಬರುತ್ತಿದೆ. ಹೀಗಾಗಿ ದರ್ಶನ್ ಭಯಗೊಂಡಿದ್ದಾರೆ. ತಾವೇ ಪತ್ರಕರ್ತರಿಗೆ ಕಾಲ್ ಮಾಡಿ, ಪ್ರತಿ ಚಾನೆಲ್‌ಗೂ ಸಂದರ್ಶನ ನೀಡುತ್ತಿದ್ದಾರೆ.



ಕೈಕೊಟ್ಟ ಗಾಂ

ಮಳೆ ಹುಡುಗಿ ಪೂಜಾ ಗಾಂಧಿ ಬಿಗ್‌ಬಾಸ್ ಸೇರಿಕೊಂಡಿದ್ದಾಯಿತು. ಅವರು ಈ ರಿಯಾಲಿಟಿ ಶೋನಲ್ಲಿ ಗೆದ್ದು ಬರುತ್ತಾರೋ ಇಲ್ಲವೋ, ಬಂದ ಮೇಲಂತೂ ಸುಖ್ ಸುದ್ದಿ ಆಗುತ್ತಾರೆ. ಕಾರಣ, ವಾರ ಬಿಡುಗಡೆ ಆಗುತ್ತಿರುವ ತಿಪ್ಪಜ್ಜಿ ಸರ್ಕಲ್ ವಿವಾದ.

ಈ ಚಿತ್ರಕ್ಕೆ ಪೂಜಾ ಗಾಂಧಿ ನಾಯಕಿ. ಬಿಡ ಟೈಮ್‌ನಲ್ಲಿ ಇವರು ಬಿಗ್‌ಬಾಸ್ ಮನೆಯಲ್ಲಿ ಬಂಧಿಯಾಗಿದ್ದಕ್ಕೆ ನಿರ್ಮಾಪಕರು ಗರಂ ಆಗಿದ್ದಾರೆ. ಈಗಾಗಲೇ ಕೋಟಿ ಕೋಟಿ ಕಳೆದುಕೊಂಡಿರುವ ನಿರ್ಮಾಪಕ ಶವ ಪೂಜಾ ಗಾಂಧಿ ವಿರುದ್ಧ ಚಲನಚಿತ್ರ ವಾಣಿಜ್ಯ ಮಂಡಳಿಗೆ ದೂರು ನೀಡಿದ್ದಾರೆ. ತಮ್ಮ ಹತ್ತಿರ ಸಾಲ ತೆಗೆದುಕೊಂಡಿರುವ ಪೂಜಾ, ಅ ವಾಪಸ್ಸು ಮಾಡಿಲ್ಲ. ಅಲ್ಲದೇ ಸಿನಿಮಾ ರಿಲೀಸ್ ವೇಳೆಯಲ್ಲಿ ಪ್ರಚಾ ಬಂದಿಲ್ಲ. ಆಗುವ ನಷ್ಟವನ್ನು ಅವರೇ ತುಂಬಿಕೊಡಬೇಕು ಎಂದು ಸಿನಿಮಾ ರಿಲೀಸ್ ಆಗುವ ಮುಂಚೆಯೇ ದೂರು ನೀಡಿದ್ದಾರೆ. ಬಿಗ್‌ಬಾಸ್ ಮನೆಯಿಂದ ಬಂದ ತಕ್ಷಣವೇ ಕರೆದು ವಿಚಾರಿಸಬೇಕು ಎಂದು ಕೇಳಿಕೊಂಡಿದ್ದಾರೆ. ಹೀಗಾಗಿ ಶರ್ಮಾ ಮತ್ತು ಪೂಜಾ ಗ ಇಲ್ಲಿಗೆ ನಿಲ್ಲುವಂತೆ ಕಾಣುತ್ತಿಲ್ಲ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com